ದುಡಿವ ಜನರ ಪ್ರಾಣ ಮಿತ್ರ

ಐಕ್ಯರಂಗ


ಸಂಪುಟ 26 ಸಂಚಿಕೆ 36 ಸೆಪ್ಟೆಂಬರ್ 5, 2004 ಬೆಲೆ ರೂ. 3.00



ಮಣಿಪುರ
ಸೈನಿಕರ ದೌರ್ಜನ್ಯ




ಮಾಡಿದ್ದುಣ್ಣೋ ಮಹರಾಯ್ತಿ!



ಬಿಜೆಪಿ ಬಂದ್‌ಗೆ ಜನರ ತಿರಸ್ಕಾರ

ಕಾರ್ಮಿಕರು ಸೆಪ್ಟೆಂಬರ್ 2ರ ಹೋರಾಟದತ್ತ...



- ಕನಕನಿಲ್ಲಿ ಮಾರಾಟಕ್ಕಿದ್ದಾನೆ
- ಎಲ್ಲರಿಗೂ ಬೇಕಾದ ನಕ್ಸಲೀಯರು !
- ಶ್ರೀನಿವಾಸಬಜಾಲ್ ಹತ್ಯೆ ಆರೋಪಿಗಳಿಗೆ ಜೀವಾವಧಿ ಶಿಕ್ಷೆ
- ಕನ್ನಡ ಚಿತ್ರೋದ್ಯಮ : ಹೀನಾಯ ಸ್ಥಿತಿಗೆ ಯಾರು ಹೊಣೆ ?

ಕನಕ ಗೋಪುರ ವಿವಾದ

ಕನಕನಿಲ್ಲಿ ಸ್ಮಾರಕಕ್ಕಿದ್ದಾನೆ

ಇತ್ತೀಚೆಗೆ ಉಡುಪಿ, ರಾಜ್ಯಾದ್ಯಂತ ಪತ್ರಿಕೆಗಳ ಸುದ್ದಿ ಮಾಧ್ಯಮದವರ ವಾರ್ತೆಗೆ ಆಹಾರವಾಗಿತ್ತು. ದಿನಾಂಕ 12 ರಂದು ಉಡುಪಿ ಮಠದ ಪರಿಸರದಲ್ಲಿ ಒಂದು ಅಸಹನೀಯ ವಾತಾವರಣದಲ್ಲಿ, ತಲೆಮಾರಿನಷ್ಟು ಹಳೆಯದಾದ ಕನಕ ಗೋಪುರವನ್ನು ಕೆಡವಿ ಹಾಕಲಾಯ್ತು. ಘಟನೆಯನ್ನು ರಾಜ್ಯದ ನಾನಾ ಪತ್ರಕರ್ತರು ಬರೆದರಾದರೂ, ಯಾರೂ ಕೂಡ ಪ್ರಕರಣದ ನೈಜ ಸ್ವರೂಪವನ್ನು ಜನತೆಯ ಮುಂದಿಡಲು ಸಫಲರಾಗಲಿಲ್ಲ. ಇದಕ್ಕೆ ಕಾರಣ ಯಾರೂ ಕೂಡ ಘಟನೆಯ ಒಳಮರ್ಮವನ್ನು ಅರಿಯುವ ಪ್ರಯತ್ನ ಮಾಡದಿದ್ದುದು. ಕೆಲ ಬುದ್ಧಿಜೀವಿ ಪ್ರಗತಿಪರ ಬ್ರಾಂಡಿನ ಪತ್ರಕರ್ತರು ನಿಜಕ್ಕೂ ಓದುಗರ ಹಾದಿ ತಪ್ಪಿಸಿದ್ದು ಖೇದಕರ ಸಂಗತಿ. ಉಡುಪಿಯ ಜಗದ್ಗುರು ವಿಶ್ವೇಶ ತೀರ್ಥರೂ ಸೇರಿದಂತೆ ಅಷ್ಟಮಠಗಳ ಎಲ್ಲಾ ಹಿರಿ-ಕಿರಿಯ ಯತಿವರೇಣ್ಯರ ಪರಮಾರ್ಥ ಜಿಜ್ಞಾಸೆಯನ್ನು ನಿಯಂತ್ರಿಸುವ ಮತ್ತು ಮೀರಿಸುವ ಒಂದು ಅಂಶವಿದೆ. ಅದು ಅರ್ಥಜಿಜ್ಞಾಸೆ. ಇನ್ನು ಚೆನ್ನಾಗಿ ಹೇಳಬೇಕೆಂದರೆ, ಧನದಾಹ. ಲಾಗಾಯ್ತಿನಿಂದಲೂ ಕುರುಬ ಜನಾಂಗದ ಕನಕನನ್ನು ಮಠದ ವರ್ಗ ವ್ಯಾಪಾರೀ ದೃಷ್ಟಿಕೋನದಿಂದ ಬಳಸಿಕೊಂಡಿದೆ. ಕನಕ ಮಂದಿರ, ಕನಕನ ಕಿಂಡಿಯ ವಿವಾದ ಮತ್ತು ಈಗ ಕನಕ ಗೋಪುರದ ವಿಚಾರ ಹೀಗೆ ಕನಕ ಸಂಬಂಧಿತ ಘಟನೆಗಳು ಉಡುಪಿಯ ಇತಿಹಾಸದಲ್ಲಿ ನಡೆದಿರುವುದು ಕೇವಲ ಸಂಪತ್ತಿನ ಕ್ರೋಢೀಕರಣಕ್ಕಾಗಿಯೇ ಹೊರತು ಇದರಲ್ಲಿ ಭಕ್ತಿಯ ಗಂಧವಿಲ್ಲ.

ಕನಕ ಇಲ್ಲಿಗೆ ಬಂದು ಹೋದ
ಹುಂಡಿ-ಕಿಂಡಿ ಬಿಟ್ಟು ಹೋದ


ಇವು ಖ್ಯಾತ ಚಿಂತಕ ಡಾ.ಅಕ್ಕಿ ಮಣಿಪಾಲ್‌ರವರ ಕವಿತೆಯ ಸಾಲುಗಳು. ಉಡುಪಿ ಶ್ರೀಕೃಷ್ಣ ಮಠಕ್ಕೆ ಸಂಬಂಧಿಸಿದಂತೆ ತುಂಬಾ ತಾತ್ಪರ್ಯಯುತ ಸಾಲುಗಳಿವು. ಕುರುಬ ಕನಕನ ಹೆಸರ್ಹೇಳಿಕೊಂಡು ಇವತ್ತು ಉಡುಪಿ ಬ್ರಾಹ್ಮಣ ಮಠಾಧಿಪತಿಗಳು ಸಿರಿವಂತರಾಗಿದ್ದಾರೆ. ಇವರ ಹಣದಾಸೆಗೆ ಎಣೆಯಿಲ್ಲ. ಇಲ್ಲಿಗೆ ಮೂರ್‍ನಾಲ್ಕು ವರ್ಷಗಳ ಹಿಂದೆ ಪರ್ಯಾಯ ಪೀಠಾಧಿಪತಿಯಾಗಿ ಕಾರ್ಯನಿರ್ವಹಿಸಿದ್ದ ಪೇಜಾವರ ಮಠದ ವಿಶ್ವೇಶ ತೀರ್ಥಸ್ವಾಮಿ ಕನಕ ಮಂದಿರ ನಿರ್ಮಾಣದ ನೆಪ ಮುಂದೆ ಮಾಡಿ ಸರ್ಕಾರದಿಂದ ನಲವತ್ತು ಲಕ್ಷ ರೂಪಾಯಿ ಹಣ ಕಿತ್ತಿದ್ದರು. ಒಂದು ಹಂತದಲ್ಲಿ ಈ ಮೊತ್ತ ಕೈತಪ್ಪಿ ಹೋಗುವ ಸಂದಿಗ್ಧ ಪರಿಸ್ಥಿತಿ ನಿರ್ಮಾಣವಾಗಿದ್ದಾಗ ಪೇಜಾವರ ಶ್ರೀ ಮಾಡಿದ ಕಸರತ್ತು ಹೇಳತೀರದು. ಪೇಜಾವರಸ್ವಾಮಿ ಕನಕನ ಕಿಂಡಿ ವಿಚಾರದಲ್ಲಿ ಯಾವ ನಿಲುವು ಹೊಂದಿದ್ದರೋ, ಅದೇ ನಿಲುವನ್ನು ವಿದ್ವಾಂಸರಾದ ಬನ್ನಂಜೆ ಗೋವಿಂದಾಚಾರ್ಯರೂ ಹೊಂದಿದ್ದರು.

ಮಠದ ಕಡತಗಳಲ್ಲಿ ಕೃಷ್ಣನ ವಿಗ್ರಹ ಪಶ್ಚಿಮಾಭಿಮುಖವಾಗಿ ತಿರುಗಿತೆಂಬ ಉಲ್ಲೇಖವಿದೆ ಎಂದು ಈ ಇಬ್ಬರೂ ಮಹನೀಯರೂ ಹೇಳುತ್ತಿದ್ದ ಕಾಲವಿತ್ತು. ಉಡುಪಿಯಲ್ಲಿ ನಡೆದ ಜಿಲ್ಲಾ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಬನ್ನಂಜೆ ಗೋವಿಂದಾಚಾರ್ಯರು ತಾವು ಮಾಡಿದ ಅಧ್ಯಕ್ಷ ಭಾಷಣದಲ್ಲಿ ಈ ಅಭಿಪ್ರಾಯಕ್ಕೆ ದೂರವಾದ, ಸತ್ಯಕ್ಕೆ ಸ್ವಲ್ಪ ಮಟ್ಟಿಗೆ ಹತ್ತಿರ ನಿಲ್ಲುವ, ಇನ್ನೊಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಕೃಷ್ಣ ಕನಕನ ಪವಾಡದಿಂದ ಪೂರ್ವದಿಂದ ಪಶ್ಚಿಮಕ್ಕೆ ತಿರುಗಿದ್ದಲ್ಲ. ಕನಕ ಬಂದಾಗ ಆತನ ಭಕ್ತಿಗೆ ಕೃಷ್ಣ ಮೆಚ್ಚಿ, ಅಲ್ಲಿನ ಗೋಡೆಯಲ್ಲಿ ಕಂಪನ ಉಂಟಾಗಿ ಬಿರುಕು ಬಿಟ್ಟು ಕಾಣಿಸಿಕೊಳ್ಳುವಂತಾಯಿತು.

ಬನ್ನಂಜೆಯವರು ಈ ಮಾತು ಹೇಳುವ ಹೊತ್ತಿಗೆ ಪೇಜಾವರ ಸ್ವಾಮಿಯವರ ಪರ್ಯಾಯ ಪೀಠಾವರೋಹಣದ ಅವಧಿ ಸಮೀಪಿಸಿತ್ತು. ಅವರಿಗೆ ತಮ್ಮ ಅವಧಿಯೊಳಗೆ ಕನಕ ಮಂದಿರ ನಿರ್ಮಾಣಗೊಳ್ಳಬೇಕಾದ ಜರೂರತ್ತಿತ್ತು. ಸರ್ಕಾರದಿಂದ ಬರಲಿಕ್ಕಿದ್ದ ನಲವತ್ತು ಲಕ್ಷ ರೂಪಾಯಿ ಎಲ್ಲಿ ಕೈ ಜಾರಿ ಹೋಗುವುದೋ ಎಂಬ ಆತಂಕ. ಇದರಿಂದಾಗಿ ಪೇಜಾವರದಲ್ಲಿ ಒಂದು ವಿಚಾರ ಹುಟ್ಟಿಕೊಂಡಿತು. ಮೇಲು ಜಾತಿಯವರ ಪವಾಡದಂತೆಯೇ ಕೆಳಜಾತಿಯವರ ಪವಾಡವನ್ನು ಒಪ್ಪಬೇಕೆನ್ನುವ ಹೊಸ ಕ್ರಾಂತಿಕಾರಿ ವಿಚಾರವೊಂದನ್ನು ಅವರು ಮಂಡಿಸಿಬಿಟ್ಟರು. ಸರ್ಕಾರದ ನಲವತ್ತು ಲಕ್ಷ ರೂಪಾಯಿಗಳಿಗಾಗಿ ಕುರುಬರ ಮತ್ತು ಇನ್ನಿತರ ಕೆಳಜಾತಿಯವರ ಮೌಢ್ಯವನ್ನು ತನ್ನ ಹೊಸ ಕ್ರಾಂತಿಕಾರಿ ಮಾತುಗಳಿಂದ ಪ್ರೋತ್ಸಾಹಿಸುತ್ತಿದ್ದರಾದರೂ ಅವರಿಗದು ಮುಖ್ಯವಾಗಿರಲಿಲ್ಲ.

ಅರ್ಥಜಿಜ್ಞಾಸೆ :

ಹೀಗೆ ಪರ್ಯಾಯ ಪೀಠಾರೋಹಣ ಮಾಡಿದ ಪ್ರತಿಯೊಬ್ಬ ಮಠಾಧಿಪತಿಯೂ ತನ್ನ ಪೀಠಾವರೋಹಣದೊಳಗೆ ಕೃಷ್ಣ ಮಠಕ್ಕೆ ಒಂದಿಷ್ಟು ಇಡುಗಂಟು ಮಾಡಿಡುವುದು ಬಹುಕಾಲದಿಂದಲೂ ನಡೆದು ಬಂದ ಪ್ರಕ್ರಿಯೆ ಮತ್ತು ಆ ಪ್ರಕ್ರಿಯೆ ಪ್ರತಿ ಪರ್ಯಾಯ ಮಠಾಧಿಪತಿಯ ಪ್ರತಿಷ್ಠೆಯ ಪ್ರಶ್ನೆಯೂ ಹೌದು. ಈ ಒಣಪ್ರತಿಷ್ಠೆ ಕಾಯ್ದುಕೊಳ್ಳುವುದಕ್ಕಾಗಿಯೇ ಪೇಜಾವರರ ನಂತರ ಪೀಠಾರೋಹಣ ಮಾಡಿದ ಮಠದ ಕಿರಿಯ ಯತಿ ವಿದ್ಯಾಧೀಶ ಸ್ವಾಮಿ ಶ್ರೀ ಕೃಷ್ಣರಿಗೆ ವೈಡೂರ್ಯ ಖಚಿತ ಕವಚ ಮಾಡಿಸುವ ಬಯಕೆ ತನ್ನದೆಂಬ ನೆಪ ಮುಂದೊಡ್ಡಿ ಒಂದಿಷ್ಟು ಲಕ್ಷ ಸಂಪತ್ತನ್ನು


ನೆಲಕ್ಕುರುಳುತ್ತಿರುವ ಕನಕ ಗೋಪುರ

ಕ್ರೋಢೀಕರಿಸಿದ್ದು. ಇಂತಹ ಪ್ರತಿಷ್ಠೆಯ ಜಾಡಿನಲ್ಲೇ ಈಗಿನ ಪರ್ಯಾಯ ಪೀಠಾಧಿಪತಿ ಅದಮಾರು ಮಠಾಧೀಶ ವಿಶ್ವಪ್ರಿಯ ತೀರ್ಥರೂ ಸಾಗಿದ್ದಾರೆ. ಕಳ್ಳನಿಗೊಂದು ಪಿಳ್ಳೆ ನೆವ ಎನ್ನುವಂತೆ ಹಣ ಸಂಗ್ರಹಿಸಲು ಒಂದು ನೆಪ-ಹೊಸ, ಎಪ್ಪತ್ತ ನಾಲ್ಕು ಅಡಿ ಎತ್ತರದ ಗೋಪುರ ಕಟ್ಟಿಸುವುದು. ಅದಕ್ಕಾಗಿ ಇರುವ ಗೋಪುರವನ್ನು ಬೀಳಿಸಲು ಇನ್ನೊಂದು ನೆಪ, ಅದು ಶಿಥಿಲವಾಗಿದೆ ಎನ್ನುವುದು. ಹೀಗೆ ಪೂರ್ವ ಸಂಯೋಜಿತ ಒಂದು ಹುನ್ನಾರದ ಫಲವಾಗಿ ಕನಕನ ಕಿಂಡಿಯ ಎದುರಿನ 94 ವರ್ಷಗಳ ಹಿಂದಿನ ಹಳೆಯ ಉಡುಪಿ ಶೈಲಿಯಲ್ಲಿ ನಿರ್ಮಿಸಲಾದ ಕಟ್ಟಲಾಗುವ 74 ಅಡಿಗಳಷ್ಟು ಎತ್ತರದ ಭವ್ಯ ಗೋಪುರಕ್ಕೆ ಶಿಲಾನ್ಯಾಸವೂ ನಡೆದಿದೆ.

ವಿವಾದ, ಪ್ರತಿಭಟನೆ, ಶಮನ:

ಕನಕ ಗೋಪುರಕ್ಕೆ ಸಂಬಂಧಪಟ್ಟಂತೆ ಬೇರೆ-ಬೇರೆ ದಿಕ್ಕುಗಳಿಂದ ಹರಿದು ಬಂದ ಬುದ್ಧಿಜೀವಿ ಬ್ರಾಂಡಿನ ಇತಿಹಾಸಕಾರರ ಅಭಿಪ್ರಾಯಗಳು ಗೋಪುರ ವಿವಾದದ ಕೇಂದ್ರ ಸಮೂಹವಾದ ಕುರುಬರು ಮತ್ತು ಗೋಪುರದೊಡನೆ ಭಾವನಾತ್ಮಕ ಸಂಬಂಧ ಹೊಂದಿದ್ದ ಪರಿಸರದ ಜನತೆಯನ್ನು ಹಾದಿ ತಪ್ಪಿಸುವ ಪ್ರಯತ್ನಗಳಂತಾದವು. ಕೆಲವರು ಅಭಿಪ್ರಾಯ ಪಡುವಂತೆ ಕನಕ ಗೋಪುರ ನಾಲ್ಕು ನೂರು ವರ್ಷಗಳಷ್ಟು ಹಳೆಯದು ಎಂಬುದಾಗಲೀ, ರಾಜ ಶ್ರೀ ಕೃಷ್ಣದೇವರಾಯನ ಕಾಲದಲ್ಲಿ ನಿರ್ಮಿಸಲಾದದ್ದು ಎಂಬುದಾಗಲೀ, ಮಧುರೈನ

ಪ್ರಭಾಕರ ನೇರಳಕಟ್ಟೆ

ಮೀನಾಕ್ಷಿ, ಹಂಪಿಯ ವಿರೂಪಾಕ್ಷ, ತಂಜಾವೂರು ಬೃಹದೇಶ್ವರ, ಮೈಸೂರು ಚಾಮುಂಡೇಶ್ವರಿ, ನಂಜನಗೂಡು ನಂಜುಂಡೇಶ್ವರ ದೇವಾಲಯಗಳ ಮಾದರಿಯಲ್ಲಿ, ಪಕ್ಕಾ ವಿಜಯನಗರ ಶೈಲಿಯಲ್ಲಿ ರಚಿತವಾದದ್ದು ಎಂಬುದಾಗಲಿ ಸತ್ಯಕ್ಕೆ ದೂರವಾದದ್ದು ಮತ್ತು ಇದಕ್ಕೆ ಯಾವುದೇ ದಾಖಲೆಗಳ ಲಭ್ಯತೆ ಇರುವುದಿಲ್ಲ. ಗೋಪುರ ಕೆಡವಲಾಗುವ ವಿಷಯ ತಿಳಿದು ಇದನ್ನೊಂದು ರಂಪವನ್ನಾಗಿಸಲು ಹೊರಟವರು ಇಲ್ಲಿನ ರಥಬೀದಿ ಗೆಳೆಯರು ಸಂಸ್ಥೆಯ ಕೆಲವು ಬುದ್ಧಿಜೀವಿ ಬ್ರಾಂಡಿನವರು. ಘಟನೆಯ ಸರಿಯಾದ ತಿಳುವಳಿಕೆ ಇಲ್ಲದ ಇವರು ಕುರುಬರ ಸಮುದಾಯಕ್ಕೆ ಬ್ರಾಹ್ಮಣ ಮಠಾಧಿಪತಿಗಳಿಂದ ಆಗುತ್ತಿರುವ ಅನ್ಯಾಯ ಇದೆಂದು ಬಗೆದರು. ಇನ್ನೊಂದಿಷ್ಟು ಜನ ಕೆಲವು ಕುರುಬ ನಾಯಕರನ್ನು ಮಠದವರ ವಿರುದ್ಧ ಎತ್ತಿಕಟ್ಟಿದರು. ಕುರುಬರ ಸಮುದಾಯ ಇದನ್ನೇ ನಂಬಿ ಪ್ರತಿಭಟನೆ ಕೈಗೆತ್ತಿಕೊಂಡಿತು. ಅಷ್ಟಾಗುವ ಹೊತ್ತಿಗೆ ಮೈಸೂರಿನಿಂದ ಮತ್ತು ಕೆಲವು ಹೊರ ಪ್ರದೇಶಗಳಿಂದಲೂ ಕುರುಬರ ಸಮುದಾಯದವರು ಮತ್ತು ನಾಯಕರು ಬರತೊಡಗಿದರು. ಬೆಂಗಳೂರಿನಿಂದ ಕಾಂಗ್ರೆಸ್‌ನ ರೇವಣ್ಣ, ಬಿಜೆಪಿಯ ಈಶ್ವರಪ್ಪ ಪಕ್ಷಬೇಧ ತೊರೆದು ಕುರುಬರಾಗಿ ಜೊತೆಯಾದರು. ಪ್ರಕರಣ ಈ ಮಟ್ಟಕ್ಕೆ ಬೆಳೆದು, ಉಡುಪಿ ಸುದ್ದಿಯಾಗುತ್ತಿರುವುದನ್ನು ಕಂಡ ಮಠದವರು ಈಶ್ವರಪ್ಪ, ರೇವಣ್ಣ ಮತ್ತು ಕೆಲವು ಕುರುಬ ಮುಖಂಡರನ್ನು ಮಠದ ಒಳಗೆ ಕರೆಸಿಕೊಂಡು ಅವರ ತಲೆ ಸವರಿದರು. ಈ ನಾಯಕರು ತಮ್ಮನ್ನು ಮಠದ ಒಳಗೆ ಕರೆಸಿಕೊಂಡಿದ್ದರಿಂದಲೇ ಸಂತಸಗೊಂಡು ತಾವು ಪ್ರತಿಭಟನಾಕಾರರೆನ್ನುವುದನ್ನೂ ಮರೆತರು. ಒಟ್ಟಾರೆ, ಕುರುಬರ ನಾಯಕರು ಮತ್ತು ಮಠಾಧೀಶರ ನಡುವೆ ನಡೆದ ಅಪೂರ್ಣ ಮಾತುಕತೆಯಲ್ಲಿ ಅಸಮರ್ಪಕ ನಿಲುವುಗಳನ್ನು ತಾಳಿ ಕುರುಬ ನಾಯಕರು ಹೊರಬಂದರು. ಹೊಸದಾಗಿ ನಿರ್ಮಾಣಗೊಳ್ಳಲಿರುವ ಎಪ್ಪತ್ನಾಲ್ಕು ಅಡಿ ಎತ್ತರದ ಗೋಪುರಕ್ಕೆ ಕನಕ ಗೋಪುರ ಅಂತಲೇ ಹೆಸರಿಡುವ ಭರವಸೆಯನ್ನು ಮಠಾಧಿಪತಿಗಳು ನೀಡಿದರೆಂಬ ಸಂಗತಿಯನ್ನು ಪ್ರತಿಭಟನಾಕಾರರಿಗೆ ತಿಳಿಸಲಾಯ್ತು. ಅಲ್ಲಿಗೆ ಪ್ರತಿಭಟನೆಯೂ ನಿಂತಿತು.

ನೈಜ ಸ್ವರೂಪ :

ಇದು ಒಂದು ಘಟನೆಯ ನೈಜ ಸ್ವರೂಪವನ್ನು ಅರಿಯದೆ ಮನಸ್ಸಿಗೆ ಬಂದ ಹಾಗೆ ವರ್ತಿಸಿದವರ ಕಥೆ. ಇಡಿಯ ಪ್ರಕರಣಕ್ಕೆ ಕಾರಣವಾದ ಹೊಸ ಗೋಪುರ ಕಟ್ಟುವ ಅದಮಾರು ಮಠದ ಸ್ವಾಮಿಯ ಇಚ್ಛೆಗೆ ಅಸಲಿ ಕಾರಣ ಏನು ಎಂಬುದೇ ಘಟನೆಯ ನೈಜ ಸ್ವರೂಪ. ಮೊದಲೇ ತಿಳಿಸಿದಂತೆ ಒಬ್ಬ ಪರ್ಯಾಯ ಸ್ವಾಮಿಗೆ ತನ್ನ ಪರ್ಯಾಯದ ಅವಧಿಯಲ್ಲಿ ಮಠಕ್ಕಾಗಿ ಇಡುಗಂಟು ಮಾಡಿಡುವುದು ಪ್ರತಿಷ್ಠೆಯ ಸಂಗತಿಯಾಗಿರುತ್ತದೆ. ಈ ಪ್ರತಿಷ್ಠೆಯನ್ನು ಈ ಬಾರಿಯೂ ಕಾಯ್ದುಕೊಳ್ಳುವ ಹುನ್ನಾರವಾಗಿ ಕನಕಗೋಪುರ ಪ್ರಕರಣ ನಡೆದಿದೆ. ಹಣ ಮಾಡುವ ಉದ್ದೇಶದಿಂದ ಹೊಸ ಗೋಪುರ ಕಟ್ಟುವುದಕ್ಕಾಗಿ, ಇದ್ದ ಹಳೆಯ ಗೋಪುರವನ್ನು ಬೀಳಿಸುವ ತಮ್ಮ ಕಾರ್ಯಾಚರಣೆ ಜನರ ಆಕ್ರೋಶಕ್ಕೆ ತುತ್ತಾಗುತ್ತದೆ, ದೊಡ್ಡ ಮಟ್ಟದಲ್ಲಿ ಸುದ್ದಿಯಾಗಿ ಚರ್ಚೆಗೆ ಗ್ರಾಸವಾಗುತ್ತದೆ ಎಂಬುದು ಅದಮಾರು ಮಠದ ಸ್ವಾಮಿಗಾಗಲಿ ಅವರ ಹಿಂದ ಇದ್ದ ಗುರು ವಿಬುಧೇಶ ತೀರ್ಥರಿಗಾಗಲಿ ಮೊದಲು ಮನಸ್ಸಿಗೆ ಬಂದಿರಲಿಲ್ಲ. ಹೀಗಾಗಿ ಎಲ್ಲವನ್ನೂ ಸರಿದೂಗಿಸಿ ತಹಬಂದಿಗೆ ತರಲು ಧನದಾಹಿಗಳು ಪರದಾಡಬೇಕಾಯಿತು. ಎಲ್ಲಿಯವರೆಗೆಂದರೆ, ಹಳೆಯ ಗೋಪುರವನ್ನು ಕೆಡಹುವ ಹೊತ್ತಿನಲ್ಲಿ ಆಗಬಹುದಾದ ತೊಂದರೆ ನಿವಾರಿಸಲು ಬಜರಂಗಿಭಂಟವನ್ನು ಕಾವಲಿಗೆ ನಿಲ್ಲಿಸುವವರೆಗೆ.

ವಿಷಾದದ ಸಂಗತಿ:

ಇವತ್ತು ಧ್ವಂಸವಾಗಿ ನೆಲಕಂಡಿರುವ ಗೋಪುರ ಈಗಿನ ಕೃಷ್ಣಾಪುರಮಠದ ಪರಮ ಗುರುಗಳ ಕಾಲ 1911-12ರ ಅವಧಿಯಲ್ಲಿ ನಿರ್ಮಿಸಲಾದದ್ದು. ಇದಕ್ಕೆ ಮಠದ ಕಡತಗಳಲ್ಲಿ ದಾಖಲೆ ದೊರೆಯುತ್ತದೆ. ಆಗಿನ ಸ್ವಾಮಿ ವಿದ್ಯಾಪೂರ್ಣ ತೀರ್ಥರಿಂದ ಕನಕನ ಕಿಂಡಿ ಇರುವ ಜಾಗದಲ್ಲಿ ಗೋಪುರ ನಿರ್ಮಿಸುವ ನಿರ್ಣಯ ಕೈಗೊಳ್ಳಲಾಯಿತು. ಈಗ ಕೆಡವಲ್ಪಟ್ಟ ಗೋಪುರವು ಇಟ್ಟಿಗೆ, ಸುಣ್ಣ ಮತ್ತು ಬೆಲ್ಲದಿಂದ ಕಟ್ಟಲ್ಪಟ್ಟಿತು. ಕೆಲವು ಬುದ್ಧಿಜೀವಿ ಇತಿಹಾಸಕಾರರು ಹೇಳುವಂತೆ ಗೋಪುರವು ಐತಿಹಾಸಿಕ ಶೈಲಿಯಲ್ಲಿ ನಿರ್ಮಿಸಲಾಗಿದೆ ಎಂಬುದು ತಪ್ಪು ಕಲ್ಪನೆ. ಈ ಗೋಪುರ ನಿರ್ಮಾಣಕ್ಕೆ ಹೊರಗಿನ ಯಾವ ಐತಿಹಾಸಿಕ ಶೈಲಿಗೂ ಮೊರೆ ಹೋಗದ ಸ್ವಾಮಿ ವಿದ್ಯಾಪೂರ್ಣ ತೀರ್ಥರು ಹಳೆಯ ಉಡುಪಿ

ಪುಟ 12 ಕ್ಕೆ

ಇಂದಿಗಾಗಿ ನಾಳಿನ ಕಾರ್ಯಕ್ರಮಗಳು

- **ಸೆಪ್ಟೆಂಬರ್ 1, 2004**
  ಅಂಧಶ್ರದ್ಧೆ,ಮೌಢ್ಯದ ವಿರುದ್ಧ ಜನರೆಡೆಗೆ ವಿಜ್ಞಾನ ಜಾಥಾ, ದಾವಣಗೆರೆಯಲ್ಲಿ ಸಮಾರೋಪ ಸಮಾರಂಭ
- **ಸೆಪ್ಟೆಂಬರ್ 1, 2004**
  ಸಾಮ್ರಾಜ್ಯಶಾಹಿ ವಿರೋಧಿ ಯುದ್ಧವಿರೋಧಿ ದಿನ - ಸಿಪಿಐ(ಎಂ) ಮತ್ತಿತರ ಸಂಘಟನೆಗಳ ಕರೆ
- **ಸೆಪ್ಟೆಂಬರ್ 1, 2004**
  ಅಕ್ಷರ ದಾಸೋಹ ಕೆಲಸಗಾರರ ರಾಜ್ಯ ಮಟ್ಟದ ಸಮಾವೇಶ
  ಎ.ಡಿ.ಎ. ರಂಗಮಂದಿರ - ಬೆಂಗಳೂರು ಬೆಳಿಗ್ಗೆ 9.00 ಗಂಟೆಗೆ.
- **ಸೆಪ್ಟೆಂಬರ್ 2, 2004**
  ಕಾರ್ಮಿಕರ ಹೋರಾಟಗಳಲ್ಲಿ ಪೊಲೀಸ್ ಮಧ್ಯಪ್ರವೇಶ ವಿರುದ್ಧ ಸಂಘಟಿತ ಕಾರ್ಮಿಕರ ಹಕ್ಕುಗಳಿಗಾಗಿ ಸಿಐಟಿಯು ನೇತೃತ್ವದಲ್ಲಿ ವಿಧಾನಸೌಧ ಚಲೋ
- **ಸೆಪ್ಟೆಂಬರ್ 3, 2004**
  ಗ್ರಾಮಪಂಚಾಯತಿ ನೌಕರರ ರಾಜ್ಯ ಸಮ್ಮೇಳನ, ಅಂಬೇಡ್ಕರ ಭವನ - ಬೆಂಗಳೂರು. ಬೆಳಿಗ್ಗೆ 10 ಗಂಟೆಗೆ.
- **ಸೆಪ್ಟೆಂಬರ್ 5, 2004**
  ಪ್ರಾದೇಶಿಕ ಅಸಮಾನತೆ ಹೋಗಲಾಡಿಸುವ ಕುರಿತು ಸಮಾವೇಶ. ಕೂಬಾ ಕಲ್ಯಾಣ ಮಂಟಪ. ಉದ್ಘಾಟನೆ ಪ್ರಕಾಶ್ ಕಾರಟ್

ಜನ ತಿರಸ್ಕರಿಸಿದ ಬಿಜೆಪಿ ಬಂದ್

ಕೋಮುವಾದಿ ವಿಭಜನೆಯ ರಾಜಕಾರಣಕ್ಕಾಗಿ ರಾಷ್ಟ್ರಧ್ವಜವನ್ನು ಬಳಸಿ ಅಪಾರ ಜೀವ- ಆಸ್ತಿಹಾನಿಗೆ ಕಾರಣವಾದ ಈದ್ಗಾ ಮೈದಾನದ ಕ್ರಿಮಿನಲ್ ಮೊಕದ್ದಮೆಯಲ್ಲಿ ನ್ಯಾಯಾಲಯಕ್ಕೆ ಹಾಜರಾಗದೆ ತಿರಸ್ಕರಿಸಿದ್ದ ಉಮಾಭಾರತಿಯ ಪ್ರಕರಣವನ್ನೇ ಹಿಡಿದು ರಾಷ್ಟ್ರಪ್ರೇಮದ ಸೋಗು ಹಾಕಲು ಯತ್ನಿಸಿದ ಬಿಜೆಪಿಯ ಬಂದ್ ಕರೆಯನ್ನು ಜನ ತಿರಸ್ಕರಿಸಿದ್ದಾರೆ. ಆದಾಗ್ಯೂ ಜನಪ್ರಶ್ನೆಗಳಿಗಿಂತ ಭಾವೋದ್ರೇಕದಲ್ಲಿ ಬೇಳೆ ಬೇಯಿಸಿಕೊಳ್ಳಲು ಚಡ್ಡಿಪಡೆ ಮುಂದಾಗಿದೆ. ಯಾತ್ರೆಗಳಂತಹ ಜನವಿಭಜನೆಯ ರಾಜಕಾರಣಕ್ಕೆ ಪ್ರತಿರೋಧ ಅಗತ್ಯವಿದೆ. ರಾಷ್ಟ್ರಧ್ವಜ

ಈ ವಾರ ಕರ್ನಾಟಕ
ಒಂದು ನೋಟ
ಎಸ್.ವೈ.ಗುರುಶಾಂತ್

36 ಸಾರಿಗೆ ಬಸ್‌ಗಳ ಗಾಜುಗಳು ಪುಡಿಪುಡಿ, ಸೇಡಂನಲ್ಲಿ 7 ಬಸ್‌ಗಳ ಜಖಂ, ಪುತ್ತೂರಿನಲ್ಲಿ ಚೂರಿ ಇರಿತ, ಎಲ್ಲೆಡೆ ರಸ್ತೆ ಸಂಚಾರಕ್ಕೆ ಅಡ್ಡಿ, ಬಲವಂತದಿಂದ ಅಂಗಡಿಗಳನ್ನು ಮುಚ್ಚಿಸಲು ಬೆದರಿಕೆ. ತುಮಕೂರಿನ ಮೀನಿನ ವ್ಯಾಪಾರಿ ಮೇಲೆ ಹಲ್ಲೆ - ಹಣ ಲೂಟಿ, ಗದಗ್‌ನಲ್ಲಿ ಈದ್ಗಾ ಪ್ರಾರ್ಥನಾ ಮೈದಾನಕ್ಕೆ ನುಗ್ಗಿ ಧ್ವಜ ಹಾರಿಸಲು ಯತ್ನ. ಮೈಸೂರಿನಲ್ಲಿ ಬಂದ್ ಪರ- ವಿರೋಧ ಘರ್ಷಣೆ ಹಂತಕ್ಕೆ..... ಮುಸ್ಲಿಂ ಅಲ್ಪಸಂಖ್ಯಾತರೇ ಹೆಚ್ಚು ವಾಸವಾಗಿರುವ ಪ್ರದೇಶಗಳಲ್ಲಿ ಹಿಂದಿನ ರಾತ್ರಿಯಿಂದೇ ಆರಂಭಗೊಂಡ ಬಂದ್ ಪರ ಮೆರವಣಿಗೆ, ಗಲಭೆ ಹೊತ್ತಿಕೊಳ್ಳಲು ಪ್ರಚೋದನೆ... ಆತಂಕ... ಇಂತಹ ಅನೇಕ ದೃಶ್ಯಗಳು ಕಂಡು ಬಂದದ್ದು ಆಗಸ್ಟ್ 26 ರಂದು ಬಿಜೆಪಿ ಕರೆ ನೀಡಿದ್ದ ಬಂದ್ ಸಂದರ್ಭದಲ್ಲಿ. ಬಿಜೆಪಿ ಹಾರಾಡಿದಂತೆ ಭಜರಂಗದಳ, ವಿ.ಹಿಂ.ಪರಿಷತ್ ಕೂಗಾಡಿದಂತೆ ಕರ್ನಾಟಕವೇ ಹೊತ್ತಿ ಉರಿಯಲಿಲ್ಲ. ಬಂದ್ ಸಹ ಕೆಲವೆಡೆ ಬಿಟ್ಟರೆ ಆಗಲಿಲ್ಲ. ಜನ ಕೋಮುವಾದಿಗಳ ಕರೆಯನ್ನು ಧಿಕ್ಕರಿಸಿದರು. ಬಹುತೇಕ ಕಡೆ ನೀರಸ ಪ್ರತಿಕ್ರಿಯೆ.ರಾಜಧಾನಿ ಬೆಂಗಳೂರಲ್ಲಂತೂ ಬಿಜೆಪಿಯ ಸಂಸದರು, ಶಾಸಕರು ಇರುವಲ್ಲಿ ಬಂದ್‌ಗೆ ಬೆಂಬಲಿಸಲಿಲ್ಲ. ಕೆಲವು ವ್ಯಾಪಾರಿಗಳು ಮಾತ್ರ ತಮ್ಮ ನಿಷ್ಠೆ ತೋರಿದರು.


ಹುಬ್ಬಳ್ಳಿಯ ಈದ್ಗಾ ಮೈದಾನದಲ್ಲಿ ಕಾನೂನುಬಾಹಿರವಾಗಿ ಬಲವಂತವಾಗಿ ಧ್ವಜ ಹಾರಿಸಲು ಹೋಗಿದ್ದ ಸಂಘ ಪರಿವಾರ, ನಿಷೇಧಾಜ್ಞೆ ಉಲ್ಲಂಘಿಸಿ ಜನರನ್ನು ಎತ್ತಿಕಟ್ಟಿ ಮೈದಾನಕ್ಕೆ ನುಗ್ಗಲು ಯತ್ನಿಸಿತ್ತು. ಆಗ ನಡೆದ ಗೋಲೀಬಾರ್-ಹಿಂಸಾತ್ಮಕ ಘಟನೆಗಳ



ಹಿನ್ನೆಲೆಯಲ್ಲಿ ಹೂಡಲಾಗಿದ್ದ ಕ್ರಿಮಿನಲ್ ಮೊಕದ್ದಮೆಯಲ್ಲಿ ಆರೋಪಿಯಾಗಿರುವ ಉಮಾಭಾರತಿ ಕೋರ್ಟ್‌ಗೆ ಹಾಜರಾಗದೆ ನಿರ್ಲಕ್ಷಿಸಿ 18 ವಾರಂಟ್‌ಗಳ ಬಳಿಕ ರಾಜ್ಯದಿಂದ ಬಂಧನಕ್ಕೆ ಆದೇಶಿಸಲಾಗಿತ್ತು. ಉಮಾಭಾರತಿ ಕೊನೆಗೆ ಮಧ್ಯಪ್ರದೇಶದ ಮುಖ್ಯಮಂತ್ರಿಗಾದಿಗೆ ರಾಜಿನಾಮೆ ಸಲ್ಲಿಸಿ ಕೋರ್ಟ್‌ಗೆ ಶರಣಾಗಿದ್ದಳು. ಈ ಪ್ರಕರಣವನ್ನೇ ನೆಪವಾಗಿಸಿ ಬಿಜೆಪಿ ಮತ್ತು ಉಳಿದ ಸಂಘಪರಿವಾರ ದೇಶಾದ್ಯಂತ ಹುಯಿಲೆಬ್ಬಿಸಿ ಕರ್ನಾಟಕ ಬಂದ್‌ಗೂ ಕರೆ ನೀಡಿತ್ತು.

ನ್ಯಾಯಾಲಯದ ಈ ಕ್ರಮವನ್ನು ರಾಜ್ಯ ಸರ್ಕಾರದ ವಿರುದ್ಧ ಬಳಸುವ ರಾಜಕೀಯ ಹುನ್ನಾರ ಬಿಜೆಪಿಯದು. ಮಾಧ್ಯಮಗಳೇನೊ ಬಿಜೆಪಿಯ ತುತ್ತೂರಿಯಂತೆ ಆಡಿದವು. ಆದರೆ ಜನ ಮಾತ್ರ ಈ ಕರೆಯನ್ನು ತಿರಸ್ಕರಿಸಿದ್ದಾರೆ. ಹುಬ್ಬಳ್ಳಿ, ಗದಗ, ಹಾವೇರಿ, ಚಿಕ್ಕಮಗಳೂರು, ಉಡುಪಿ, ಶಿವಮೊಗ್ಗ, ಕೊಡಗು ಜಿಲ್ಲೆಗಳಲ್ಲಿ ಬಂದ್ ಆಗಿದೆ. ಇನ್ನುಳಿದ ಬಿಜೆಪಿ ಬಲ ಇರುವ ಜಿಲ್ಲೆಗಳಾದ ಬೆಂಗಳೂರು, ಗುಲ್ಬರ್ಗಾ, ಬೀದರ್, ಬಾಗಲಕೋಟೆ ಹಾಗೂ ಕೋಲಾರ, ರಾಯಚೂರು ಮುಂತಾದ ಉತ್ತರಕರ್ನಾಟಕ, ಹೈದರಾಬಾದ್ ಕರ್ನಾಟಕದಲ್ಲಿ ಮಿಶ್ರ ಪ್ರತಿಕ್ರಿಯೆ ಇದ್ದು ದಕ್ಷಿಣ ಕರ್ನಾಟಕದಲ್ಲಿ ಅಷ್ಟಾಗಿ ಸ್ಪಂದನವೇನು ಇಲ್ಲ. ಅಂದರೆ ಬಿಜೆಪಿ ಬಲ ಇರುವಲ್ಲಿಯೂ ಈ ಕರೆಗೆ ಜನ ಸ್ಪಂದಿಸಲಿಲ್ಲ. ಈ ಮೂಲಕ ಕರ್ನಾಟಕದ ಜನತೆ ಇದೊಂದು ಗಂಭೀರ ಪ್ರಶ್ನೆಯೆಂದು ಪರಿಗಣಿಸಿಲ್ಲ. ಜೀವನವನ್ನು ಗಂಭೀರವಾಗಿ ಕಾಣುವ ಪ್ರಶ್ನೆಗಳೇ ಅವರಿಗೆ ಪ್ರಮುಖ. ಇಂತಹ ಪ್ರಹಸನಕ್ಕೆ ಜನರೇಕೆ ಮರುಳಾಗಬೇಕು?, ಬಲಿಯಾಗಬೇಕು. ಬಿಜೆಪಿ ಕಾರ್ಯಕರ್ತರ ದಬಾವಣೆ ಇಲ್ಲದಿದ್ದರೆ ಬಂದ್ ಉಳಿದೆಡೆಯಲ್ಲೂ ವಿಫಲವಾಗುತ್ತಿತ್ತು.

ಕರ್ನಾಟಕದ ರೈತರು, ಕೂಲಿಕಾರರು ಆತ್ಮಹತ್ಯೆಗೀಡಾಗುತ್ತಿರುವಾಗ ಉದಾರೀಕರಣ, ಜಾಗತೀಕರಣದಿಂದ ಕೈಗಾರಿಕೆ ಕೃಷಿ ದಿವಾಳಿಯಾಗಿ ಸಂಕಟಪಡುತ್ತಿರುವಾಗ ಭರದ ಭೀಕರತೆ ಕೆನ್ನಾಲಿಗೆ ಚಾಚಿ ನೆಕ್ಕುತ್ತಿರುವಾಗ, ವೃತ್ತಿಶಿಕ್ಷಣಕ್ಕೆ ಮಾರಕವಾದ ದಂಧೆಗಾರರಿಗೆ ಬಲ ನೀಡುವ ಸುಪ್ರಿಂ ಕೋರ್ಟ್



ತೀರ್ಪು ಬಂದಾಗ ಕೇಂದ್ರದ ಶಾಸನ ರೂಪಿಸಲು ಬಿಜೆಪಿ ಇಂತಹ ಬಂದ್‌ಗೆ ಕರೆ ನೀಡಲಿಲ್ಲ, ಹೋರಾಡಲೂ ಇಲ್ಲ ಎಂಬುದು ಗಮನಿಸಬೇಕಾದ ಅಂಶ. ಪ್ರಮುಖ ಪ್ರಶ್ನೆಗಳೇ ಅಲ್ಲದ ವಿಷಯಗಳನ್ನು ಜನರ ಭಾವೋದ್ವೇಗ ಕೆರಳಿಸಿ ಒಡಕು ತರುವಂತಹ ಪ್ರಶ್ನೆಗಳನ್ನೆತ್ತಲು, ಇಲ್ಲದ ವಿವಾದ ಹುಟ್ಟುಹಾಕಲು ಸಂಘಪರಿವಾರ ಸತತ ಯತ್ನಿಸುತ್ತಲೇ ಬಂದಿದೆ. ಕಾರಣ ದಿವಾಳಿಕೋರ ಆರ್ಥಿಕ - ರಾಜಕೀಯ ನೀತಿಗಳ ವಿರುದ್ಧ ಪ್ರತಿಭಟನೆಯನ್ನು ದಾರಿತಪ್ಪಿಸುವುದು ಅತೃಪ್ತಿಯನ್ನು ಕೋಮುವಾದಿ ವಿಭಜನೆಗೆ ಬಳಸುವುದು, ಮೂಲಭೂತ ಸಮಸ್ಯೆ ಮರೆಸುವ ಬಿಜೆಪಿಯ ಇಂತಹ ಆಟಕ್ಕೆ ಹಿಂದೆಲ್ಲಾ ಕಾಂಗ್ರೆಸ್ ಬೆಂಬಲಿಸಿರುವುದು ಇದೆ.

ಇಂದಿನ ಪ್ರಶ್ನೆಯೆಂದರೆ ಬಿಜೆಪಿ - ಆರ್‌ಎಸ್‌ಎಸ್ ಪರಿವಾರಕ್ಕೆ ನ್ಯಾಯಾಲಯ, ಕಾನೂನು, ಜನಪರಂಪರೆಗೆ ಎಳ್ಳಷ್ಟು ಗೌರವ ನೀಡುವುದಿಲ್ಲ. ತಿರಸ್ಕಾರದ ವರ್ತನೆ ಇದೆಯೆಂಬುದನ್ನು ಈ ಬಂದ್ ಮತ್ತೊಮ್ಮೆ ಸಾಬೀತು ಮಾಡುತ್ತದೆ. ಇದೇ ಪ್ರಶ್ನೆಯನ್ನೆತ್ತಿ ಬಿಜೆಪಿ ನಿತ್ಯಪಾರಾಯಣ ಮಾಡಲು ನಿರ್ಧರಿಸಿದೆ. ರಾಷ್ಟ್ರಮಟ್ಟದಲ್ಲಿ ಇದನ್ನು ಬೆಳೆಸಲು ಮುಂದಾಗಿದೆ. 'ರಾಷ್ಟ್ರಧ್ವಜಕ್ಕೆ ಅಪಮಾನ ನಹಿ ಸಹೇಂಗೆ, ನಹಿ ಸಹೇಂಗೆ' ಎಂಬುದು ಅವರ ಘೋಷಣೆ. ಈ

ಪುಟ 8 ಕ್ಕೆ

ಸರ್ಕಾರಕ್ಕೂ ಬಿಜೆಪಿಗೂ ಎಲ್ಲರಿಗೂ ಬೇಕಾದ ನಕ್ಸಲೀಯರು

ಪಶ್ಚಿಮಘಟ್ಟದ ಕಾಡುಗಳಲ್ಲಿ ಅಡಗಿ ಕುಳಿತ 'ಕ್ರಾಂತಿಕಾರಿ'ಗಳೊಂದಿಗೆ ಮಾತುಕತೆ ನಡೆಸಲು ಸರ್ಕಾರ ಮುಂದಾಗಬೇಕು ಎಂಬ ಒತ್ತಾಯ ಕೇಳಿಬರುತ್ತಿದೆ. ಇದಕ್ಕಾಗಿ 'ಶಾಂತಿಗಾಗಿ ನಾಗರೀಕರು' ಎಂಬ ವೇದಿಕೆ ರಚನೆಗೊಂಡು ಮುಖ್ಯಮಂತ್ರಿಗಳ ಮೇಲೆ ಒತ್ತಡ ತರಲು ಪ್ರಯತ್ನ ನಡೆದಿದೆ. ಈ ಹಿನ್ನೆಲೆಯಲ್ಲಿ ವಿಚಾರಸಂಕಿರಣವೂ ನಡೆದು, ಅದರ ಪರವಾದ ಅಭಿಪ್ರಾಯ ರೂಪಿಸಿ ಬಳಸುವ ಸಾಧ್ಯತೆಗಳಿಗೆ ಯತ್ನಿಸಲಾಗಿದೆ.

ಆರಂಭದಲ್ಲಿ ನಕ್ಸಲೀಯರ ಸಮಸ್ಯೆ ಸಾಮಾಜಿಕ-ಆರ್ಥಿಕ ರಾಜಕೀಯ ಸ್ವರೂಪದ್ದು. ಅವರೊಂದಿಗೆ ಮಾತನಾಡಿ ಸಮಸ್ಯೆ ಇತ್ಯರ್ಥ ಪಡಿಸುತ್ತೇವೆ ಎಂದರು. ಸ್ವಲ್ಪ ದಿನಗಳ ಬಳಿಕ 'ಕಾನೂನು ಸುವ್ಯವಸ್ಥೆ ಹದಗೆಡದಂತೆ ಕ್ರಮ ವಹಿಸುವುದಾಗಿ' ಹೇಳಿದರು. ಈ ಕ್ರಮವೆಂದರೆ ಪೊಲೀಸ್ ಕಾರ್ಯಾಚರಣೆಯ ಮುಂದುವರಿಕೆ. ಇಂತಹ ಕಾರ್ಯಾಚರಣೆ ನಿಲ್ಲಿಸಬೇಕು ಎಂಬುದು ಕಾಡಿನೊಳಗಿನ 'ಕ್ರಾಂತಿಕಾರಿ'ಗಳ ಒತ್ತಾಯ. ಕಾರ್ಯಾಚರಣೆ ಮುಂದುವರೆದಿರುವ ಬಗ್ಗೆ ಅವರ ಆಕ್ರೋಶ. ಶಸ್ತ್ರ ಹಿಡಿದವರೊಂದಿಗೆ ಎಲ್ಲಿಯ ವಾದ ಎಂಬುದು ಆಡಳಿತಗಾರರ ಹೇಳಿಕೆ. ಅಂತಿಮವಾಗಿ 'ಕಾರ್ಯಾಚರಣೆ' ನಿಂತಿಲ್ಲ, ರಾಷ್ಟ್ರೀಯ ಉದ್ಯಾನವನ ನಿರ್ಮಾಣದ ಪುನರುಚ್ಚಾರ ಸರ್ಕಾರದಿಂದ ಬಂದಿದೆ. ಸಮಸ್ಯೆ ಇತ್ಯರ್ಥಕ್ಕೂ ಹೇಳಿಕೆ ಇದೆ. ನಕ್ಸಲೀಯರು ಪೊಲೀಸ್ ಪಡೆಯ ಮುಖ್ಯಸ್ಥ ಹರ್ಷವರ್ಧನ ರಾಜುರವರನ್ನು ಬಲಿ ತೆಗೆದುಕೊಳ್ಳುವ ಬೆದರಿಕೆ ಪ್ರಕಟಿಸಿದ್ದಾರೆ.

ಈ ವಿಷಯದಲ್ಲಿ ಮುಖ್ಯಮಂತ್ರಿ ಧರಂಸಿಂಗ್ ಅಗತ್ಯಕ್ಕಿಂತಲೂ ಅತಿಯಾಗಿ ಅನೇಕ ಸಾರಿ ಮಾತನಾಡಿದ್ದಾರೆ. ಕರ್ನಾಟಕದ ಘನಘೋರ ಸಮಸ್ಯೆ ಈ ನಕ್ಸಲೀಯರು ಎಂದು ಸರ್ಕಾರ ಮತ್ತು ಪತ್ರಿಕೆ, ಟಿ.ವಿ.ಯಂತಹ ಮಾಧ್ಯಮಗಳು ಬಿಂಬಿಸಿವೆ. ಆಂಧ್ರಪ್ರದೇಶದ ಪರಿಸ್ಥಿತಿ, ಸಮಸ್ಯೆ, ಸನ್ನಿವೇಶಗಳಿಗೂ ಕರ್ನಾಟಕಕ್ಕೂ ವ್ಯತ್ಯಾಸವಿದೆಯೆಂದು ಅರಿಯಲು ಇವರಿಗೆ ಬಹಳ ಸಮಯ ಹಿಡಿದಿದೆ! ಈ ನಡುವಿನಲ್ಲೇ 'ನಕ್ಸಲೀಯರೊಂದಿಗೆ ಮಾತುಕತೆ ಸಲ್ಲದು, ಸಮಸ್ಯೆಗಳ ಇತ್ಯರ್ಥವೂ ಕೂಡದು' ಅವರನ್ನು ಸದೆ ಬಡಿಯಿರೆಂದು ಬಿಜೆಪಿ- ಬಜರಂಗದಳ- ವಿಶ್ವಹಿಂದೂ ಪರಿಷತ್‌ಗಳು ಸರ್ಕಾರದ ಮೇಲೆ ಒತ್ತಡ ಹಾಕಿವೆ. ಗದ್ದಲ ಎಬ್ಬಿಸಿವೆ. ಶಾಸಕರನ್ನು ಬಳಸಿವೆ.

ಪಶ್ಚಿಮ ಘಟ್ಟದಲ್ಲಿ ಸಮಸ್ಯೆಗಳಿವೆ ನಿಜ, ಇದನ್ನು ಬಗೆಹರಿಸಬೇಕು. ನಕ್ಸಲೀಯರು ಗಂಭೀರ ಸನ್ನಿವೇಶ - ಅರಾಜಕತೆ ಹುಟ್ಟುಹಾಕಲಿದ್ದಾರೆ ಎಂಬುದು ನಿಜ. ಸರ್ಕಾರದ ನಿರ್ಧಾರ ಒಟ್ಟು ಸಮಸ್ಯೆಯ ಇತ್ಯರ್ಥಕ್ಕೆ ಪ್ರಮುಖ ಎಂಬುದೂ ನಿಜ. ತಾವು ನಕ್ಸಲೀಯರಂತಹ ಗಂಭೀರ ಸಮಸ್ಯೆಯನ್ನು ಎದುರಿಸುತ್ತಿದ್ದೇವೆಂದು ಬಲೂನಿಗೆ ಗಾಳಿ ಊದಿ ತೋರಿಸುವುದು ಸರ್ಕಾರಕ್ಕೆ ಬೇಕಿದೆ. ಬಿಜೆಪಿ-ಸಂಘ ಪರಿವಾರಕ್ಕೂ ಬೇಕಿದೆ. ಜನರ ಬೇಡಿಕೆ-ಸಮಸ್ಯೆಗಳಿಗಾಗಿ ಮಿಡಿವ ಪ್ರಗತಿಪರರ, ಒಲವನ್ನು ತಮ್ಮ ಪರವಾಗಿ ಬಳಸಲು ನಕ್ಸಲೀಯರಿಗೂ ಇದು ಬೇಕಾಗಿದೆ.

ಇಲ್ಲಿ ನಕ್ಸಲೀಯರ ಸಮಸ್ಯೆನ್ನಷ್ಟೇ ತೋರಿಸಿ ಪಶ್ಚಿಮಘಟ್ಟ ಪ್ರದೇಶದ ಜನರ ನಿಜವಾದ ಸಮಸ್ಯೆಗಳನ್ನು ಮರೆಮಾಚಿ ತನ್ನ ನೀತಿ ಮುಂದುವರೆಸಲು ಸರ್ಕಾರ ಹವಣಿಸುತ್ತಿದೆ. ನಕ್ಸಲೀಯರ ಅರಾಜಕತೆ-ದುಸ್ಸಾಹಗಳು - ಹಿಂಸೆ ಸರ್ಕಾರದ ಹವಣಿಕೆಗಳಿಗೆ ಸಹಾಯಕ ಆಹಾರ. ನಕ್ಸಲೀಯರ ಕ್ರಮಗಳು ಬಾಧಿತ ಜನಸಮೂಹದ ವಿಶಾಲ ಪ್ರಬಲ ಪ್ರಜಾಸತ್ತಾತ್ಮಕ ಚಳುವಳಿಯೊಂದು ರೂಪುಗೊಂಡು ಸರ್ಕಾರಗಳ ನೀತಿಗಳಿಗೂ, ಭೂಮಾಲೀಕ-ಬಂಡವಾಳಗಾರರ ಬಹುರಾಷ್ಟ್ರೀಯ ಕಂಪನಿಗಳಿಗೂ ಸವಾಲಾಗುವುದನ್ನು ತಪ್ಪಿಸುತ್ತದೆ. ಜನರನ್ನು ದೂರ ಸರಿಸುತ್ತದೆ. ಈ ಮೂಲಕ ಈ ಹಂತದಲ್ಲಿ ಆಳುವವರ್ಗ ತನ್ನ ಆಕ್ರಮಣ ಹೆಚ್ಚಿಸಲು ಮೇಲುಗೈ ಸಾಧಿಸಲು ಅನುವು ಮಾಡಿಕೊಡುತ್ತದೆ. ಧ್ವನಿ ಎತ್ತದಂತೆ ದಮನಿಸುತ್ತದೆ. ಈ ಸನ್ನಿವೇಶದಿಂದಾಗಿ ಹೋರಾಟದ ಬಗ್ಗೆ ಜನರಲ್ಲೂ ವಿಮುಖ ಭಾವ ಹುಟ್ಟಿಸ ಬಹುದು. ನಕ್ಸಲೀಯರೊಂದಿಗೆ ಮಾತುಕತೆ ನಡೆಸದಿದ್ದರೆ, ಮುಂದೆ ಹಿಂಸೆ ಸಂಭವಿಸಿದರೆ ಅದಕ್ಕೆ ಸರ್ಕಾರವೇ ಹೊಣೆ ಎಂದು ಮಾತನಾಡುವ ಕೆಲವು ಬುದ್ಧಿಜೀವಿಗಳು ಇನ್ನೊಂದು ಅಂಶವನ್ನು ಗಮನಿಸಬೇಕು. ಇತ್ತೀಚೆಗೆ ನಕ್ಸಲೀಯರ ಅಡುಗುತಾಣಕ್ಕೆ ಭೇಟಿ ಕೊಟ್ಟಾಗ(ಕರೆಸಿಕೊಂಡ)



ನಡೆಸಿದ ಸಂದರ್ಶನದಲ್ಲಿ ಗೌರಿಲಂಕೇಶರವರು ನಾಯಕ ಪ್ರೇಮ್‌ಗೆ ಹಾಕಿದ ಒಂದು ಪ್ರಶ್ನೆಯಲ್ಲಿ 'ಸರ್ಕಾರಕ್ಕೆ ನೀವಿಟ್ಟ ಏಳು ಬೇಡಿಕೆಗಳನ್ನು ಈಡೇರಿಸಿದರೆ ಶಸ್ತ್ರಾಸ್ತ್ರ ಕೆಳಗಿಡುತ್ತೀರಾ' ಎಂಬ ಪ್ರಶ್ನೆಗೆ 'ಇಲ್ಲ, ಕ್ರಾಂತಿಯನ್ನು ಸಂಧಾನದ ಮೂಲಕ ತರಲಾಗುವುದಿಲ್ಲ' ಎಂದು ಮಾವೋರವರ ಪುಸ್ತಕದ ಒಂದು ವಾಕ್ಯವನ್ನು ತಮ್ಮ ಕೃತ್ಯಗಳ ಸಮರ್ಥನೆಗೆ' ಇಲ್ಲಿ ಉದ್ಧರಿಸಿದ್ದಾನೆ ಪ್ರೇಮ್.

ಆದ್ದರಿಂದ ಇದು ಬೇಡಿಕೆ ಈಡೇರಿಸುವ ಹಿಂಸೆ-ಪ್ರತಿಹಿಂಸೆಗಳ ತಾತ್ವಿಕ ಮಂಥನದ ಪ್ರಶ್ನೆ ಮಾತ್ರವಲ್ಲ, ಈ ಪೀಪಲ್ಸ್ ವಾರ್ ಗುಂಪಿನ ನಕ್ಸಲೀಯ ಚಳುವಳಿ ಹಾದಿ ತಪ್ಪಿದ 'ಜನತೆಯ ಪ್ರಜಾಸತ್ತಾತ್ಮಕ ಚಳುವಳಿಗೆ ಮಾರಕವಾದ' ವಿಕೃತಗೊಂಡ ಎಡ ದುಸ್ಸಾಹಸವಾಗಿದೆ. ಇದರ ಅನಾಹುತಗಳನ್ನು ಸಹಾನುಭೂತಿ ಇರುವ ನಾಡಿನ ಪ್ರಗತಿಪರರು ಅರಿಯಬೇಕು.

ಮಂಗಳೂರು ಸೇಷನ್ಸ್ ನ್ಯಾಯಾಲಯದ ಐತಿಹಾಸಿಕ ತೀರ್ಪು

ಕಾ.ಶ್ರೀನಿವಾಸ್ ಬಜಾಲ್ ಹತ್ಯೆ ಆರೋಪಿಗಳಿಗೆ ಜೀವಾವಧಿ ಶಿಕ್ಷೆ



ಕಾಮ್ರೇಡ್ ಶ್ರೀನಿವಾಸ್ ಬಜಾಲ್ ಹತ್ಯೆ ಮಾಡಿದ ಕೊಲೆಗಡುಕ 'ಕ್ರಿಮಿನಲ್'ಗಳಿಗೆ ಕೊನೆಗೂ ಶಿಕ್ಷೆಯಾಗಿದೆ. ಆರೋಪಿಗಳಾದ ಭವಾನಿಶಂಕರ್, ಜಗ್ಗ ಯಾನೆ ಜಗದೀಶ್, ತರಾಯಿ ಸುರೇಶ್, ಸುರೇಶ್ ಕಲಾಲ, ಉದಯರಾಜ ಈ ಐವರಿಗೆ ಮಂಗಳೂರಿನ ಸೆಷನ್ಸ್ ನ್ಯಾಯಾಲಯ ಅಗಸ್ಟ್ 26 ರ ಮಧ್ಯಾಹ್ನ ತೀರ್ಪು ನೀಡಿ "ಆರೋಪಿಗಳಿಗೆ ಜೀವಾವಧಿ ಶಿಕ್ಷೆ' ವಿಧಿಸಿದೆ.

2002, ಜೂನ್-24 ರ ಬೆಳಿಗ್ಗೆ ತನ್ನ ಗೆಳೆಯನೊಬ್ಬನಿಗೆ, ರಕ್ತದಾನ ಮಾಡಲು ಹೊರಟ ಡಿವೈಎಫ್ಐ ಮುಖಂಡ ಹಾಗೂ ಪಕ್ಕಲಡ್ಕ ಯುವಕ ಮಂಡಲದ ಸಾಂಸ್ಕೃತಿಕ ಕಾರ್ಯದರ್ಶಿ ಕಾಂ.ಶ್ರೀನಿವಾಸ್ ಬಜಾಲ್‌ನನ್ನು ದಾರಿ ಮಧ್ಯೆ ಅಡ್ಡಗಟ್ಟಿದ ಹಿಂದೂ ಯುವಸೇನೆಯ ಕ್ರಿಮಿನಲ್‌ಗಳು ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿ ಬರ್ಬರವಾಗಿ ಹತ್ಯೆ ಮಾಡಿದ್ದರು. ಬಜಾಲ್ ಪ್ರದೇಶದ ಅತ್ಯಂತ ಜನಪ್ರಿಯ ಮುಖಂಡನಾಗಿ ಬೆಳೆಯುತ್ತಿದ್ದ ಶ್ರೀನಿವಾಸ್‌ರವರನ್ನು ಹತ್ಯೆ ಮಾಡಲು ಹಲವು ದಿನಗಳ ಹಿಂದೆಯೇ ಈ ಕ್ರಿಮಿನಲ್‌ಗಳು ವ್ಯವಸ್ಥಿತ ಸಂಚು ರೂಪಿಸಿದ್ದರು.

ದುರದೃಷ್ಟ ಸಂಗತಿಯೆಂದರೆ ಕಾಂ.ಶ್ರೀನಿವಾಸ್ ಬಜಾಲ್ ಹತ್ಯೆಯ ಪ್ರಮುಖ ಆರೋಪಿ - ಲೋಕೇಶ ಪೂಜಾರಿ (ಪಿಸ್ತೂಲ್) ನಿರ್ದೋಷಿ ಎಂದು ಬಿಡುಗಡೆಗೊಂಡಿರುವುದು. ಕೊಲೆಗೆ ಎಲ್ಲಾ ರೀತಿಯ ಸಂಚನ್ನು ರೂಪಿಸಿ 10 ಸಾವಿರ ಸುಫಾರಿ ನೀಡಿದ ಇವನು, ಹತ್ಯೆ ನಡೆಯುವ ನಾಲ್ಕು ದಿನಗಳ ಮೊದಲೇ ಮಂಗಳೂರಿನ ವೆನ್‌ಲಾಕ್ ಆಸ್ಪತ್ರೆಯಲ್ಲಿ, ಒಳರೋಗಿಯಾಗಿ ದಾಖಲಾಗಿದ್ದ. ಆದರೆ ಶ್ರೀನಿವಾಸ್ ಬಜಾಲ್ ಹತ್ಯೆಯಲ್ಲಿ ಇವನೇ ಪ್ರಮುಖ ಸೂತ್ರಧಾರಿ ಎಂದು ಡಿವೈಎಫ್ಐ ಆರೋಪಿಸಿತ್ತು. ಮಾತ್ರವಲ್ಲ ಅವನ ವಿರುದ್ಧ ದೂರು ನೀಡಿದ್ದರೂ ಅವನು ಮೊದಲೇ ರೂಪಿಸಿಕೊಂಡಿದ್ದ ವ್ಯವಸ್ಥಿತ 'ಚಕ್ರವ್ಯೂಹ' ಅವನನ್ನು ರಕ್ಷಿಸಿದೆ. ಆದರೆ ನ್ಯಾಯಾಲಯ ಅವನನ್ನು ನಿರ್ದೋಷಿ ಎಂದು ಬಿಡುಗಡೆಗೊಳಿಸಿದ್ದರೂ ಬಜಾಲ್ ಜನತೆ ಅವನನ್ನು 'ಕೊಲೆಗಡುಕ'ನೆಂದೇ ಈಗಲೂ ಕೂಗುತ್ತಿದೆ.

ಅಗಸ್ಟ್-26 ರಂದು ಮಂಗಳೂರಿನ ಬೀದಿಗಳ ಹಿಂಸಾಚಾರ ನಡೆಸುತ್ತಾ, ಟೈರ್‌ಗಳಿಗೆ ಬೆಂಕಿ ಹಚ್ಚಿ ಉಮಾಭಾರತಿ ಪ್ರಕರಣದಲ್ಲಿ ಹುಸಿ ದೇಶಪ್ರೇಮ ಪ್ರದರ್ಶಿಸುತ್ತಿದ್ದ 'ಹಿಂದೂ ಯುವಸೇನೆಯ' ಗೂಂಡಾಗಳಿಗೆ ಈ ತೀರ್ಪು ಬೆವರಿಳಿಸಿದೆ. ಯಾಕೆಂದರೆ 2002 ರಲ್ಲಿ ಮಂಗಳೂರಿನಲ್ಲಿಯೇ ನಡೆದ ಹಲವಾರು ಕುಖ್ಯಾತ ಕೊಲೆಗಳನ್ನು ನಡೆಸಿದ ಆರೋಪಿಗಳೆಲ್ಲಾ ಇಂದು ಬೀದಿಯಲ್ಲಿ ರಾಜರೋಷವಾಗಿದ್ದಾರೆ. ಆದರೆ ಎಲ್ಲಾ ಜೀವ ಬೆದರಿಕೆಗಳನ್ನು ಎದುರಿಸಿಯೂ ಡಿವೈಎಫ್ಐ ಮತ್ತು ಬಜಾಲ್‌ನ ಪಕ್ಕಲಡ್ಕ ಯುವಕ ಮಂಡಲದ ಸಂಗಾತಿಗಳು ಧೈರ್ಯವಾಗಿ ಈ ಪ್ರಕರಣದಲ್ಲಿ ನಿಂತರು ಮಾತ್ರವಲ್ಲ, ನ್ಯಾಯಾಲಯದಲ್ಲಿ ಗಟ್ಟಿಯಾಗಿ ನಿಂತು ಸಾಕ್ಷಿ ಹೇಳಿದರು. ಡಿವೈಎಫ್ಐ ಸಂಗಾತಿಗಳು, ಆರೋಪಿಗಳನ್ನು ಗುರ್ತಿಸುವುದಲ್ಲಿ ಮಾತ್ರವಲ್ಲ ಅವರಿಗೆ ಜಾಮೀನು ಸಿಗದಂತೆ ವ್ಯವಸ್ಥಿತವಾಗಿ ಕೆಲಸ ಮಾಡಿದರು. ಪರಿಣಾಮವಾಗಿ ಪ್ರಕರಣದ ಎಲ್ಲಾ ಐದು ಆರೋಪಿಗಳು ಕಳೆದ 2 ವರ್ಷಗಳಿಂದ ಜೈಲಿನಲ್ಲಿಯೇ ಕೊಳೆಯುವಂತಾಯಿತು.

ಜೈಲಿನಲ್ಲೇ ಪ್ರತಿಕಾರದ ಸಂಚು

ಡಿವೈಎಫ್ಐ ಮುಖಂಡರ, ಕಾರ್ಯಕರ್ತರ ವ್ಯವಸ್ಥಿತ ಪ್ರಯತ್ನಗಳು ಫಲ ನೀಡುತ್ತಿರುವಂತೆ, ಜೈಲಿನಲ್ಲಿ ಕಂಬಿ ಎಣಿಸುತ್ತಿದ್ದ ಮತ್ತು ಹೊರಗಿದ್ದು ಕ್ರಿಮಿನಲ್ ದಂಧೆ ನಡೆಸುತ್ತಿದ್ದ ಹಿಂದು ಯುವಸೇನೆಯ ಕ್ರಿಮಿನಲ್‌ಗಳಿಗೆ ನ್ಯಾಯಾಲಯದಲ್ಲಿ ಶಿಕ್ಷೆ ಆಗುವುದು ನಿಶ್ಚಿತ ಎಂಬ ಸತ್ಯ ದಿನಕಳೆದಂತೆ ಗೋಚರವಾಗತೊಡಗಿತು. ಲಕ್ಷಾಂತರ ರೂ.ಗಳನ್ನು ನೀಡಿ ಖ್ಯಾತ ಚಡ್ಡಿ ಕ್ರಿಮಿನಲ್ ಲಾಯರ್‌ನನ್ನು ನೇಮಿಸಿದ್ದರೂ ಅವರ ವರಸೆಗಳೆಲ್ಲಾ, ಡಿವೈಎಫ್ಐ ಮುಖಂಡರ ಸಮರ್ಥ ಸಾಕ್ಷಿ ಎದುರು ನೆಲೆ ಕಳಚಿಕೊಳ್ಳತೊಡಗಿದವು. ಮೂಲತಃ ಅವರೆಲ್ಲ ಕ್ರಿಮಿನಲ್‌ಗಳೇ! ಅವರಿಗೆ ಮತ್ತೆ ಮತ್ತೆ ಹೊಳೆಯುತ್ತಿದ್ದುದು ಕ್ರಿಮಿನಲ್ ಐಡಿಯಾಗಳೇ!

ಸಂಚು -1 ವಿಫಲ :

ನಿಮಗೆ ನೆನಪಿರಬಹುದು ಒಂದೂವರೆ ವರ್ಷದ ಹಿಂದೆ ಮಂಗಳೂರಿನ ಮತ್ತು ರಾಜ್ಯದ ಪತ್ರಿಕೆಗಳಲ್ಲಿ ಮುಖಪುಟ ಸುದ್ದಿ ಬಿತ್ತರಗೊಂಡಿತ್ತು. ಮಂಗಳೂರಿನ ಜೈಲಿನಲ್ಲಿ ಖೈದಿಗಳ ಊಟದಲ್ಲಿ



ಗೂಂಡಾಗಳಿಗೆ ತಕ್ಕ ಶಿಕ್ಷೆ

ಹಲ್ಲಿಬಿದ್ದ ಪ್ರಕರಣ: ಕೆಲವು ವಿಚಾರಣಾದೀನ ಖೈದಿಗಳು ಅಸ್ವಸ್ಥ, ಆಸ್ಪತ್ರೆಗೆ ಎಂದು, ಇದೆಲ್ಲಾ ನಾಟಕವೆಂದು ಪೊಲೀಸರು ಬಲೆಬೀಸಿದರು. ಅಲ್ಲೆ ಸಿಕ್ಕಿಬಿದ್ದರು ಕಳ್ಳರು! ಊಟದಲ್ಲಿ ಹಲ್ಲಿ ಬಿದ್ದಿದೆ ಎಂಬ ನೆಪಮಾಡಿ ಆಸ್ಪತ್ರೆ ಸೇರುವುದು, ಅಲ್ಲಿಂದ ಪರಾರಿಗೊಂಡು ಡಿವೈಎಫ್ಐ ಪ್ರಮುಖ ಸಂಗಾತಿಗಳನ್ನು ಮುಗಿಸಲು ಸಂಚು ರೂಪಿಸಿದ್ದರು ಈ ಕ್ರಿಮಿನಲ್‌ಗಳು! ಆದರೆ ಅವರ ನಾಟಕ ಬೀದಿಯಲ್ಲಿ ಪ್ರದರ್ಶನಗೊಳ್ಳಲು ಪೊಲೀಸರು ಬಿಡಲಿಲ್ಲ.

ಸಂಚು -2 ವಿಫಲ :

ಜೂನ್ 20 ರಿಂದ 26 ರ ನಡುವೆ ಡಿವೈಎಫ್ಐ ರಾಜ್ಯಮಟ್ಟದ ಶಿಬಿರ ಮಂಗಳೂರಿನ ಪಕ್ಕಲಡ್ಕ ಯುವಕ ಮಂಡಲದಲ್ಲಿ ನಡೆಯುತ್ತಿತ್ತು. ಜೂನ್ 24, ಶ್ರೀನಿವಾಸ್ ಬಜಾಲ್ ಹುತಾತ್ಮದಿನ; ಜೂನ್ 23 ಸಂಜೆ ಮತ್ತೆ ಅಂತದ್ದೇ ಸಂಚು! ಜೈಲಿನೊಳಗಿಂದ ಈ ಸಂಚನ್ನು ರೂಪಿಸಿದ್ದರು ಕಾವಿಪಡೆಗಳು! ಅಷ್ಟೊತ್ತಿಗಾಗಲೇ ತೀರ್ಪು ಹೊರಬರುವುದು ಖಚಿತವಾಗಿತ್ತು. ಶಿಕ್ಷೆ ಗ್ಯಾರಂಟಿಯಾಗಿತ್ತು. ಆದರೆ ಮೊದಲಿದ್ದ ನ್ಯಾಯಾಧೀಶರು ವರ್ಗಾವಣೆಗೊಂಡಿದ್ದರು. ಹೊಸದಾಗಿ ಬಂದ ನ್ಯಾಯಾಧೀಶರು, ಬಹುಶಃ ಪರಿಶೀಲನೆಗಾಗಿ ಸಮಯ ತೆಗೆದುಕೊಂಡಿದ್ದರು! ಒಳಗಿದ್ದ ಆರೋಪಿಗಳು ಒಬ್ಬನನ್ನು ಗೊತ್ತು ಮಾಡಿದರು. ಅವನು ಕ್ರಿಮಿನಲ್ ಮೊಕದ್ದಮೆ ಎದುರಿಸುತ್ತಿದ್ದ ಖೈದಿಯೇ. ಅವನು ಜೂನ್-24 ರಂದು ಬಿಡುಗಡೆಯಾಗುತ್ತಾನೆ ಎಂದು ಅವರು ಭಾವಿಸಿ ಅವನಿಗೆ ಸುಫಾರಿ ನೀಡಿದರು. ಜೂನ್-24, ಶ್ರೀನಿವಾಸ್ ಸತ್ತ ದಿನ. ನೀನು ಹೇಗಿದ್ದರೂ ಬಿಡುಗಡೆಯಾಗುತ್ತಿ ಅಂದೇ ನೀನು ಬಜಾಲ್‌ನಲ್ಲಿ ಇಂತಹವನನ್ನು ಮುಗಿಸಬೇಕು. ನಿನಗೆ ಬೇಕಾದ ಎಲ್ಲಾ ವ್ಯವಸ್ಥೆ ನಾವು ಮಾಡುತ್ತೇವೆ ಎಂಬ ಭರವಸೆಯೊಂದಿಗೆ ಅವನಿಗೆ ಸಹಾಯ ಮಾಡಲು ಮತ್ತೊಬ್ಬನನ್ನು ಗೊತ್ತು ಮಾಡಿದರು. ಅಂದರೆ ಮತ್ತೊಂದು ರಕ್ತದೋಕಳಿಗೆ ಸಿದ್ಧತೆ ನಡೆಸಿದ್ದರು. ಆದರೆ ಇಂತಹ ಸೂಕ್ಷ್ಮ ವಿಷಯಗಳಲ್ಲಿ ನಮ್ಮ ಸಂಗಾತಿಗಳು ಈಗ ಪೊಲೀಸ್ ರಿಗಿಂತಲೂ ಒಂದು ಹೆಜ್ಜೆ ಮುಂದೆ. ಅಂತಹ ವ್ಯವಸ್ಥಿತ ಸಂಚು ಗೊತ್ತಾಗುತ್ತಿದ್ದಂತೆ ಅದನ್ನು ವಿಫಲಗೊಳಿಸಿ, ರಾಜ್ಯ ಶಿಬಿರಕ್ಕೆ ಯಾವುದೇ ತೊಂದರೆಯಾಗದಂತೆ ಸಂಗಾತಿಗಳನ್ನು ಸಜ್ಜುಗೊಳಿಸಲಾಯಿತು.

ಜೂನ್-24 ಪಾಪ! ಅಂದು ಬಿಡುಗಡೆಯಾಗಬೇಕಿದ್ದ ಖೈದಿಯ ದುರ್ದಿನವೆಂದು ಕಾಣುತ್ತೆ, ಅವನಿಗೆ ನೀಡಿದ ಭರವಸೆಯಂತೆ ಕೆಲಸ ಮಾಡಲು ಸಾಧ್ಯವಾಗಲೇ ಇಲ್ಲ. ಯಾಕೆಂದರೆ ಆ ದಿನವೇ ನ್ಯಾಯಾಲಯ ಅವನು ಹಿಂದೆ ಮಾಡಿದ್ದ ಅಪರಾದಕ್ಕೆ 'ಅಪರಾಧಿ'ಯೆಂದು ಘೋಷಿಸಿ, ಜೈಲಿನ ಕಂಬಿ ಎಣಿಸುವ ಕೆಲಸ ನೀಡಿತ್ತು. ಹೀಗಾಗಿ ಹಿಂದೂ ಯುವಸೇನೆಯ ಕ್ರಿಮಿನಲ್‌ಗಳ 2ನೇ ಸಂಚು ವಿಫಲಗೊಂಡಿತು.

ಈಗ ಸೆಷನ್ಸ್ ನ್ಯಾಯಾಲಯ ನೀಡಿರುವ ತೀರ್ಪಿನ ಬಗ್ಗೆ ಮಂಗಳೂರಿನ ಎಲ್ಲಾ ಪತ್ರಿಕೆಗಳು ಸ್ವಾಗತಾರ್ಹ ಮಾತುಗಳನ್ನಾಡಿವೆ. ಬಜಾಲ್‌ನ ಹಾಗೂ ಮಂಗಳೂರಿನ ಕ್ರಿಮಿನಲ್‌ಗಳ ದೇಹದಲ್ಲೀಗ ನೀರು ಧಾರಾಕಾರವಾಗಿ ಸುರಿಯುವಂತೆ ಮಾಡಿದೆ ಈ ತೀರ್ಪು. ಸದ್ಯಕ್ಕೆ ಬಜಾಲ್ ಶಾಂತವಾಗಿದೆ. ಶ್ರೀನಿವಾಸ್ ಬಜಾಲ್ ಹತ್ಯೆ ನಂತರದಲ್ಲಿ ಡಿವೈಎಫ್ಐ ಮತ್ತಷ್ಟು ಬೆಳವಣಿಗೆಗೊಂಡಿದೆ. ಜನರ ವಿಶ್ವಾಸಗಳಿಸಿದೆ. ಶ್ರೀನಿವಾಸ್ ಬಜಾಲ್ ಕುಟುಂಬಕ್ಕೆ ಡಿವೈಎಫ್ಐ ಮತ್ತು ಹಿತೈಷಿಗಳು ನೀಡಿದ ಸಹಾಯವಂತೂ ಅವಿಸ್ಮರಣೀಯವಾಗಿದೆ. ಬಜಾಲ್‌ನಲ್ಲಿ ಶ್ರೀನಿವಾಸ್ ಈಗಲೂ ಜೀವಂತವಿದ್ದಾನೆ. ಡಿವೈಎಫ್ಐ ರಾಜ್ಯ ಶಿಬಿರದ ಸಮಾರೋಪದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಶ್ರೀನಿವಾಸ್ ಸ್ಮರಣಾರ್ಥ ಚಿನ್ನ-ಬೆಳ್ಳಿ ಪದಕ ನೀಡುವ ಕಾರ್ಯಕ್ರಮ ಉದ್ಘಾಟನೆಗೊಂಡಿತು. ಬಡ ಮಕ್ಕಳಿಗೆ ಶಾಲಾ ಫೀ ತುಂಬುವ ಕೆಲಸವನ್ನು ಡಿವೈಎಫ್ಐ ಆರಂಭಿಸಿದೆ. ಶ್ರೀನಿವಾಸ್ ಯಾವ ಆದರ್ಶಗಳನ್ನು ಮೈಗೂಡಿಸಿಕೊಂಡಿದ್ದನೋ ಆ ಎಲ್ಲಾ ಕನಸುಗಳ ನನಸಾಗಿಸುವ ಕೆಲಸ ಆರಂಭಗೊಂಡಿದೆ. ಅದೇ ವೇಳೆಗೆ ಜಾತಿ, ಭಾಷೆ, ಧರ್ಮದ ಹೆಸರಲ್ಲಿ ಯುವಜನರನ್ನು ಉದ್ರೇಕಗೊಳಿಸಿ ಅವರನ್ನು ಸಂಕುಚಿತ ರಾಜಕೀಯ ಲಾಭಕ್ಕಾಗಿ ಬಳಸಿಕೊಳ್ಳುವ ಮೂಲಭೂತವಾದಿ ಶಕ್ತಿಗಳ ವಿರುದ್ಧದ ತನ್ನ ಸೈದ್ಧಾಂತಿಕ ಹೋರಾಟಗಳನ್ನು ತೀವ್ರಗೊಳಿಸಿದೆ. ಅಂತಹ ಶಕ್ತಿಗಳನ್ನು ಜನರಿಂದ ಪ್ರತ್ಯೇಕಗೊಳಿಸುವ ಕೆಲಸವು ನಡೆಯುತ್ತಿದೆ.

ಘೋರ, ಭೀಭತ್ಸ್ಯ ಕೃತ್ಯಗಳನ್ನೆಲ್ಲಾ ನಡೆಸಿ ಸಮಾಜದಲ್ಲಿ ಈಗಲೂ ವಿಜೃಂಭಿಸುತ್ತಿರುವ ಅಪರಾಧಿಗಳಿಗಂತೂ ಈ ತೀರ್ಪು ಭಾರೀ ಪೆಟ್ಟು ನೀಡಿದೆ. ಅದೇ ವೇಳೆ ಶಾಂತಿ ಬಯಸುವ ಜನತೆಗೆ ಸಮಾಧಾನ ತಂದಿದೆ. ' ಮಾತ್ರವಲ್ಲ ನ್ಯಾಯಾಲಯಗಳ ಬಗ್ಗೆ ಅಭಿಮಾನವನ್ನು, ವಿಶ್ವಾಸವನ್ನು ಹೆಚ್ಚಿಸಿದೆ.

ಬದುಕಿನುದ್ದಕ್ಕೂ ಬದ್ದ ವೈರಿಗಳ ಗೆದ್ದೆ-ಗೆಲ್ಲುವೆವು.... ಎಂಬಂತೆ ಈ ತೀರ್ಪು ಹೋರಾಟಗಾರರಿಗೊಂದು ವಿಜಯದ ಮೆಟ್ಟಿಲಾಗಿದೆ. ಮುಂಬರುವ ಇಂತಹ ಹಲವು ಸವಾಲುಗಳನ್ನು ಗ್ರಹಿಸುತ್ತಲೇ ನಮ್ಮ 'ವಿಜಯೋತ್ಸವ'ದ ಹೆಜ್ಜೆಯನ್ನು ಇರಿಸಬೇಕಾಗಿದೆ.

ಇಂತಹ ತೀರ್ಪು ಹೊರಬರಲು ಕಾರಣರಾದ ಪಬ್ಲಿಕ್ ಪ್ರಾಸಿಕ್ಯೂಟರ್ ಕಿತ್ತೂರ್ ಶ್ರಮ ಸಾರ್ಥಕವಾಗಿದೆ. ಅವರಿಗೆ ವಿಶೇಷವಾದ ಅಭಿನಂದನೆ ಸಲ್ಲಿಸಲೇಬೇಕು. ಅಲ್ಲದೇ ಇಂತಹದೊಂದು ಐತಿಹಾಸಿಕ ತೀರ್ಪನ್ನು ನೀಡಿ ಕ್ರಿಮಿನಲ್ ಪಾತಕಿಗಳಿಗೆ 'ಜೀವಾವಧಿ ಶಿಕ್ಷೆ' ವಿಧಿಸಿದ ಹಿಂದಿನ ಹಾಗೂ ಇಂದಿನ ನ್ಯಾಯಮೂರ್ತಿಗಳಾದ ಇಂದಿರಾ ಕಲಾ ಹಾಗೂ ಜಿ.ಎಂ.ಹೆಗಡೆಯವರು ಅಭಿನಂದನಾರ್ಹರು. ಅಲ್ಲದೆ ಶ್ರೀನಿವಾಸ್ ಬಜಾಲ್ ಹತ್ಯೆಯನ್ನು ವಿರೋಧಿಸಿದ ಮತ್ತು ಅವರ ಕುಟುಂಬಕ್ಕೆ ಉದಾರ ಸಹಾಯ ಮಾಡಿದ ಎಲ್ಲಾ ಸಂಗಾತಿಗಳು ಮತ್ತು ಹಿತೈಷಿಗಳಿಗೆ ಡಿವೈಎಫ್ಐ ರಾಜ್ಯ ಸಮಿತಿ ಕೃತಜ್ಞತೆಗಳನ್ನು ಸಲ್ಲಿಸುತ್ತದೆ. ಕೊನೆಯದಾಗಿ ಒಗ್ಗಟ್ಟಿನಲ್ಲಿ ಬಲವಿದೆ ಎಂದು ತೋರಿಸಿದ ಬಜಾಲ್ ಹಾಗೂ ದಕ್ಷಿಣ ಕನ್ನಡ ಸಂಗಾತಿಗಳಿಗೆ ಕ್ರಾಂತಿಕಾರಿ ನಮನಗಳು.

■ ಮಹಂತೇಶ

ಮಾನನಷ್ಟ ಮೊಕದ್ದಮೆ ವಜಾ

ವಿಟ್ಲದ ಸಿಪಿಐ(ಎಂ) ಮುಖಂಡ ಎ.ರಾಮಣ್ಣ ವಿರುದ್ಧ ತಾರೀಖು 18.11.1993ರಲ್ಲಿ ವಿಟ್ಲ ನೆಕ್ಕರೆಕಾಡು ದಿ। ಮೋನು ಮಡಿವಾಳರ ಮಗ ಇಂದ್ರಕುಮಾರ್ ಎಂಬವರು ಬಂಟ್ವಾಳ ಸಿವಿಲ್ ನ್ಯಾಯಾಲಯದಲ್ಲಿ ಹೂಡಿದ್ದ ಮೊಕದ್ದಮೆಯು ಆಧಾರ ರಹಿತವೆಂದು ಸಿವಿಲ್ ಜಡ್ಜ್ ಶ್ರೀ ಎಂ. ಮಹದೇವಯ್ಯನವರು ತಾರೀಖು 17.01.2004 ರಂದು ವಜಾಗೊಳಿಸಿರುತ್ತಾರೆ.

1993ರಲ್ಲಿ ವಿಟ್ಲ ಕಸವಾ ಗ್ರಾಮದ ಇಂದ್ರಕುಮಾರ್ ಸರಕಾರಿ ಭೂಮಿಯನ್ನು ಕಬಳಿಸುವಾಗ ಸಾರ್ವಜನಿಕರು ಸಿಪಿಐ(ಎಂ) ಪಕ್ಷದ ನೇತೃತ್ವದಲ್ಲಿ ವಿಟ್ಲ ನಾಡ ಕಛೇರಿಯಲ್ಲಿ ಧರಣಿ ನಡೆಸಿ ಜಿಲ್ಲಾಧಿಕಾರಿಯವರಿಗೆ, ಇಂದ್ರಕುಮಾರ್ ಕಬಳಿಸಿದ ಸರಕಾರಿ ಭೂಮಿಯನ್ನು ಬಡವರಿಗೆ ಹಂಚಬೇಕೆಂದು 'ಮನವಿ' ಮಾಡಲಾಗಿತ್ತು. ಈ ಬಗ್ಗೆ ಕರಾವಳಿ ಅಲೆ ಮತ್ತಿತರ ಪತ್ರಿಕೆಗಳಲ್ಲಿ ಪ್ರಕಟಣೆಗೊಂಡಿದ್ದು ಇದು ನನಗೆ ಅವಮಾನವಾಗಿದೆ ಎಂದು ಇಂದ್ರಕುಮಾರ್ ಕರಾವಳಿ ಅಲೆ ಪತ್ರಿಕೆಯ ಸಂಪಾಕರು, ಉಪಸಂಪಾದಕರು ಮತ್ತು ರಾಮಣ್ಣ ವಿಟ್ಲ ಸಿಪಿಐ(ಎಂ) ಮುಖಂಡ ಇವರ ಮೇಲೆ ಸಿವಿಲ್ ನ್ಯಾಯಾಲಯ ಬಂಟ್ವಾಳದಲ್ಲಿ ಮೊಕದ್ದಮೆ ಹೂಡಿದ್ದರು. ಪ್ರತಿವಾದಿಗಳ ಪರವಾಗಿ ಲಕ್ಷ್ಮಿಕಾಂತ್ ಭಟ್ (ಎಲ್.ಕೆ.ಅಳಕೆ) ಇವರು ವಾದಿಸಿದ್ದರು.

ಮೊಕದ್ದಮೆಯಲ್ಲಿ ಉಚಿತವಾಗಿ ವಾದಿಸಿದ ವಕೀಲರಿಗೆ ಅಭಿನಂದನೆಯನ್ನು ಸಿಪಿಐ(ಎಂ) ಸಲ್ಲಿಸಿತು ಮತ್ತು ಈ ಮೊಕದ್ದಮೆಯನ್ನು ವಜಾಗೊಳಿಸಿದ ತೀರ್ಪು ನ್ಯಾಯಕ್ಕೆ ಸಿಕ್ಕಿದ ಜಯವೆಂದು ಎ.ರಾಮಣ್ಣ ವಿಟ್ಲ ವಿಶ್ಲೇಷಿಸಿದ್ದಾರೆ.

'ನಮ್ಮ ಮಾನ - ಅಭಿಮಾನಿಗಳಿಗೆ ಬೆಲೆ ಇಲ್ಲದ ಮೇಲೆ ನಮ್ಮ ಮೈಮೇಲೆ ಬಟ್ಟೆ ಇದ್ದರೆಷ್ಟು ಬಿಟ್ಟರೆಷ್ಟು?' ಇಂತಹ ಮಾತುಗಳು ಭಾರತದ ಸಂದರ್ಭದಲ್ಲಿ ಮಹಿಳೆಯೊಬ್ಬರ ಬಾಯಿಂದ ಬರುತ್ತದೆಂದರೆ ಅಥವಾ - 'ಭಾರತದ ಸೈನಿಕರೇ - ನಮ್ಮ ಮೇಲೆ ಅತ್ಯಾಚಾರ ಮಾಡಿ ಬನ್ನಿ...' ಎನ್ನುವ ಘೋಷಣೆಗಳೊಂದಿಗೆ ಸಾರ್ವಜನಿಕ ಬೆತ್ತಲೆ ಪ್ರತಿಭಟನಾ ಪ್ರದರ್ಶನ ನಡೆಸುವ ಪರಿಸ್ಥಿತಿಗೆ ಮಹಿಳೆಯರು ತಳ್ಳಲ್ಪಟ್ಟರೆಂದರೆ ಇದೆಂತಹ ಕ್ರೂರ ವ್ಯವಸ್ಥೆ.

ಮಣಿಪುರ
ಸೈನಿಕರ ದೌರ್ಜನ್ಯ

ಕೆ.ಎಸ್. ವಿಮಲ

ಇಂತಹ ಒಂದು ಸಾರ್ವಜನಿಕ ಪ್ರತಿಭಟನಾ ಪ್ರದರ್ಶನ ನಡೆದದ್ದು ಮಣಿಪುರದ ರಾಜಧಾನಿ ಇಂಫಾಲದ ಅಸ್ಸಾಂ ರೈಫಲ್‌ನ ಕೇಂದ್ರ ಕಛೇರಿಯ ಮುಂದೆ. ಜುಲೈ 15, 2004 ರಂದು ಮಹಿಳೆಯರು ಇಷ್ಟು ರೋಷತಪ್ತರಾಗಿ ಬೀದಿಗಳಿಯಬೇಕಾಗಿ ಬಂದದ್ದಕ್ಕೆ ಕಾರಣ. ಮನೋರಮಾ ದೇವಿ ಎಂಬ 32 ವರ್ಷದ ಮಹಿಳೆಯ ಸಾವು.

<u>ಘಟನೆಯ ವಿವರ :</u> ಜುಲೈ 10, 2004 ರಂದು ಮಧ್ಯರಾತ್ರಿ 12.30 ರ ಸುಮಾರಿಗೆ ಬಮುನ್-ತಂಪೂ ಪ್ರದೇಶದಲ್ಲಿರುವ ಮನೋರಮಾದೇವಿಯ ಮನೆಗೆ ನುಗ್ಗಿದ 17 ಜನ ಅಸ್ಸಾಂ ರೈಫಲ್ ತುಕಡಿಯ ಸೈನಿಕರು ಮನೋರಮಾ ದೇವಿಯನ್ನು ಬಂಧಿಸಿ ತಮ್ಮ ಸುಪರ್ದಿಗೆ ತೆಗೆದುಕೊಂಡು ಹೋದರು. ಹಾಗೆ ಹೋದ ಮನೋರಮಾ ಮತ್ತೆ ಅವಳ ಜನರಿಗೆ ಸಿಕ್ಕಿದ್ದು ಬುಲೆಟ್ ಧಾಳಿಗೆ ತುತ್ತಾಗಿ ಮೃತ ದೇಹವಾಗಿ ಜುಲೈ 11, 2004 ರಂದು. ಹೀಗೆ ಸಿಕ್ಕ ದೇಹದ ಮೇಲೆ ಅಸ್ಸಾಂ ರೈಫಲ್‌ಗಳ ಕಾಮತಪ್ತ ಧಾಳಿಯೂ ನಡೆದಿತ್ತು. ಪರೀಕ್ಷೆಗೆ ಅವಳ ದೇಹದಲ್ಲಿ ಗುರುತುಗಳು ಸಿಗಲಾರದಂತೆ ಮಾಡಲು ಅವಳ ಜನನಾಂಗಗಳಿಗೇ ಗುಂಡು ಹೊಡೆದು ಘಾಸಿ ಮಾಡಲಾಗಿತ್ತು ಎಂದೂ ವರದಿಗಳು ಹೇಳುತ್ತವೆ.

ಇಂತಹ ಬಂಧನಗಳು, ಕೊಲೆಗಳು ಮಣಿಪುರದಂತಹ ಛಿದ್ರಕಾರಿ ಶಕ್ತಿಗಳ ಬೀಡಾಗಿರುವ ಪ್ರದೇಶದ ಜನರಿಗೆ ಹೊಸತೇನಲ್ಲ. ಆದರೆ ಈ ಘಟನೆ ಜನರ ಸಹನೆಯ ಕಟ್ಟೆಯನ್ನೊಡೆದಿದೆ. ಆತಂಕವಾದಿಗಳ ಭಯದ ನೆರಳಿನಲ್ಲೇ ಬದುಕುತ್ತಿರುವ ಮಣಿಪುರದ ಜನ, ಅಸ್ಸಾಂ ರೈಫಲ್‌ನ ಅತಿರೇಕಗಳ ವಿರುದ್ಧ ಹಲವು ರೀತಿಯ ಪ್ರತಿಭಟನೆ ನಡೆಸಿದ್ದಾರೆ. ವಿವಿಧ ರೀತಿಯಲ್ಲಿ ಆಳುವ ಸರ್ಕಾರಗಳ ಗಮನ ಸೆಳೆಯಲು ಪ್ರಯತ್ನಿಸಿದ್ದಾರೆ. ಆದರೆ ಸರ್ಕಾರಗಳು ಈ ಬಗ್ಗೆ ಗಂಭೀರ ಗಮನ ಹರಿಸಲಿಲ್ಲ ಎನ್ನುವುದಕ್ಕೆ ಒಂದು ಜೀವಂತ ಉದಾಹರಣೆ - ಕಳೆದ 3 ವರ್ಷ 9 ತಿಂಗಳಿನಿಂದ - ಐರೋನ್ ಶರ್ಮಿಳಾ ಎಂಬ ಮಹಿಳೆ - ಸಶಸ್ತ್ರ ಸೈನ್ಯದ 'ವಿಶೇಷ ಅಧಿಕಾರ ಕಾನೂನು-1958'ನ್ನು ಹಿಂತೆಗೆದುಕೊಳ್ಳುವಂತೆ ಒತ್ತಾಯಿಸಿ ಮಾಡುತ್ತಿರುವ ಉಪವಾಸ ಸತ್ಯಾಗ್ರಹಕ್ಕೆ ರಾಜ್ಯ - ಕೇಂದ್ರ ಸರ್ಕಾರಗಳು ಕುರುಡಾಗಿ, ಕಿವುಡಾಗಿ ವರ್ತಿಸುತ್ತಿರುವುದು. ಯಾವಾಗ ಪ್ರಜಾಪ್ರಭುತ್ವ ರೀತಿಯ ಹೋರಾಟಗಳಿಗೆ ಬೆಂಬಲ, ಮನ್ನಣೆ ಸಿಗದಾಗುವುದೋ ಆಗ ಜನ ಉರಿದೇಳುವುದು ಪ್ರಜಾಪ್ರಭುತ್ವದ ಲಕ್ಷಣಗಳಲ್ಲೇ ಒಂದು. ಇಂತಹ ಒಂದು ಪ್ರದರ್ಶನ ಜುಲೈ 15, 2004 ರಂದು ಇಂಫಾಲದ ಅಸ್ಸಾಂ ರೈಫಲ್‌ನ ಕೇಂದ್ರ ಕಛೇರಿಯ ಮುಂದೆ 12 ಜನ ಮಹಿಳೆಯರು (ಮಿಯದಾ ಫಿಲ್‌ಬಿ ಫ್ರಂಟಿಯರ್ಸ್‌ನ ಸದಸ್ಯರು) ಸಂಪೂರ್ಣ ನಗ್ನರಾಗಿ ಆಕ್ರೋಶಿಸುವ ಹಂತಕ್ಕೆ ಬಂದು ತಲುಪಿದೆ. ಉಗ್ರವಾದ, ವಿಚ್ಛಿದ್ರಕಾರಿ ಶಕ್ತಿಗಳ, ಆತಂಕವಾದಗಳು, ಅವರ ನಿಗ್ರಹ, ಕಾನೂನು, ಸೈನ್ಯ ಎಂಬಿತ್ಯಾದಿಗಳು ನಮಗೆ ಹೊಸದಲ್ಲ, ಸಮಾಜಘಾತುಕ ಶಕ್ತಿಗಲಳ ಕ್ರೌರ್ಯಕ್ಕೆ ಸಿಲುಕಿ ಬೆಂದು ಬಸವಳಿದ ನಾಡಿನಲ್ಲಿ, ಜನರ ರಕ್ಷಣೆಗೆ, ಉಗ್ರರ ದಮನಕ್ಕಾಗಿಯೇ ನಿಯೋಜಿಸಲ್ಪಟ್ಟ ಸೇನಾ, ಅರೆ ಸೇನಾ ತುಕಡಿಗಳು ಅತಿರೇಕಗಳನ್ನೆಸಗುತ್ತಿರುವುದು ಇದೇ ಮೊದಲೇನಲ್ಲ. ಆದರಲ್ಲಿರುವ ಜಂಗ, ಗಲಭೆಗಳಿಗೆ ಸದಾ ಸುದ್ದಿಯಲ್ಲಿರುವ ಈಶಾನ್ಯಭಾಗದ ರಾಜ್ಯಗಳಿಗಂತೂ ....

ಇಂತಹ ಬಂಧನ, ಕೊಲೆ, ಸುಲಿಗೆಗಳು ಹೊಸತಲ್ಲ. ಮನೋರಮಾರ ಕಥೆ ನಮ್ಮ ನೆನಪನ್ನು 90ರ ದಶಕಕ್ಕೆ ಒಯ್ಯುತ್ತದೆ.

90ರಲ್ಲಿ ಕಲ್ಕತ್ತದಲ್ಲಿ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ರಾಷ್ಟ್ರೀಯ ಸಮ್ಮೇಳನ ನಡೆಯುತ್ತಿತ್ತು. ಭಾರತದ ಮೂಲೆ, ಮೂಲೆಗಳಿಂದ ಬಂದ ಪ್ರತಿನಿಧಿಗಳ ಹೋರಾಟ, ಸಂಘಟನಾ ಅನುಭವಗಳನ್ನು ಕೇಳಲು ಮೈಯೆಲ್ಲಾ ಕಿವಿಯಾಗಿಸಿಕೊಂಡು ಕುಳಿತ ನಮಗೆ ತ್ರಿಪುರಾದ ಸೋದರಿಯೊಬ್ಬರು 'ನನ್ನ ಗಂಡನನ್ನು ನಮ್ಮ ಮನೆಯ ಮುಂದಿನ ಕಂಬಕ್ಕೆ ನನ್ನೆದುರೇ ಕಟ್ಟಿಹಾಕಿ, ಅವನೆದುರೆ, ನನ್ನ ಮೇಲೆ ಕಾಮ ಪಿಶಾಚಿಗಳು ಸಾಮೂಹಿಕ ಅತ್ಯಾಚಾರ ನಡೆಸಿದರು. ನಿಶ್ಚೇತಳಾಗಿ ಬಿದ್ದ ನನ್ನೆದುರೇ ನನ್ನ ಗಂಡನನ್ನು ಕೊಚ್ಚಿ ಕೊಂದರು. ಆದರೆ ದೇಶದ ಐಕ್ಯತೆಗಾಗಿ ಹೋರಾಡುವ ನನ್ನ ನಿರ್ಧಾರ ಬದಲಾಗಲಿಲ್ಲ. ಇದು ಉಗ್ರಗಾಮಿಗಳಿಂದ ನಮ್ಮ ಮೇಲೆ ನಡೆಯುವ ಹಲ್ಲೆ. ಆದರೆ ಇದರಿಂದ ಪಾರು ಮಾಡಲೆಂದೇ ಇರುವ ಅರೆ ಸೇನಾ ತುಕಡಿಗಳಿಂದ ಕೂಡ ಇಂತಹುದೇ ಭಯಂಕರ ಕೃತ್ಯಗಳನ್ನು ನಾವು ಎದುರಿಸುತ್ತೇವೆ. ಹೆಚ್ಚಿನ ಸಂದರ್ಭದಲ್ಲಿ ಉಗ್ರರ ನಿಗ್ರಹದ ಬದಲು ಜನಸಾಮಾನ್ಯರ ಮೇಲೆ ಅವರ ಪ್ರಹಾರಗಳು ನಡೆಯುತ್ತವೆ. ಇದಕ್ಕೆ ಕೇಂದ್ರದಲ್ಲಿ ಆಡಳಿತ ನಡೆಸುತ್ತಿರುವ ಸರ್ಕಾರ ಕೂಡ ತನ್ನ ರಾಜಕೀಯ ಲಾಭಕ್ಕಾಗಿ ಪರೋಕ್ಷವಾಗಿ ಬೆಂಬಲ ನೀಡುತ್ತಿದೆ' ಎಂದು ಅಲ್ಲಿನ ಧಾರುಣ ಪರಿಸ್ಥಿತಿಯನ್ನು ಬಿಚ್ಚಿಟ್ಟಾಗ ಬೆಚ್ಚಿ ಬಿದ್ದೆವು.

ಸರ್ಕಾರ ಉಗ್ರಗಾಮಿಗಳ, ಆತಂಕವಾದಿಗಳ ನಿಗ್ರಹಕ್ಕಾಗಿ ನಿಯೋಜಿಸಿದ ಇಂತಹ ತುಕಡಿಗಳು ಕಾರ್ಯನಿರ್ವಹಿಸಬೇಕಾದರೆ ಕೆಲವೊಮ್ಮೆ ಅಜಾಗರೂಕತೆಯಿಂದ ನಿರಪರಾಧಿಗಳಿಗೆ ತೊಂದರೆಯಾಗಬಹುದು. ಕಾರಣ ಅಪರಾಧ ಪತ್ತೆ ಎಂಬುದು ಸಂಶಯದ ಆಧಾರದಲ್ಲಿಯೇ ಪ್ರಾರಂಭವಾಗುತ್ತದೆ. ಆದರೆ ಘಟಿಸುವ ಸಣ್ಣ-ಪುಟ್ಟ ತಪ್ಪುಗಳಿಂದ ಜಾಗೃತರಾಗದೇ ತಮಗಿರುವ ಅಧಿಕಾರವನ್ನೇ ದುರ್ಬಳಕೆ ಮಾಡಿಕೊಂಡು

ಅನುಭವವನ್ನು ಹೀಗೆ ವಿವರಿಸುತ್ತಿದ್ದರು.

'ಯಾವುದೇ ಹಳ್ಳಿಯೊಂದನ್ನು ಹಾದು ಹೋಗುವ ಸಂದರ್ಭ ಬಂದಾಗ ಆತಂಕವಾದಿಗಳು ಅಲ್ಲಿಯ ಜನರಿಗೆ ಮುಂಚೆಯೇ ತಾಕೀತು ಮಾಡುತ್ತಿದ್ದರು. ಅವರ ಆದೇಶದಂತೆ ಅಂದು ರಾತ್ರಿ ಆ ಹಳ್ಳಿಯಲ್ಲಿ ಬೀದಿ ನಾಯಿಯೂ ಅಡ್ಡಾಡಬಾರದು, ಮನುಷ್ಯರ ಸುಳಿವಂತು ಇರಲೇಬಾರದು. ಏನಾದರೂ ತಪ್ಪಿದಲ್ಲಿ ಮಾರನೇ ದಿನ ಅಲ್ಲಿ ಉಳಿಯುವುದು ಕೇವಲ ಬೂದಿ!

ಅವರ ಆದೇಶಕ್ಕನುಗುಣವಾಗಿಯೇ ಮದುವೆ, ಹಬ್ಬಗಳೂ ನಡೆಯಬೇಕು. ಅಷ್ಟೇ ಏಕೆ ಜನರು ತಮ್ಮ ಇಚ್ಛೆಗನುಸಾರವಾಗಿ ಸಾರ್ವಜನಿಕ ಚಟುವಟಿಕೆಗಳಲ್ಲಿ ಕೂಡ ಪಾಲ್ಗೊಳ್ಳುವಂತಿಲ್ಲ. ಇಂತಹ ಅಪರಾಧಕ್ಕಾಗಿ ಜನವಾದಿ ಮಹಿಳಾ ಸಂಘಟನೆಯ ಅಲ್ಲಿನ ಅಂದಿನ ನಾಯಕಿ ತಮ್ಮ ಮಗನನ್ನೇ ಬಲಿಕೊಡಬೇಕಾಗಿ ಬಂತು. ಅದೂ ಅವರೆದುರಲ್ಲಿಯೇ ಉಗ್ರರ ಬಂದೂಕಿಗೆ ಮಗ ಬಲಿಯಾದದ್ದು.

ಎಂದರೆ ಆತಂಕವಾದಕ್ಕೆ ಬಲಿಯಾದ ಪ್ರದೇಶಗಳಲ್ಲಿ ಬದುಕುವ ಜನರ ಪರಿಸ್ಥಿತಿ ಅತ್ತದರಿ, ಇತ್ತ ಪುಲಿ. ಹಗಲಿನಲ್ಲಿ ಕಾನೂನು ಬದ್ಧವಾದ ಸೈನ್ಯ, ರಕ್ಷಿಸಬೇಕಾದ ಜನರ ಮೇಲೆರಗಿದರೆ, ಅಂತಹ ಕಾನೂನಿನ ಮೂಲ ಉದ್ದೇಶವೇ ಹಾಳಾಗುವುದು ಮತ್ತು ದೇಶ ಪ್ರೇಮಿ ಜನ ಕೂಡ ದೇಶವಿರೋಧೀ ಚಟುವಟಿಕೆಗಳಿಗೆ ಕೈ ಹಾಕಲು ಪ್ರಚೋದನೆ ನೀಡಿದಂತಾಗುವುದು.

ಆತಂಕವಾದವನ್ನು ನಿಗ್ರಹಿಸುವತ್ತ ರಾಜಕೀಯ ಹೆಜ್ಜೆ ಇಡಬೇಕಾದಾಗ ಮುಖ್ಯವಾಗಿ ಗಮನಿಸಬೇಕಾದ ಅಂಶ ಅಲ್ಲಿನ ಜನರ ಪರಿಸ್ಥಿತಿ. ಇಂದಿನ ಮಣಿಪುರ ನಮ್ಮನ್ನು ಹಿಂದಿನ ಪಂಜಾಬಿಗೂ ಒಯ್ಯುತ್ತದೆ. ಒಮ್ಮೆ ಉಗ್ರವಾದಿಗಳ ಬೀಡಾಗಿದ್ದ ಪಂಜಾಬಿನ ಸೋದರಿಯೊಬ್ಬರು ತಮ್ಮ ಅರೆಸೈನ್ಯಗಳ ಧಾಳಿ, ರಾತ್ರಿ ಆತಂಕವಾದಿಗಳ ಹಾವಳಿ. ಬೆಳಗಿನಲ್ಲಿ ಚುನಾಯಿತ ಸರ್ಕಾರ, ಕತ್ತಲಲ್ಲಿ ಉಗ್ರರ ಆಡಳಿತ. ಅಂದು ಪಂಜಾಬ್, ತ್ರಿಪುರಾ ಇಂದು ಮಣಿಪುರ ಈ ಪರಿಸ್ಥಿತಿಗಳನ್ನೆದುರಿಸುತ್ತಿವೆ. ಉಗ್ರವಾದ, ಪ್ರತ್ಯೇಕತಾವಾದ, ವಿಚ್ಛಿದ್ರಕಾರಿ, ಕೋಮುವಾದೀ ಅಟ್ಟಹಾಸಗಳು ಈ ನೆಲಕ್ಕೆ ಹೊಸದಲ್ಲ. ದಣಿವರಿಯದ ಸ್ವಾತಂತ್ರ ಹೋರಾಟಕ್ಕೆ ಮಣಿದು ಭಾರತ ಬಿಟ್ಟು ತೊಲಗಬೇಕಾಗಿ ಬಂದಾಗ ಸಾಮ್ರಾಜ್ಯಶಾಹಿ ಬ್ರಿಟಿಷ್ ಅಧಿಪತ್ಯ ಸುಮ್ಮನೆ ಹೋಗಲಿಲ್ಲ. ಬದಲಿಗೆ ಕಾಶ್ಮೀರ ಮತ್ತು ಈಶಾನ್ಯ ಭಾಗಗಳಲ್ಲಿ ವಿಚ್ಛಿದ್ರಕಾರೀ ಶಕ್ತಿಗಳಿಗೆ ಪ್ರಚೋದನೆ ನೀಡಿ, ಪ್ರತ್ಯೇಕತಾವಾದದ ವಿಷ ಬೀಜ ಬಿತ್ತಿಯೇ ಹೋದರು ಎಂಬುದು ಸರ್ವವೇದ್ಯ ಸತ್ಯ. ಕೇವಲ ಬ್ರಿಟಿಷರು ಮಾತ್ರವಲ್ಲದೇ ಅಮೇರಿಕಾದಂತಹ ಸಾಮ್ರಾಜ್ಯಶಾಹಿ ರಾಷ್ಟ್ರಗಳದೂ ಈ ಕುಕೃತ್ಯದಲ್ಲಿ ಪಾಲಿದೆ. ಇತಿಹಾಸದ ಪುಟಗಳಲ್ಲಿರುವ ಸಿಐಎ ನ ಬ್ರಹ್ಮಪುತ್ರಾ ಯೋಜನೆ (ವಿವಿಧ ಸ್ವರೂಪದ ಚಟುವಟಿಕೆಗಳ ಮೂಲಕ ಭಾರತವನ್ನು ಛಿದ್ರಗೊಳಿಸುವ ಸಿ.ಐ.ಎ. ನ ನೀಲ ನಕ್ಷೆ) ಯಲ್ಲಿ ನಾವು ನಮ್ಮ ದೇಶದಲ್ಲಿ ನಡೆಯುತ್ತಿರುವ ಛಿದ್ರಕಾರಿ ಚಟುವಟಿಕೆಗಳ ಬೇರುಗಳನ್ನು ಹುಡುಕಬೇಕಾಗುತ್ತದೆ. ಇಲ್ಲದಿದ್ದಲ್ಲಿ ನಾಳಿನ ಭಾರತವನ್ನು ಇಂದು ಕಲ್ಪಿಸಿಕೊಳ್ಳಲಾಗದು. ಇಂದು ಮಣಿಪುರದ ಜನ ದಂಗೆಕೋರರಿಗಿಂತ ಹೆಚ್ಚಾಗಿ ಅಲ್ಲಿಯ ಜನರ ಸುರಕ್ಷೆಗಾಗಿಯೇ ನಿಯೋಜಿಸಲ್ಪಟ್ಟ - 1958 ರಿಂದಲೇ ಜಾರಿಯಲ್ಲಿರುವ ಸಶಸ್ತ್ರ ಪಡೆಗಳ ವಿಶೇಷ ಅಧಿಕಾರದ ಕಾನೂನು ಮತ್ತು ಅದರ ಜವಾಬ್ದಾರಿ ಹೊತ್ತ ಅಸ್ಸಾಂ ರೈಫಲ್ ಗಳ ವಿರುದ್ಧ ತಿರುಗಿ ಬೀಳಲು ಕಾರಣಗಳೇನು? ಅಸ್ಸಾಂ ರೈಫಲ್ ತುಕಡಿಯನ್ನು ಹಿಂತೆಗೆದುಕೊಳ್ಳಬೇಕೆನ್ನುವ ಬೇಡಿಕೆ, ದೇಶದ ಭದ್ರತೆಯ ದೃಷ್ಟಿಯಿಂದ ಎಷ್ಟು ಸಾಧು? ಎನ್ನುವ ಕುರಿತು ಗಂಭೀರ ಚಿಂತನೆ ಅಗತ್ಯ.

ಮಣಿಪುರದಂತಹ ರಾಜ್ಯಗಳು ಪ್ರಕ್ಷುಬ್ಧ ಪರಿಸ್ಥಿತಿಯನ್ನು ಎದುರಿಸುತ್ತಿರುವಾಗ, ಅಲ್ಲಿನ ವಿಚ್ಛಿದ್ರಕಾರಿ ಶಕ್ತಿಗಳನ್ನು, ಅವರ ಅಡಗು ತಾಣಗಳಾದ ಬೆಟ್ಟ- ಗುಡ್ಡಗಳನ್ನು ಶೋಧಿಸಿ ಎಳೆದು ಹೊರ ತೆಗೆಯಲು ವಿಶೇಷ ಪರಿಣತಿ ಹೊಂದಿರುವ ಅಸ್ಸಾಂ ರೈಫಲ್ ಮಾತ್ರವೇ ಸಮರ್ಥವಾದುದು. ಹಾಗೆಂದ ಮಾತ್ರಕ್ಕೆ - ತನಗಿರುವ ಪರಮಾಧಿಕಾರವನ್ನು ದುರ್ಬಳಕೆ ಮಾಡಿಕೊಳ್ಳಲು ಅವಕಾಶ ಬಿಲ್‌ಕುಲ್ ಇರಕೂಡದು. ಮತ್ತು ಮಣಿಪುರದ ರಾಜ್ಯವಿಡೀ ಈ ಕಾನೂನನ್ನು ಜಾರಿಯಲ್ಲಿರಿಸುವ ಬದಲು ನಿರ್ದಿಷ್ಟವಾಗಿ ಗುರುತಿಸಿ ಅಲ್ಲಿ ಮಾತ್ರವೇ ಲಾಗೂ ಮಾಡಬೇಕು. ಮತ್ತು ಅತಿ ಮುಖ್ಯವಾಗಿ ಮಣಿಪುರದ ಸಾಂಸ್ಕೃತಿಕ ಕೇಂದ್ರ ಕಾಂಗ್ಲಾ ಫೋರ್ಟ್‌ದಲ್ಲಿರುವ ಅಸ್ಸಾಂ ರೈಫಲ್ ಕೇಂದ್ರ ಕಛೇರಿಯನ್ನು ಸ್ಥಳಾಂತರಿಸುವ ಮೂಲಕ ಅಲ್ಲಿನ ಬುಡಕಟ್ಟು ಜನರ ಸಾಂಸ್ಕೃತಿಕ, ಸಾಮಾಜಿಕ ಸ್ವಾತಂತ್ರ್ಯಕ್ಕೆ ಅನುವು ಮಾಡಿಕೊಡಬೇಕು. ಮತ್ತು ಭಯಗ್ರಸ್ತ ಮಣಿಪುರಿ ಜನರಿಗೆ ಭಾರತ ಸರ್ಕಾರ ಅವರ ರಕ್ಷಣೆಗೆ ಬದ್ಧವಾಗಿದೆ ಎಂಬುದನ್ನು ಸ್ಪಷ್ಟಪಡಿಸುವಂತಹ ದಿಟ್ಟ ಹೆಜ್ಜೆಗಳನ್ನಿಡಬೇಕು. ತಮಗಿರುವ ಪರಮಾಧಿಕಾರವನ್ನು ದುರ್ಬಳಕೆ ಮಾಡಿಕೊಂಡಿದ್ದಲ್ಲದೇ, ಸಂಬಂಧಪಟ್ಟ ಸೈನ್ಯದ ವ್ಯಕ್ತಿಗಳು, ಅಧಿಕಾರಿಗಳು ವಿಚಾರಣೆಗೆ ಹಾಜರಾಗದೇ ಇರುವುದಾಗಿ ವರದಿಯಾಗಿರುವ ಹಿನ್ನಲೆಯಲ್ಲಿ - ಅವರ ಮೇಲೆ ತೆಗೆದುಕೊಳ್ಳುವ ನಿಷ್ಠುರ ಕ್ರಮಗಳಷ್ಟೇ ಜನರಿಗೆ ವಿಶ್ವಾಸ ನೀಡಬಲ್ಲುದು.

ಮಣಿಪುರ ಭಾರತದ ಅವಿಭಾಜ್ಯ ಅಂಗ - ಮಣಿಪುರಿಯರು ಭಾರತೀಯರೇ. ಇಡೀ ಭಾರತ ದೇಶ ಅಲ್ಲಿಯ ಜನರ ಜೊತೆ ಅವರ ಪ್ರಜಾಪ್ರಭುತ್ವವಾದೀ ಹೋರಾಟಕ್ಕೆ ನಿಲ್ಲುತ್ತದೆ ಎಂಬ ಅಂಶವನ್ನು ಅವರಿಗೆ ಮನವರಿಕೆ ಮಾಡಿಕೊಡುವುದು ಮಾತ್ರವೇ ವಿಚ್ಛಿದ್ರಕಾರಿ ಶಕ್ತಿಗಳಿಗೆ, ಅವರ ಹಿಂದಿರುವ ಸಾಮ್ರಾಜ್ಯಶಾಹಿ ಶಕ್ತಿಗಳಿಗೆ ನಾವು ಕೊಡುವ ಉತ್ತರವಾದೀತು.



ಸಶಸ್ತ್ರ ಪಡೆಗಳ ವಿಶೇಷಾಧಿಕಾರ - ಕಾನೂನು 1958

ಪ್ರಕ್ಷುಬ್ಧ ಪರಿಸ್ಥಿತಿ ನಿಯಂತ್ರಣಕ್ಕಾಗಿ ಜಾರಿಗೆ ಬಂದ ಈ ಕಾನೂನಿನ ಪ್ರಕಾರ - ಯಾವುದೇ ಅಧಿಕೃತ ಅಧಿಕಾರಿ ಅಥವಾ ಅವರ ಸಮಾನ ಅಧಿಕಾರ ಹೊಂದಿದ ವ್ಯಕ್ತಿ ವಾರಂಟ್ ಇಲ್ಲದೆಯೇ ಗುಂಡು ಹಾರಿಸುವ, ಬಂಧಿಸುವ ಅಥವಾ ಅಂತಹ ಯಾವುದೇ ಕ್ರಿಯೆಯನ್ನು ಮಾಡುವ ವಿಶೇಷ ಅಧಿಕಾರವನ್ನು ಹೊಂದಿರುತ್ತಾರೆ.

ಪರಮಾಧಿಕಾರವನ್ನು ದುರ್ಬಳಕೆ ಮಾಡದಂತೆ ತಡೆಯಲು ಈಗ ಸೂಚಿಸಲಾಗಿರುವ ಸೂತ್ರಗಳು

1. ನಿವೃತ್ತ ಹೈಕೋರ್ಟ್ ನ್ಯಾಯಾಧೀಶರ ನೇತೃತ್ವದಲ್ಲಿ ಸ.ಪ.ವಿ.ಕಾ 1958 ರ ಬಳಕೆಯ ಕುರಿತು ಪರಿಶೀಲಿಸಲು ಸಮಿತಿ ರಚನೆ.
2. ಮುಂದಿನ ದಿನಗಳಲ್ಲಿ ಯಾರನ್ನೂ ಬಂಧಿಸುವ ಮುನ್ನ ಉನ್ನತ ಅಧಿಕಾರಿಯೊಬ್ಬರ ಪರವಾನಗಿ ಬೇಕು.
3. ಬಂಧಿಸಿದ ವ್ಯಕ್ತಿಯನ್ನು 24 ಘಂಟೆಯೊಳಗೆ ಮ್ಯಾಜಿಸ್ಟ್ರೇಟರ್ ಮುಂದೆ ಹಾಜರುಪಡಿಸಬೇಕು.

ಮಾಡಿದ್ದುಣ್ಣೇ ಮಹ



ಹುಬ್ಬಳ್ಳಿ ನಗರದಲ್ಲಿ ಮತ್ತೊಮ್ಮೆ 'ರಾಷ್ಟ್ರಧ್ವಜ ಭಕ್ತಿ' ಉಕ್ಕೇರಿ ಹರಿಯತೊಡಗಿದೆ. ರಾಷ್ಟ್ರಧ್ವಜದ ಬಗ್ಗೆ ಎಳ್ಳಷ್ಟೂ ಗೌರವ ಇಲ್ಲದವರು, ಹಲವು ಧರ್ಮೀಯರನ್ನು ಒಳಗೊಂಡಿರುವ ಭಾರತವನ್ನು 'ಹಿಂದೂ ರಾಷ್ಟ್ರ' ಎಂದು ಘೋಷಿಸಿ 'ಕೇಸರಿ ಧ್ವಜ'ವನ್ನು ರಾಷ್ಟ್ರದ ಬಾವುಟನ್ನಾಗಿಸಬೇಕೆಂದು ಗುರಿಯಿಟ್ಟುಕೊಂಡವರು ತ್ರಿವರ್ಣ ಧ್ವಜವನ್ನು ಕೈಯಲ್ಲಿ ಹಿಡಿದುಕೊಂಡು ಹುಬ್ಬಳ್ಳಿ ನಗರದ ಬೀದಿಗಳಲ್ಲಿ ದೊಂಬರಾಟವನ್ನು ಆರಂಭಿಸಿದ್ದಾರೆ. ಹತ್ತು ವರ್ಷಗಳ ಹಿಂದೆ ಇಲ್ಲಿಯ ವಿವಾದಿತ ಈದ್ಗಾ ಮೈದಾನದಲ್ಲಿ ರಾಷ್ಟ್ರ ಧ್ವಜವನ್ನು ಹಾರಿಸುವ ಹೆಸರಿನಲ್ಲಿ ಅನಿಯಂತ್ರಿತ ಜನಜಂಗುಳಿಯನ್ನು ಅಲ್ಲಿಗೆ ನುಗ್ಗಿಸಿ ಅಲ್ಲಿರುವ ಈದ್ಗಾವನ್ನು ಕೆಡವಿ ಹಾಕಲು ಹೊರಟಿದ್ದ ಉಮಾಭಾರತಿ ಮತ್ತಿತರರನ್ನು ಪೊಲೀಸರು ಬಂಧಿಸಿದಾಗ, ಹಿಂಸಾಚಾರಕ್ಕೆ ಇಳಿದ ಜನಜಂಗುಳಿಯನ್ನು ಚದರಿಸಲು ಪೊಲೀಸರು ಮಾಡಿದ ಗೋಲಿಬಾರ್‌ನಲ್ಲಿ ನಾಲ್ಕು ಜನ ಪ್ರಾಣ ಕಳೆದುಕೊಂಡಿದ್ದರು. ಈಗ ಮತ್ತೊಮ್ಮೆ ಅದೇ ಉಮಾ ಭಾರತಿ ಬಂಧನದ ವಿಷಯವನ್ನು ಮುಂದಿಟ್ಟು ನಗರದಲ್ಲಿ ಮತ್ತು ರಾಜ್ಯದ ಇತರ ಕಡೆಗಳಲ್ಲಿ ಮುಗ್ಧ ಜನರ ಭಾವನೆಗಳನ್ನು ಕೆರಳಿಸುವ ಪೈಶಾಚಿಕ ಪ್ರಯತ್ನ ಆರಂಭವಾಗಿದ್ದು, ಅದು ಇನ್ನಷ್ಟು ಜನ ಅಮಾಯಕರ ಜೀವಗಳನ್ನು ಬಲಿತೆಗೆದುಕೊಳ್ಳಲಿದೆಯೋ ಎಂಬ ಆತಂಕ ವ್ಯಾಪಕವಾಗಿ ವ್ಯಕ್ತವಾಗುತ್ತಿದೆ. ಆದ್ದರಿಂದಲೇ ಬಿಜೆಪಿ ನೀಡಿದ 'ಬಂದ್' ಕರೆ ರಾಜ್ಯಾದ್ಯಂತ ವಿಫಲವಾಗಿದೆ. ಇವರ ದೊಂಬಿಗಳಲ್ಲೆಲ್ಲಾ ರಕ್ತ ಚೆಲ್ಲಿ, ಇವರನ್ನು ಅಧಿಕಾರಕ್ಕೆ ತಂದನಂತರವೂ ಏನೂ ಪ್ರಯೋಜನವಾಗಿಲ್ಲ ಎಂಬ ಅನುಭವದಿಂದ ಜನತೆ ಹಲವು ಪಾಠಗಳನ್ನು ಕಲಿತಂತೆ ಕಾಣುತ್ತದೆ.

ರಾಷ್ಟ್ರಧ್ವಜವನ್ನು ಹಾರಿಸಿದ್ದೇ ಅಪರಾಧ ಎಂದು ಪರಿಗಣಿಸಿ ಉಮಾ ಭಾರತಿ ಮೇಲೆ ಪ್ರಕರಣ ದಾಖಲು ಮಾಡಲಾಗಿದೆ ಎಂದು ಬಿಂಬಿಸುವ ಪ್ರಯತ್ನ ನಡೆದಿದೆ. ರಾಷ್ಟ್ರದ ತ್ರಿವರ್ಣ ಧ್ವಜಕ್ಕೆ ಗೌರವ ನೀಡುವ ಸಲುವಾಗಿ ಜೀವ ತ್ಯಾಗಕ್ಕೂ ನಾನು ಸಿದ್ಧ ಎಂಬ ಉಮಾಭಾರತಿ ಘೋಷಣೆ ಜನತೆಯ ದಾರಿ ತಪ್ಪಿಸುವ ಪ್ರಯತ್ನವಾಗಿದೆ. ಹತ್ತು ವರ್ಷಗಳಾಗಿವೆ ಘಟನೆ ನಡೆದು ನಿಜ. ವಿಷಯವನ್ನು ಜನತೆ ಮರೆತು ಬಿಟ್ಟಿರುತ್ತಾರೆ. ರಾಷ್ಟ್ರಪ್ರೇಮದ ಮುಖವಾಡ ತೊಟ್ಟು ಎಷ್ಟು ಸುಳ್ಳು ಹೇಳಿದರೂ ಜನ ನಂಬುತ್ತಾರೆ ಎಂದು ಹೊರಟಂತಿದೆ ಚಡ್ಡಿಪಡೆ. ಇದರ ಲಾಭ ಮುಂಬರುವ ಮಹಾರಾಷ್ಟ್ರ ವಿಧಾನಸಭಾ ಚುನಾವಣೆಯಲ್ಲೂ ಪಡೆಯಬಹುದು. ಮಧ್ಯಪ್ರದೇಶ ಸರ್ಕಾರದಲ್ಲಿ ಬುಗಿಲೆದ್ದಿರುವ ಭಿನ್ನಮತಕ್ಕೂ ಪರಿಹಾರ ಪಡೆಯಬಹುದು ಎಂಬುದು ವಾಜಪೇಯಿ, ಅದ್ವಾಣಿಗಳ ಲೆಕ್ಕಾಚಾರ, ಆದರೆ ಕಳೆದ ಲೋಕಸಭಾ ಚುನಾವಣೆಯಲ್ಲಿ ಇವರ ಲೆಕ್ಕಾಚಾರ ತಲೆಕೆಳಗಾದಂತೆ ಈ ಸಲವೂ ಬಿಜೆಪಿಯ ಈ ಷಡ್ಯಂತ್ರ ಅವರಿಗೆ ತಿರುಗುಬಾಣವಾಗದಿರಲಾರದು.

ನಿಜವಾಗಿ ನಡೆದದ್ದೇನು? 1994 ರ ಆಗಸ್ಟ್ 15 ರಂದು ಉಮಾಭಾರತಿ ನಿಷೆದಾಜ್ಞೆಯನ್ನು ಉಲ್ಲಂಘಿಸಿ, ಜನಜಂಗುಳಿಯೊಂದಿಗೆ ಈದಗಾ ಮೈದಾನದತ್ತ ಹೊರಟಾಗ ಪೊಲೀಸರು ಅವರನ್ನು ಬಂಧಿಸಿದರು. ಇಷ್ಟಕ್ಕೇ ಕಲ್ಲು ತೂರಾಟ ಆರಂಭವಾಯಿತು. ಹಲವಾರು ಪೊಲೀಸರು ಗಾಯಗೊಂಡರು. ಜನರ ಗುಂಪನ್ನು ಚದುರಿಸಲು ಪೊಲೀಸರು ಗುಂಡು ಹಾರಿಸಿದರು. ಗಲಭೆಯಲ್ಲಿ ತೊಡಗಿದವರ ಮೇಲೆ ಗುಂಡು ಹಾರಿಸುವ ಬದಲು ಪೊಲೀಸರು ನಿರ್ಜನ ಸ್ಥಳಗಳತ್ತ ಗುಂಡು ಹಾರಿಸಿದರು. ಹಿಂಸಾಚಾರದಲ್ಲಿ ತೊಡಗಿದವರು ಯಾರೂ ಬಲಿಯಾಗಲಿಲ್ಲ. ದೂರದಲ್ಲಿ ತಮ್ಮ ಮನೆಗಳ ಮುಂದೆ ನಿಂತಿದ್ದ ಅಮಾಯಕರಿಗೆ ಗುಂಡು ತಗಲಿ ಅವರು ಸಾಯುವಂತಾಯಿತು. ಹುಬ್ಬಳ್ಳಿ ನಗರದಾದ್ಯಂತ ನಡೆದ ಗಲಭೆಯಲ್ಲಿ ಅಪಾರ ಆಸ್ತಿಪಾಸ್ತಿ ನಷ್ಟವಾಯಿತು. ಅಲ್ಪಸಂಖ್ಯಾತ ಮುಸಲ್ಮಾನರು ಹೆಚ್ಚು ಹಾನಿ ಅನುಭವಿಸುವಂತಾಯಿತು.

ಉಮಾಭಾರತಿ ಮತ್ತು ಇತರರ ಮೇಲೆ ಒಟ್ಟು 10 ಪ್ರಕರಣಗಳು ದಾಖಲಾಗಿದ್ದವು. ಅಕ್ರಮವಾಗಿ ಸಭೆ ಸೇರುವುದು ನಿಷೇದಾಜ್ಞೆ ಉಲ್ಲಂಘನೆ, ಗಲಭೆಗೆ ಪ್ರಚೋದನೆ, ಆಯುಧಗಳನ್ನು ಹಿಡಿದಿರುವುದು, ಕೊಲೆಯತ್ನ, ವಾಹನಗಳಿಗೆ ಬೆಂಕಿ ಇತ್ಯಾದಿ ಶಿಕ್ಷಾರ್ಹ ಅಪರಾಧಗಳಿಗಾಗಿ ಪ್ರಕರಣಗಳು ದಾಖಲಾಗಿದ್ದವು. ಅಪರಾಧಗಳನ್ನು ಎಸಗಿದ್ದು ಗುಂಪಿನಲ್ಲಿ ಯಾರೇ ಆಗಿದ್ದರೂ ಗುಂಪಿನ ನೇತೃತ್ವ ವಹಿಸದವರ ಇಂತಹ ಸಂದರ್ಭಗಳಲ್ಲಿ ಪೊಲೀಸರು ಸಾಮಾನ್ಯವಾಗಿ ಪ್ರಕರಣಗಳನ್ನು ದಾಖಲು ಮಾಡೇ ಮಾಡುತ್ತಾರೆ.



2002 ರ ಜನವರಿಯಲ್ಲಿ ಈ ಪ್ರಕರಣಗಳನ್ನು ಹಿಂತೆಗೆದುಕೊಳ್ಳಲು ಮುಂದಾದಾಗ ನ್ಯಾಯಾಲಯವು ಕೇವಲ 9 ಪ್ರಕರಣಗಳನ್ನು ಮಾತ್ರ ಹಿಂತೆಗೆದುಕೊಳ್ಳಲು ಅನುಮತಿ ನೀಡಿತು. ಹತ್ತನೆಯ ಪ್ರಕರಣ ಹಾಗೆ ಉಳಿಯಿತು.

ಈ ಪ್ರಕರಣಕ್ಕಾಗಿ 2001 ಡಿಸೆಂಬರ್ ಮತ್ತು 2004 ಅಗಸ್ಟ್ ನಡುವಿನ ಅವಧಿಯಲ್ಲಿ 18 ಸಲ ವಾರೆಂಟ್ ಹೊರಡಿಸಲಾಗಿತ್ತು. ಮಧ್ಯಪ್ರದೇಶದ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಳ್ಳುವಾಗಲೇ ಉಮಾಭಾರತಿ ವಿರುದ್ದ ವಾರೆಂಟ್ ಜಾರಿಯಲ್ಲಿತ್ತು. ಅದರೆ ನ್ಯಾಯಾಲಯದ ಮುಂದೆ ಹಾಜರಾಗುವ ಮತ್ತು ಆ ಮೂಲಕ ದೇಶದ ಕಾನೂನು ವ್ಯವಸ್ಥೆಯನ್ನು ಗೌರವಿಸುವ ಸೌಜನ್ಯತೆಯನ್ನು ತೋರಲಿಲ್ಲ. ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಸರ್ಕಾರ ಇರುವಾಗ ನಾಸ್ಯಾಕೆ ನ್ಯಾಯಾಲಯದ ಮುಂದೆ ಶರಣಾಗಬೇಕು ಎಂಬ ಅಹಂಕಾರ ಈ ಬೆಳವಣಿಗೆಗೆ ಕಾರಣ. 18 ವಾರೆಂಟುಗಳಿಗೆ ಕಾಯದೆ ಆರಂಭದಲ್ಲೇ ನ್ಯಾಯಾಲಯದ ಮುಂದೆ ಹಾಜರಾಗಿದ್ದರೆ, ಮುಖ್ಯಮಂತ್ರಿ ಪದವಿಗೆ ರಾಜಿನಾಮೆ ಕೊಡಬೇಕಾದ

ನಿತ್ಯಾನಂದಸ್ವಾಮಿ

ಪ್ರಸಂಗವೂ ಬರುತ್ತಿರಲಿಲ್ಲ. ಕರ್ನಾಟಕದ ಜೈಲುವಾಸದ ರುಚಿ ನೋಡುವ ಪರಿಸ್ಥಿತಿಯೂ ಬರುತ್ತಿರಲಿಲ್ಲ. ಸನ್ಯಾನಿಸಿಗೆ ಇಷ್ಟು ಸೊಕ್ಕು ಇರಬಾರದು: ನ್ಯಾಯಾಲಯದ ಮುಂದೆ ಹಾಜರಾಗಲೂ ನಿರಾಕರಿಸುವ ಮೂಲಕ ವ್ಯಕ್ತವಾದ ಉಮಾಭಾರತಿಯ ಅಹಂ ವ'ಾರಿತ'ನ'ದಿಂದಾಗಿ ನ್ಯಾಯಾಲಯ ಕೊನೆಗೆ ಅವರನ್ನು ಘೋಷಿತ ಆರೋಪಿ ಎಂದು ಘೋಷಿಸಿ, ಜಾಮೀನು ರಹಿತ ವಾರೆಂಟ್ ಹೊರಡಿಸಿತು. ಅವರ ಆಸ್ತಿಯನ್ನು ಮುಟ್ಟುಗೋಲು ಹಾಕಲು ಆದೇಶ ನೀಡಲಾಗಿತ್ತು.


" ಉಮಾಭಾರತಿ ವಿರುದ್ಧ ಸರ್ಕಾರದ ಕ್ರಮ ಸಮರ್ಥನೀಯವಲ್ಲ, ಅವರು ಯಾವುದೇ ಕ್ರಿಮಿನಲ್ ಅಪರಾಧವನ್ನು ಮಾಡಿಲ್ಲ'' ಎಂದು ಪೇಜಾವರಮಠದ ವಿಶ್ವೇಶತೀರ್ಥರು ಹೇಳಿಕೆ ನೀಡಿದ್ದಾರೆ. ಕ್ರಿಮಿನಲ್ ಆರೋಪಕ್ಕೆ ಒಳಗಾಗುವವರೆಲ್ಲರೂ ಅಪರಾಧಿಗಳಾಗಿರುವುದಿಲ್ಲ. ಅಪರಾಧಿ ಹೌದೋ ಅಥವಾ ಅಲ್ಲವೋ ಎಂಬುದನ್ನು ನಿರ್ಣಯಿಸುವುದಕ್ಕಾಗಿಯೇ ನ್ಯಾಯಾಲಯಗಳಿರುವುದು. ನ್ಯಾಯಾಲಯದ ಮುಂದೆ ಹಾಜರಾಗದಿರುವುದು ಸಹ ಶಿಕ್ಷಾರ್ಹ ಅಪರಾಧವೇ. ಪ್ರಜಾಪ್ರಭುತ್ವವನ್ನು ಎಲ್ಲರಿಗೂ ಒಂದೇ ಕಾನೂನು, ಸನ್ಯಾಸಿಗಳಿಗೆ ಒಂದು ಪ್ರತ್ಯೇಕ ಕಾನೂನು ಇರುವುದಿಲ್ಲ. ಸನ್ಯಾಸಿಗಳು ಅಪರಾಧಿಗಳೆಂದು ಸಾಬೀತಾದರೆ ಶಿಕ್ಷೆ ಅನುಭವಿಸಲೇಬೇಕು. ತಮ್ಮ ಶಿಷ್ಯೆ ದೇಶದ ಕಾನೂನಿಗಿಂತಲೂ ಹೆಚ್ಚಿನವಳು ಎಂದೇನಾದರೂ ಪೇಜಾವರರು ಭಾವಿಸುತ್ತಿದ್ದಿರಬಹುದೆ!

ಒಂದು ರಾಜ್ಯದ ಮುಖ್ಯ ಮಂತ್ರಿಯಾಗಿ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡಬೇಕಾದವರೂ ಸ್ವತಃ ಅದರ ಉಲ್ಲಂಘನೆ ಮಾಡುವುದನ್ನು ಒಪ್ಪಬಹುದೆ? ತನ್ನ ತಪ್ಪನ್ನು ಮುಚ್ಚಿಸುವ ಉದ್ದೇಶದಿಂದ ರಾಷ್ಟ್ರಧ್ವಜದ ದೊಂಬರಾಟಕ್ಕೆ ಇಳಿದಿರುವುದು ಖಂಡನೀಯ. ಇದು ರಾಷ್ಟ್ರಧ್ವಜದ ದುರ್ಬಳಕೆ, ರಾಷ್ಟ್ರಧ್ವಜ ಅಗೌರವ ಕಾನೂನಿನ ದೃಷ್ಟಿಯಿಂದ ಇನ್ನೊಂದು ಅಪರಾಧವೇ ಆಗಿದೆ.

ಈದ್ಗಾ ಮೈದಾನ ವಿವಾದ:

ಕನ್ನಡದ ಬಹುತೇಕ ದಿನಪತ್ರಿಕೆಗಳು ಈ ವಿವಾದವನ್ನು ರಾಷ್ಟ್ರಧ್ವಜಾರೋಹಣದ ವಿವಾದ ಎಂದೇ ವರ್ಣಿಸಲು ಪ್ರಯತ್ನಪಟ್ಟಿವೆ. ಅಂದು ವಿವಾದಿತ ಸ್ಥಳದಲ್ಲಿ ಪೊಲೀಸರ ಕಣ್ಣುತಪ್ಪಿಸಿ ಧ್ವಜವನ್ನು ಹಾರಿಸಿದವರ ಮೇಲೆ ಯಾವುದೇ ಪ್ರಕರಣ ದಾಖಲಾಗಿಲ್ಲ. ಧ್ವಜಾರೋಹಣ ಮಾಡುವುದು ಅಪರಾಧವೆಂದು ಪರಿಗಣಿಸುವ ಪ್ರಶ್ನೆಯೇ ಇಲ್ಲ. ಪ್ರಶ್ನೆ ಇರುವುದು ಅದೊಂದು

'ಧ್ವಜಾರೋಹಣ' - ಕಿರುಕುಳದ ಒಂದು ಉದಾಹರಣೆಯಷ್ಟೇ



— ಗಿರೀಶ್ ಕಾರ್ನಾಡ್

ಅಂಜುಮನ್-ಎ-ಇಸ್ಲಾಂ 1905 ರಲ್ಲಿ ಸ್ಥಾಪಿಸಿದ ಒಂದು ಶೈಕ್ಷಣಿಕ ಸಂಸ್ಥೆ. ಅದು ಹಲವು ಶಾಲೆಗಳು, ಕಾಲೇಜುಗಳು ಮತ್ತು ಶೈಕ್ಷಣಿಕ ಸಂಸ್ಥೆಗಳನ್ನು ನಡೆಸುತ್ತದೆ. ಆದರ ವಿದ್ಯಾರ್ಥಿಗಳಲ್ಲಿ ಮೂರನೇ ಒಂದರಷ್ಟು ಮಾತ್ರ ಮುಸಲ್ಮಾನರು. ಇತರರು ಹೆಚ್ಚಾಗಿ ಹಿಂದುಳಿದ ವರ್ಗಗಳಿಂದ ಬಂದವರು. ಅದು ನೆಹರೂರವರ ಹೆಸರಿಟ್ಟಿರುವ ಒಂದು ಶಾಲೆಗಳನ್ನು ನಡೆಸುತ್ತದೆ. ಪ್ರತಿ ಆಗಸ್ಟ್ 15 ಮತ್ತು ಜನವರಿ 26 ರಂದು ಎಲ್ಲಾ ಅಂಜುಮನ್ ಸಂಸ್ಥೆಗಳಲ್ಲಿ ರಾಷ್ಟ್ರೀಯ ಧ್ವಜವನ್ನು ಹಾರಿಸಲಾಗುತ್ತದೆ, ರಾಷ್ಟ್ರಗೀತೆಯನ್ನು ಹಾಡಲಾಗುತ್ತದೆ(ಆರ್ ಎಸ್ ಎಸ್ ಬಗ್ಗೆ ಇಷ್ಟು ಹೇಳಲು ಸಾಧ್ಯವಿಲ್ಲ).

ಧ್ವಜದ ಪ್ರಶ್ನೆಯು ಪರಿಹಾರ ಹುಬ್ಬಳ್ಳಿ-ಧಾರವಾಡದ ಮುಸಲ್ಮಾನರ ಬದುಕನ್ನು ಸುಲಭಗೊಳಿಸುತ್ತದೆಯೇ? 1984 ರಿಂದ ಮುಸಲ್ಮಾನ ಸಮುದಾಯ ಮೊಹರ್ರಂಗಳನ್ನು ಆಚರಿಸುವುದನ್ನು ನಿಲ್ಲಿಸಿತು. ಏಕೆಂದರೆ ಸಮಾನ್ಯವಾಗಿ ಹಾಗೆ ಆಚರಿಸಿದಾಗ ತೊಂದರೆಗಳು ಆಗುತ್ತಿದ್ದವು (ನನ್ನ ಬಾಲ್ಯದಲ್ಲಿ ಹಿಂದೂಗಳು ಮೊಹರ್ರಂ ಆಚರಣೆಗಳಲ್ಲಿ ಭಾಗವಹಿಸುತ್ತಿದ್ದರು)

ಹಿಂದಿನ ವರ್ಷಗಳಲ್ಲಿ ಹಲವುಬಾರಿ, ಮತ್ತೆ ಈ ವರ್ಷ ಈದ್-ಮಿಲಾದ್‌ನ ದಿನದ ಬೃಹತ್ ಮೆರವಣಿಗೆಯನ್ನು ಗಲಭೆಗಳ ಭಯದಿಂದಾಗಿ ರದ್ದು ಮಾಡಲಾಗಿದೆ. ಮದುವೆ ಸಮಾರಂಭಗಳಲ್ಲಿ ಸಂಗೀತ ಮತ್ತು ಪಟಾಕಿಗಳನ್ನು ಸುಡುವುದನ್ನು ಮುಸಲ್ಮಾನ ಸಮುದಾಯ ನಿಲ್ಲಿಸಿಬಿಟ್ಟಿದೆ.

ಈದ್‌ಗಾ ಮೈದಾನದ ಪಕ್ಕದಲ್ಲಿ ಸೂಫೀಸಂತ, ರಾಜಾ ಭಾಘ್‌ಸವರ್‌ನ ದರ್ಗಾ ಇದೆ. ಅದು ಹಿಂದೂ ಮತ್ತು ಮುಸಲ್ಮಾನ ಭಕ್ತರನ್ನು ಆಕರ್ಷಿಸುತ್ತಿತ್ತು. ಪರಂಪರೆಯಿಂದ ಹಿಂದೂ ಪೂಜಾರಿಗಳಿರುತ್ತಿದ್ದ ಈ ಮುಸಲ್ಮಾನ ಪೂಜಾ ಸ್ಥಳವನ್ನು ಈದ್ಗಾ ಒಂದು ಹಿಂದೂ ಪೂಜಾ ಸ್ಥಳವಾಗಿ ಪರಿವರ್ತಿಸಲಾಗಿದೆ. ಕೇಸರೀ ಬಾವುಟಗಳು ಅದರ ಮೇಲೆ ಹಾರಾಡುತ್ತಿವೆ. ಈ ಸಂತನ ಉರುಸನ್ನು ಈಗ ಚಂಗದೇವ ಮಹಾರಾಜನ ಜಾತ್ರೆ ಎನ್ನಲಾಗುತ್ತಿದೆ. ಮುಸಲ್ಮಾನರು ಪೊಲೀಸರಲ್ಲಿ ಒಂದು ದೂರು ದಾಖಲಿಸಿದಾಗ ಶಾಂತರಾಗಿರಿ, ಅಧಿಕಾರಿಗಳು ಈ ಪ್ರಶ್ನೆಯನ್ನು ಬಗೆಹರಿಸುತ್ತಾರೆ ಎಂದು ಅವರಿಗೆ ಹೇಳಲಾಯಿತು. ನಿಜ, ಇದುವರೆಗೆ ಏನೂ ಮಾಡಿಲ್ಲ. ಬದಲಿಗೆ, ಈ ಪರಿವರ್ತಿತ ಪೂಜಾಸ್ಥಳವನ್ನು ನ್ಯಾಯಾಲಯದ ದಸ್ತಾವೇಜುಗಳಲ್ಲಿ ಅಂಜುಮನ್ ವಿರುದ್ಧದ ಕೇಸನ್ನು ಬಲಪಡಿಸಲು ಬಳಸಲಾಗಿದೆ. ಮುಸ್ಲಿಂ ಸಮುದಾಯ ತನ್ನ ಸ್ಮಶಾನ ಪ್ರದೇಶದ ಮೂಲಕ ಒಂದು ಹೆದ್ದಾರಿ ಕಟ್ಟಲು ಅವಕಾಶ ನೀಡಿತು. ಆದರೆ ತನ್ನ ಸಮಾಧಿಗಳನ್ನು ರಕ್ಷಿಸಲು ಅವರು ಒಂದು ಕಾಂಪೌಂಡ್ ಗೋಡೆ ಕಟ್ಟಲಾರಂಭಿಸಿದಾಗ ಅದರ ವಿರುದ್ಧ ಒಂದು ತಡೆಯಾಜ್ಞೆಯನ್ನು ತರಲಾಯಿತು. ಈ ಮೂಲಕ ತಮ್ಮದೇ ಸ್ವಂತ ಆಸ್ತಿಗೆ ಆವರಣ ಹಾಕದಂತೆ ಅವರನ್ನು ತಡೆಯಲಾಯಿತು.

ಧ್ವಜಾರೋಹಣ ಪ್ರಶ್ನೆ ಕಳೆದ ಎರಡು ದಶಕಗಳಲ್ಲಿ ಕರ್ನಾಟಕದ ಮುಸಲ್ಮಾನ ಸಮುದಾಯ ನೀಡುತ್ತಿರುವ ಕಿರುಕುಳದ, ಅದರ ವಿರುದ್ಧ ಮಾಡುತ್ತಿರುವ ದೂಷಣೆಗಳು ಕೇವಲ ಒಂದು ಉದಾಹರಣೆಯಷ್ಟೆ.


...ಾಯಿತ್ತು!

ವಿವಾ[illegible]ತ ಸ್ಥಳ ಎಂಬುದು.

ಹುಬ್ಬಳ್ಳಿ ಮಹಾನಗರ ಪಾಲಿಕೆ ಮತ್ತು ಅಲ್ಲಿನ ಒಂದು ಮುಸ್ಲಿಂ ಟ್ರಸ್ಟ್ ನಡುವೆ ಈ ಮೈದಾನದ ಒಡೆತನದ ಬಗ್ಗೆ ಅದೊಂದು ಹಳೆಯ ವಿವಾದ ಅದರಲ್ಲಿ ಯಾವ ರಾಜಕೀಯವೂ ಇರಲಿಲ್ಲ. ಮೈದಾನದ ನಡುವೆ ಈದ್ಗಾ ಇರುವ ಈ ಸ್ಥಳವನ್ನು ಮುಸಲ್ಮಾನರು ಪ್ರಾರ್ಥನೆಗೆ ಬಳಸುತ್ತಿದ್ದಾರೆ. 1920 ರಲ್ಲಿ ಹುಬ್ಬಳ್ಳಿ ಮುನಿಸಿಪಾಲಿಟಿ ಸ್ಥಾಪನೆಯಾಗಿತ್ತು. 1921 ರಲ್ಲಿ ಸುಮಾರು 991 ಚದರ ಗಜ ವಿಸ್ತೀರ್ಣದ ಈ ಮೈದಾನವನ್ನು ವರ್ಷಕ್ಕೆ ಒಂದು ರೂ. ಬಾಡಿಗೆ ಆದಾರದಲ್ಲಿ 999 ವರ್ಷಗಳ ಅವಧಿಗೆ ಲೀಸ್ ಆಧಾರದಲ್ಲಿ ಅಂಜುಮನ್ ಸಂಸ್ಥೆಗೆ ನೀಡಲಾಯಿತು. ಮೈದಾನದ ಸುತ್ತಲೂ ಆವರಣ ಗೋಡೆ ಕಟ್ಟಲು ಅನುಮತಿ ನೀಡಲಾಗಿತ್ತಾದರೂ ಇದುವರೆಗೆ ಅಂತಹ ಒಂದು ಗೋಡೆಯು ನಿರ್ಮಾಣ ಆಗಿರಲಿಲ್ಲ. 1922 ರಲ್ಲಿ ಇದನ್ನು ಅಂದಿನ ಬಾಂಬೆ ಸರ್ಕಾರ ಅನುಮೋದಿಸಿತು. 1930 ರಲ್ಲಿ ಇದರ ನೊಂದಾವಣೆಯಾಯಿತು.

1960 ರಲ್ಲಿ ಅಂಜುಮನ್ ಮೈದಾನದ ಒಂದು ಬದಿಯಲ್ಲಿ ಒಂದುಕಟ್ಟಡ ನಿರ್ಮಾಣ ಮಾಡಿಕೊಳ್ಳಲು ಅನುಮತಿಯನ್ನು ಕೋರಿತು. ನೆಲ ಮಹಡಿಯನ್ನು ವಾಣಿಜ್ಯ ಸಂಕೀರ್ಣವಾಗಿಯೂ ಮೇಲ್‌ಮಹಡಿಯನ್ನು ಶಿಕ್ಷಣ ಸಂಸ್ಥೆ ನಡೆಸಲು ಬಳಸುವುದು ಅದರ ಉದ್ದೇಶವಾಗಿತ್ತು. ಬೆಳಗಾಂವ್ ವಿಭಾಗಾಧಿಕಾರಿ ಈ ಪ್ರಸ್ತಾವವನ್ನು ಮಂಜೂರು ಮಾಡಿದರು. ಅಂದಿನ ಮೈಸೂರು ಸರ್ಕಾರವೂ ಅನುಮತಿ ನೀಡಿತು. ಅಲ್ಲಿಂದ ಸಮಸ್ಯೆ ಉದ್ಭವವಾಯಿತು. ನಗರದ ಪ್ರಮುಖ ಸ್ಥಳದಲ್ಲಿ ಮುಸಲ್ಮಾನರು ವಾಣಿಜ್ಯ ಸಂಕೀರ್ಣವನ್ನು ಅಭಿವೃದ್ಧಿಪಡಿಸುವುದು ಹುಬ್ಬಳ್ಳಿಯ ಹಿಂದು ಕೋಮಿನ ವ್ಯಾಪಾರಸ್ಥರಿಗೆ ನುಂಗಲಾರದ ತುತ್ತಾಯಿತು.

ಹುಬ್ಬಳ್ಳಿ ಮುನ್ಸಿಫ್ ನ್ಯಾಯಾಲಯವು 1972 ರಲ್ಲಿ ನೀಡಿದ ತೀರ್ಪು ಅಂಜುಮನ್ ವಿರುದ್ಧವಾಗಿತ್ತು. ಉಚ್ಚ ನ್ಯಾಯಾಲಯದ ಮುಂದೆ



ಕೃಪೆ : ದಿ ಹಿಂದೂ

ಮೇಲ್ಮನವಿ ಸಲ್ಲಿಸಲ್ಪಟ್ಟಿತು. 1992 ರಲ್ಲಿ ಹೊರಬಿದ್ದ ತೀರ್ಪು ಕೆಳ ನ್ಯಾಯಾಲಯಗಳ ತೀರ್ಪುಗಳನ್ನು ಎತ್ತಿಹಿಡಿಯಿತು. ತೀರ್ಪಿನ ಮುಖ್ಯಾಂಶಗಳು ಹೀಗಿವೆ.

ಈದ್ಗಾ ಮೈದಾನ ಕೇವಲ ಅಂಜುಮನ್ ಆಸ್ತಿ ಅಲ್ಲ. ಅದು ಹುಬ್ಬಳ್ಳಿ, ಧಾರವಾಡ ಮಹಾನಗರ ಪಾಲಿಕೆಗೆ ಸೇರಿದ್ದು. ವರ್ಷದಲ್ಲಿ ಎರಡು ದಿನ (ಬಕ್ರೀದ್ ಮತ್ತು ರಂಜಾನ್) ಪ್ರಾರ್ಥನೆಗಾಗಿ ಮೈದಾನವನ್ನು ಲೀಸ್ ಆಧಾರದಲ್ಲಿ ಅಂಜುಮನ್‌ಗೆ ನೀಡಲಾಗಿದೆ. ಅದನ್ನು ಯಾವುದೇ ವಾಣಿಜ್ಯ [illegible] ಉದ್ದೇಶಕ್ಕಾಗಿ ಬಳಸಕೂಡದು. ಅಲ್ಲಿ [illegible] 45 ದಿನಗಳ ಒಳಗಾಗಿ ಕೆಡವಿ ಹಾಕಬೇಕು. ಈ ತೀರ್ಪಿನ ವಿರುದ್ಧ ಅಂಜುಮನ್ ಸರ್ವೋಚ್ಚ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಿ ತಡೆಯಾಜ್ಞೆಯನ್ನು ಪಡೆಯಿತು.

1992 ರಲ್ಲಿ ಡಾ.ಮುರಳಿ ಮನೋಹರ ಜೋಷಿ ಶ್ರೀನಗರದ ಲಾಲ್ ಚೌಕ್‌ದಲ್ಲಿ ರಾಷ್ಟ್ರಧ್ವಜ ಹಾರಿಸುವ ಕಾರ್ಯಕ್ರಮವನ್ನು ಪ್ರಕಟಿಸಿದಾಗ ಸಂಘಪರಿವಾರದ ಸಂಘಟನೆಗಳು ಹುಬ್ಬಳ್ಳಿ ಈದ್ಗಾ ಮೈದಾನದಲ್ಲಿ ರಾಷ್ಟ್ರಧ್ವಜ ಹಾರಿಸುವ ಕಾರ್ಯಕ್ರಮವನ್ನು ನಿಗದಿಪಡಿಸಿದವು. ಪೊಲೀಸರು ಪ್ರಕರಣವು ನ್ಯಾಯಾಲಯದ ಮುಂದೆ ಇರುವುದರಿಂದ ಅನುಮತಿ ನಿರಾಕರಿಸಿದರು. 1992 ರ ಜನವರಿ 26 ರಂದು ಸುಮಾರು 50 ರಷ್ಟು ಜನರ ಗುಂಪೊಂದು ಈದ್ಗಾ ಮೈದಾನದಲ್ಲಿ ಧ್ವಜಾರೋಹಣ ಮಾಡಲು ಪ್ರಯತ್ನಪಟ್ಟಾಗ ಪೊಲೀಸರು ಅವರ ಪ್ರಯತ್ನವನ್ನು ವಿಫಲಗೊಳಿಸಿದರು. ಅಂದಿನಿಂದ ಈದ್ಗಾ ಮೈದಾನದಲ್ಲಿ ರಾಷ್ಟ್ರಧ್ವಜವನ್ನು ಹಾರಿಸಿಯೇ ತೀರುತ್ತೇವೆ ಎಂಬ ನಿರ್ಧಾರದೊಂದಿಗೆ "ರಾಷ್ಟ್ರಧ್ವಜ ಗೌರವ ಸಂರಕ್ಷಣಾ ಸಮಿತಿ"ಯೊಂದನ್ನು ರಚಿಸಲಾಯಿತು.

ಅಂದಿನಿಂದ ಪ್ರತಿವರ್ಷ ಆಗಸ್ಟ್ 15 ರಂದು ಮತ್ತು ಜನವರಿ 26 ರಂದು ಈ ಸಮಿತಿಯ ನೇತೃತ್ವದಲ್ಲಿ ಧ್ವಜ ಹಾರಿಸುವ ಪ್ರಯತ್ನ ಮುಂದುವರೆಯಿತು. ಸುತ್ತುಮುತ್ತಲಿನ ಪ್ರದೇಶಗಳಿಂದ ಸಾವಿರಾರು ಜನರನ್ನು ಸೇರಿಸುವ ಪ್ರಯತ್ನ ನಡೆಯಿತು. ಧ್ವಜಾರೋಹಣದ ಹೆಸರಿನಲ್ಲಿ ಅಲ್ಲಿರುವ ಈದ್ಗಾವನ್ನು ನಾಶಮಾಡಬಹುದೆಂಬ ಆತಂಕ ನಿಜವೇ ಆಗಿತ್ತು. ಆದರೂ ಸಹ ಅಂಜುಮನ್ ಈ ವಿವಾದದ ಕುರಿತು ಮೌನವಹಿಸಿತು.

ಹುಬ್ಬಳ್ಳಿಯ ದೇವೇಂದ್ರ ನಾಯ್ಕ್ ಎಂಬವನು ಹುಬ್ಬಳ್ಳಿ ಮುನ್ಸಿಫ್ ಕೋರ್ಟಿಗೆ ಅರ್ಜಿಸಲ್ಲಿಸಿ ಅಗಸ್ಟ್ 15 ಮತ್ತು ಜನವರಿ 26ರಂದು ಈದ್ಗಾ ಮೈದಾನದಲ್ಲಿ ರಾಷ್ಟ್ರಧ್ವಜ ಹಾರಿಸಲು ಅನುಮತಿ ಕೋರಿದರು. ಕೋರ್ಟ್ ಅನುಮತಿ ನಿರಾಕರಿಸಿತು. ರಾಷ್ಟ್ರಧ್ವಜ ಗೌರವ ಸಂರಕ್ಷಣಾ ಸಮಿತಿಯು ಉಚ್ಚ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿ ಧ್ವಜಾರೋಹಣಕ್ಕೆ ಅನುಮತಿ ಕೋರಿತು. ಉಚ್ಚ ನ್ಯಾಯಾಲಯ ತೀರ್ಮಾನವನ್ನು ರಾಜ್ಯ ಸರ್ಕಾರಕ್ಕೆ ಬಿಟ್ಟಿತು. ಹೀಗೆ ಸರ್ಕಾರ ಮತ್ತು ಸಮಿತಿಯ ನಡುವೆ ವಿವಾದ ಮುಂದುವರೆಯಿತು. ಆದರೆ ಈದ್ಗಾ ಮೈದಾನದಲ್ಲಿ ರಾಷ್ಟ್ರಧ್ವಜ ಹಾರಿಸಲು ಹುಬ್ಬಳ್ಳಿಯ ಮುಸಲ್ಮಾನರು ವಿರೋಧಿಸುತ್ತಿದ್ದಾರೆ ಎಂಬ ವ್ಯವಸ್ಥಿತವಾದ ಅಪಪ್ರಚಾರ ಮಾಡಲಾಯಿತು. ಮುಸಲ್ಮಾನರ ವಿರುದ್ಧ ದ್ವೇಷವನ್ನು ಹರಡುವ ಉದ್ದೇಶದಿಂದ 1994 ರಲ್ಲಿ ಭಾರಿ ಸಂಖ್ಯೆಯಲ್ಲಿ ಜನರನ್ನು ಸೇರಿಸಲಾಯಿತಲ್ಲದೆ ಆರ್‌ಎಸ್‌ಎಸ್ ನಿರ್ದೇಶನದಂತೆ ಮುಸಲ್ಮಾನರ ವಿರುದ್ಧ ಬೆಂಕಿ ಉಗುಳುವ ಖ್ಯಾತಿಯ ಸಾಧ್ವಿ ಉಮಾಭಾರತಿಯವರನ್ನು ಕಳುಹಿಸಲಾಯಿತು. ಆರ್‌ಎಸ್‌ಎಸ್ ಬಯಸಿದಂತೆ ಅಂದು ಹುಬ್ಬಳ್ಳಿಯಲ್ಲಿ ಅಮಾಯಕರ ರಕ್ತ ಹರಿಯಿತು. ಇಂದು ರಾಜ್ಯದ ಜನತೆಗೆ ಬಿಜೆಪಿಯ ರಾಷ್ಟ್ರಧ್ವಜದ ಮೇಲಿನ ಪ್ರೀತಿಯ ನಿಜ ಸ್ವರೂಪ ಅರ್ಥವಾಗತೊಡಗಿದೆ. ಇದು ಬಿಜೆಪಿ ನೀಡಿದ ಬಂದ್ ಕರೆಗೆ ದೊರೆತ ನಿರಸ ಪ್ರತಿಕ್ರಿಯೆಯಲ್ಲಿ ವ್ಯಕ್ತವಾಗಿದೆ. ಇವರ ದೊಂಬರಾಟಕ್ಕೆ ಕಡಿವಾಣ ಹಾಕಲು ಸರ್ಕಾರ ದೃಢವಾದ ಕ್ರಮ ಕೈಗೊಳ್ಳುವುದು ಅಗತ್ಯವಿದೆ. ಈ ದಿಶೆಯಲ್ಲಿ ಮುಖ್ಯಮಂತ್ರಿ ಧರ್ಮಸಿಂಗ್ ಅವರು ಇಲ್ಲಿಯವರೆಗೆ ತೆಗೆದುಕೊಂಡ ನಿಲುಮೆಯನ್ನು ರಾಜ್ಯದ ಜನತೆ ಬೆಂಬಲಿಸುವುದು ಯೋಗ್ಯವಾಗಿದೆ.

ಕಾರ್ಮಿಕರು ಸೆಪ್ಟೆಂಬರ್ ಹೋರಾಟದತ್ತ....

— ವಿ.ಜೆ.ಕೆ.ನಾಯರ್

ಸಿಐಟಿಯು ವಿನ ಕರ್ನಾಟಕ ರಾಜ್ಯ ಸಮಿತಿ ಸರ್ಕಾರ್ರವು ತನ್ನ ಕಾರ್ಮಿಕ ನೀತಿಯನ್ನು ಬದಲಿಸಬೇಕು ಎಂದು ಒತ್ತಾಯಿಸಿ ಸೆಪ್ಟೆಂಬರ್ 2 ರಿಂದ ಒಂದು ಹೋರಾಟವನ್ನು ಆರಂಭಿಸುತ್ತಿದೆ. ಆ ದಿನ ಕಾರ್ಮಿಕರ ಒಂದು ಬೃಹತ್ ಮತಪ್ರದರ್ಶನದ ಮೂಲಕ ಸರ್ಕಾರ ರಾಜ್ಯದಲ್ಲಿನ ದುಡಿಯುವ ಜನಗಳಿಗೆ ಸಂಬಂಧಪಟ್ಟ ಸಮಸ್ಯೆಗಳನ್ನು ಗಮನಕ್ಕೆ ತೆಗೆದುಕೊಳ್ಳುವಂತೆ ಆಗ್ರಹಿಸಲಾಗುವುದು.

ಹದೆಗೆಡುತ್ತಿರುವ ಪರಿಸ್ಥಿತಿ

ಉದಾರೀಕರಣ ನೀತಿ ಈಗಾಗಲೇ ಕಾರ್ಮಿಕರ ಹಿತಾಸಕ್ತಿಗಳಿಗೆ ಸರಿಪಡಿಸಲಾರದಂತಹ ಹಾನಿ ಉಂಟು ಮಾಡಿದೆ. ದೇಶದಲ್ಲಿನ ಕಾರ್ಮಿಕಕಾನೂನುಗಳ ವಿರುದ್ಧ ಬೊಬ್ಬೆ, ಉದ್ಯೋಗಗಳ ಖಾಯಂ ಸ್ಥಾನಮಾನದ ವಿರುದ್ಧ ಧಾಳಿಗಳು, ಉತ್ಪಾದನೆಯನ್ನು ಸಂಘಟಿತ ಉದ್ದಿಮೆಗಳಿಂದ ಅಸಂಘಟಿತ ವಲಯಗಳಿಗೆ ವರ್ಗಾಯಿಸುವುದು ಇತ್ಯಾದಿಗಳು ಕಾರ್ಮಿಕ ಸ್ಥಿತಿಯನ್ನು ದುರ್ಬಲಗೊಳಿಸಿದೆ. ಅತ್ತ ಮಾಲಕರ ಸ್ಥಿತಿಯನ್ನು ಬಲಪಡಿಸಿದೆ. ಎಲ್ಲಾ ಸೇವಾವಲಯದಲ್ಲಿ ಕಾಂಟ್ರಾಕ್ಟ್ ಲೇಬರ್ ಪದ್ಧತಿ ಹೆಚ್ಚುತ್ತಿದೆ. ಸರ್ಕಾರದ ವಿವಿಧ ಕ್ಷೇತ್ರಗಳಿಂದ ಹಿಂದೆಗೆಯುತ್ತಿರುವ ಹೆಸರಲ್ಲಿ ಸರಕಾರೀ ನೇಮಕಾತಿಗಳನ್ನು ನಿಲ್ಲಿಸಲಾಗಿದೆ. ಈ ಜಾಗಗಳಲ್ಲಿ ಕಾಟ್ರಾಕ್ಟ್ ನೌಕರರನ್ನು ನೇಮಿಸಿಕೊಳ್ಳಲಾಗುತ್ತಿದೆ. ಇಲ್ಲವೇ ಅದನ್ನು ಸ್ವಯಮಿಚ್ಛೆಯ (Voluntary) ಕೆಲಸ ಎಂದು ಕರೆಯಲಾಗುತ್ತಿದೆ. ಇದೆಲ್ಲದರ ಒಟ್ಟು ಫಲಿತಾಂಶವೆಂದರೆ ಉದ್ಯೋಗದ ಶರತ್ತುಗಳು ಕಾರ್ಮಿಕರಿಗೆ ಪ್ರತಿಕೂಲವಾಗಿಬಿಟ್ಟಿವೆ.

ಅಮಾನವೀಯ ಮುಖದ ಸುಧಾರಣೆಗಳು

ಸುಧಾರಣೆಗಳು ಮಾನವೀಯ ಮುಖ ಹೊಂದಿರುತ್ತವೆ ಎಂದು ಸರ್ಕಾರಗಳು ಹೇಳಿದರೂ, ವಾಸ್ತವವಾಗಿ ಅವು ತದ್ವಿರುದ್ಧವಾಗಿವೆ. ಈಗ ಆಗುತ್ತಿರುವ ಸುಧಾರಣೆಗಳ ಪ್ರತಿಯೊಂದು ಅಂಶಕ್ಕೂ ರಕ್ತಪಿಪಾಸು ಬಂಡವಾಳದ ಕ್ರೂರ ಮುಖ ಬಿಟ್ಟರೆ ಬೇರೆ ಯಾವ ಮುಖವೂ ಇಲ್ಲ. ಮುಚ್ಚಿದ ಉದ್ದಿಮೆಗಳಲ್ಲಿನ ಕಾರ್ಮಿಕಕರೆದುರು ಪ್ರಕಟವಾಗಿರುವ ಮುಖ ಯಾವುದು? ಸಾವಿರಾರು ಕಾರ್ಮಿಕರನ್ನು ಬೀದಿಗೆಸೆದು ಅವರ ಪಾಡಿಗೇ ಬಿಡಲಾಗಿದೆ - ಅದು ಕೋಲಾರ ಚಿನ್ನದ ಗಣಿಯಂತಹ ಕೇಂದ್ರ ಸಾರ್ವಜನಿಕ ಉದ್ದಿಮೆಯಾಗಿರಬಹುದು, ಎನ್‌ಜಿಇಎಫ್, ಮೈಸೂರು ಲ್ಯಾಂಪ್ಸ್‌ನಂತಹ ರಾಜ್ಯ ಸರ್ಕಾರಿ ಉದ್ದಿಮೆಗಳಾಗಿರಬಹುದು ಅಥವಾ ಹರಿರದ ಮೈಸೂರು ಕಿರ್ಲೋಸ್ಕರ್‌ನಂತಹ ಖಾಸಗಿ ಉದ್ದಿಮೆಗಳಾಗಿರಬಹುದು. ಪ್ರಕಾಶಿಸುತ್ತಿರುವ ಭಾರತ ಚಿನ್ನಗಣಿ ಕಾರ್ಮಿಕರನ್ನು ಲೆಕ್ಕಕ್ಕೇ ತೆಗೆದುಕೊಂಡಿಲ್ಲ. 'ಕರ್ನಾಟಕ ಮುಖ್ಯ ನಿರ್ವಾಹಕ ಅಧಿಕಾರಿ' (ಸಿಇಓ) ಎನಿಸಿದ್ದವರು ಎನ್‌ಜಿಇಎಫ್ ಅಥವಾ ಮೈಸೂರು ಲ್ಯಾಂಪ್ಸ್ ಕಾರ್ಮಿಕರನ್ನು ಗಣನೆಗೇ ತೆಗೆದುಕೊಳ್ಳಲಿಲ್ಲ. ಇವರ್ಯಾರೂ ಕಿರ್ಲೋಸ್ಕರ್‌ಗಳು ದೇಶದ ಕಾನೂನನ್ನು ಪಾಲಿಸಬೇಕು ಎಂದು ಹೇಳುವ ಗೋಜಿಗೂ ಹೋಗಲಿಲ್ಲ.

ವಿಕಾಸ ಪಂಚಾಯ್ತುಗಳು

ಜನಗಳನ್ನು ಅಧಿಕಾರ ಸಂಪನ್ನಗೊಳಿಸಬೇಕು ಎಂಬ ಹೆಸರಿನಲ್ಲಿ ಸರ್ಕಾರ ತನ್ನ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುತ್ತದೆ, ಅಧಿಕಾರವನ್ನು ಗ್ರಾಮೀಣ ಶ್ರೀಮಂತರಿಗೆ ದಾಟಿಸುತ್ತದೆ. ಅವರು ಪಂಚಾಯತುಗಳನ್ನು ನಡೆಸುತ್ತಾರೆ. ಆಡಳಿತ ಮತ್ತು ಉಸ್ತುವಾರಿ ಕರ್ತವ್ಯಗಳನ್ನು ಅವರಿಗೆ ವರ್ಗಾಯಿಸಲಾಗುತ್ತಿದೆ. ಸ್ವಸಹಾಯ ಗುಂಪುಗಳನ್ನು ರಚಿಸಿ ಅವುಗಳಿಗೆ ಆಡಳಿತದ ಕೆಲಸ ಕಾರ್ಯಗಳನ್ನು ವಹಿಸಿ ಕೊಡಲಾಗುತ್ತಿದೆ. ಅಂಗನವಾಡಿ ನೌಕರರು, ಮಧ್ಯಾಹ್ನ ಊಟದ ನೌಕರರು ಇತ್ಯಾದಿಯವರನ್ನು ಅವರ ಹತೋಟಿಗೆ ಒಳಪಡಿಸಲಾಗುತ್ತಿದೆ. ತೆರಿಗೆ ಸಂಗ್ರಹ ಇತ್ಯಾದಿ ಪಂಚಾಯ್ತಿ ನೌಕರರ ಜವಾಬ್ದಾರಿಗಳನ್ನು ಸ್ವಯಂಸೇವಾ ಗುಂಪುಗಳಿಗೆ ವಹಿಸಿಕೊಡಲಾಗಿದೆ. ಹೀಗೆ ಸಾವಿರ-ಸಾವಿರ ಕಾರ್ಮಿಕರನ್ನು ಇನ್ನಷ್ಟು ಶೋಷಿಸಿ ಬೆಳವಣಿಗೆಯ ಅವಕಾಶಗಳನ್ನು ಅವರಿಗೆ ನಿರಾಕರಿಸಲಾಗುತ್ತಿದೆ.

ಕಾರ್ಮಿಕ ಕಾನೂನುಗಳ ಜಾರಿಯಲ್ಲಿ

ಕಾರ್ಮಿಕರಿಗೆ ಪ್ರಯೋಜನಕಾರಿಯಾದ ಕಾರ್ಮಿಕ ಕಾನೂನುಗಳನ್ನು ಜಾರಿಗೆ ತರುವ ಪ್ರಯತ್ನಗಳೇ ಇಲ್ಲ. ಉದಾರೀಕರಣದ ನಂತರದ ಅವಧಿಯಲ್ಲಿ ಉದ್ದೇಶಪೂರ್ವಕವಾಗಿಯೇ ಕಾರ್ಮಿಕ ಕಾನೂನುಗಳ ಜಾರಿಯಾಗದಂತೆ ಮಾಡಲಾಗುತ್ತಿದೆ. ಇನ್ಸ್‌ಪೆಕ್ಟರ್ ರಾಜ್ಯವನ್ನು ಕೊನೆಗೊಳಿಸುವ ಹೆಸರಿನಲ್ಲಿ ಇನ್ಸ್‌ಪೆಕ್ಷನ್‌ಗಳನ್ನು ತಪ್ಪಿಸಲಾಗುತ್ತಿದೆ. ಹಲವು ಉದ್ಯೋಗಗಳಲ್ಲಿ ಕನಿಷ್ಟ ಕೂಲಿಗಳನ್ನೂ ಕೊಡಲಾಗುತ್ತಿಲ್ಲ. ಕಲ್ಯಾಣ ಯೋಜನೆಗಳು, ಭವಿಷ್ಯ ನಿಧಿ, ಹೆರಿಗೆ ಸೌಲಭ್ಯ ಇತ್ಯಾದಿ ಸಾಮಾಜಿಕಭದ್ರತಾ ಕ್ರಮಗಳನ್ನು ಈಗ ಜಾರಿ ಮಾಡಲಾಗುತ್ತಿಲ್ಲ.

ಕಾರ್ಮಿಕರ ಪ್ರತಿಕ್ರಿಯೆ

ಕಾರ್ಮಿಕವರ್ಗದ ಕೆಲವು ವಿಭಾಗಗಳು ವಿಧೇಯವಾಗಿಬಿಟ್ಟಿವೆ. ಅವು ತಮ್ಮ ಹಕ್ಕುಗಳಿಗಾಗಿ ಹೋರಾಡುತ್ತಿಲ್ಲ. ಬೇರೆ ಕೆಲವರು ಹೋರಾಡುತ್ತಿದ್ದಾರೆ. ಕಾರ್ಮಿಕರು ತಮ್ಮ ಹಕ್ಕುಗಳಿಗಾಗಿ ಹೋರಾಡುತ್ತಿರುವವರಲ್ಲಿ ರಾಜ್ಯ ಸರ್ಕಾರ ಅವರ ಹೋರಾಟಗಳನ್ನು ದಮನ ಮಾಡಲು ಪೊಲೀಸ್ ಬಲ ಬಳಸುತ್ತಿದೆ. ಹೋರಾಟಗಳನ್ನು ದಮನ ಮಾಡಲು ಪ್ರಭುತ್ವ ಪೊಲೀಸರೊಂದಿಗೆ ಶಾಮೀಲಾಗಿರುವ ಹಲವು ವರದಿಗಳಿವೆ.

ಸರ್ಕಾರದ ಬೂಟಾಟಿಕೆ

ಹಲವು ವರ್ಷಗಳಿಂದ ಮಂತ್ರಿಗಳು ಅಸಂಘಟಿತ ಕಾರ್ಮಿಕರಿಗೆ ಒಂದು ಕಾನೂನು ತರಲಾಗುತ್ತಿದೆ ಎಂದು ಹೇಳಿಕೆ ನೀಡುತ್ತಲೇ ಇದ್ದಾರೆ. ತಂದಿರುವ ಕಾನೂನುಗಳೆಲ್ಲಾ ಠಕ್ಕುತನದಿಂದ ಕೂಡಿವೆ ಮತ್ತು ಜಾರಿ ಮಾಡಲಾರದ ರೀತಿಯಲ್ಲಿವೆ. ಮೂಲಭೂತವಾಗಿ ಉದ್ಯೋಗದ ಪರಿಸ್ಥಿತಿಗಳಿರುವಂತೆ ಮಾಡುವ ಹಾಗೂ ಇವನ್ನು ಕಟ್ಟುನಿಟ್ಟಾಗಿ ಉಸ್ತುವಾರಿ ಮಾಡುವ ಕಾನೂನುಗಳಿಲ್ಲದಿದ್ದರೆ ಕೇವಲ ಕಲ್ಯಾಣ ಯೋಜನೆಗಳಿಂದಲೇ ಏನೂ ಪ್ರಯೋಜನವಿಲ್ಲ. ಅಸಂಘಟಿತ ಕಾರ್ಮಿಕರೆಂದರೆ ಸಂಘಟಿತ ಉದ್ಯೋಗಗಳ ಹೊರಗಿರುವ ಕಾರ್ಮಿಕರು ಎಂದು ಹೇಳುವ ಬದಲು ಅವರನ್ನು ವಿವಿಧ ಉದ್ಯೋಗಗಳಲ್ಲಿ ಲೆಕ್ಕ ಹಾಕಲಾಗುತ್ತಿದೆ. ಇದು ಅನಗತ್ಯವಾಗಿ ಒಂದೇ ಕೆಲಸವನ್ನೂ ಎರಡು ಬಾರಿ ಮಾಡಿದಂತೆ. ಸಿಐಟಿಯು ಒಂದು ಪರ್ಯಾಯ ಕಾನೂನಿನ ಕರಡು ತಯಾರಿಸಿದೆ. ಅದನ್ನು ಶಾಸನ ಸಭೆಯ ಅಂಗೀಕಾರಕ್ಕೆ ಮಂಡಿಸಲಾಗುವುದು.

ಸೆಪ್ಟೆಂಬರ್ ಹೋರಾಟ

ಸಾವಿರಾರು ಕಾರ್ಮಿಕರು ಸರ್ಕಾರ ತನ್ನ ಕಾರ್ಮಿಕ ನೀತಿಯನ್ನು ಬದಲಿಸಬೇಕೆಂದು ಆಗ್ರಹಿಸಿ ರಾಜ್ಯದ ಎಲ್ಲಾ ಕಡೆಗಳಿಂದ ವಿಧಾನ ಸೌಧತ್ತ ಬರುತ್ತಾರೆ. ವಿವಿಧ ಉದ್ದಿಮೆಗಳು, ಉದ್ಯೋಗಗಳ ಕಾರ್ಮಿಕರಲ್ಲದೆ ವಿಶೇಷವಾಗಿ ಅಂಗನವಾಡಿಗಳು, ಮಧ್ಯಾಹ್ನದ ಊಟ ಯೋಜನೆ, ಪಂಚಾಯತು ನೌಕರರು, ಹಮಾಲಿ ನೌಕರರು ಮುಂತಾದವರು ರಾಜ್ಯದ ಎಲ್ಲಾ ಕಡೆಗಳಿಂದ ಬೆಂಗಳೂರಿಗೆ ಬಂದು ಸೇರಿ ಸರ್ಕಾರ ಪ್ರತಿಯೊಂದು ವಿಭಾಗಗಳ ಕಾರ್ಮಿಕರಿಗೂ ಪರಿಹಾರ ಸಿಗುವಂತೆ ಮಾಡಬೇಕು ಎಂದು ಒತ್ತಾಯಪಡಿಸುತ್ತಾರೆ. ಈ ಹೋರಾಟ ಸೆಪ್ಟೆಂಬರ್ ಆಚೆಯೂ ನಡೆಯುತ್ತದೆ. ಅನಿರ್ದಿಷ್ಟ ಕಾಲದವರೆಗೆ ಮುಂದುವರೆಯ ಬಹುದು. ಹೀಗೆ ಸೆಪ್ಟೆಂಬರ್ ಹೋರಾಟ ಜನಗಳ ಗಮನವನ್ನು ಸೆಳೆಯಲಿಕ್ಕೆ ಮಾತ್ರವಲ್ಲ, ವಿವಿಧ ವಿಭಾಗಗಳ ಕಾರ್ಮಿಕರನ್ನು ಹೋರಾಟದ ಪಥದಲ್ಲಿ ಚುರುಕುಗೊಳಿಸಲಿಕ್ಕೆ ಕೂಡಾ.

ವಚನ ಬದ್ಧತೆಯ ಜಾರಿಯ ಹಾದಿಯಲ್ಲಿ...

ಯುಪಿಎ ಸರ್ಕಾರ ಮತ್ತು ಎಡಪಕ್ಷಗಳ ನಡುವೆ ಸಮನ್ವಯ ಸಮಿತಿ ರಚನೆ

ಸಂಯುಕ್ತ ಪ್ರಗತಿಪರ ಮೈತ್ರಿ ಕೂಟದ ಸರ್ಕಾರದ ಇತ್ತೀಚಿಗಿನ ಆರ್ಥಿಕರಂಗದಲ್ಲಿನ ಕೆಲವು ಕ್ರಮಗಳು, ಅಂಗೀಕರಿಸಲಾದ ಕನಿಷ್ಠ ಸಾಮಾನ್ಯ ಕಾರ್ಯಕ್ರಮದಲ್ಲಿನ ಅಂಶಗಳ ಉಲ್ಲಂಘನೆ. ಈ ವಿಷಯದಲ್ಲಿ ಎಡಪಕ್ಷಗಳು ತೀವ್ರ ತಕರಾರು ಎತ್ತಿವೆ. ಸರ್ಕಾರ ಕೆಲವು ನಿರ್ಧಾರ, ನೀತಿಗಳ ಕುರಿತಾದಂತೆ ಬರುವ ಅಭಿಪ್ರಾಯಗಳನ್ನು ಬಗೆಹರಿಸಿಕೊಳ್ಳಲು ಮತ್ತು ಸಿಎಂಪಿಯ ಜಾರಿಗೆ ಬದ್ಧವಾಗಿರಲು ಈಗ ರಚಿತವಾದ ಸಮನ್ವಯ ಸಮಿತಿ ಮಹತ್ವದ ಹೆಜ್ಜೆಯಾಗಿದೆ. ಬಿಜೆಪಿ ಉಗ್ರ ಹಿಂದುತ್ವಕ್ಕೆ ಮರಳುವ ಇಂಗಿತ ಪ್ರಕಟಗೊಂಡ ಬಳಿಕ ಎನ್.ಡಿ.ಎ. ಯಲ್ಲಿ ಬಿರುಕು ಕಾಣಿಸಿದೆ.





ಯುಪಿಎ, ಸರ್ಕಾರ ಮತ್ತು ಎಡಪಕ್ಷಗಳ ಸಮನ್ವಯ ಸಮಿತಿಯ ಪ್ರಥಮ ಸಭೆಯು ಇದೀಗ ಜರುಗಿದೆ. ಈ ಪ್ರಥಮ ಸಭೆಯಲ್ಲಿ ಚರ್ಚಿಸಲ್ಪಟ್ಟ ವಿಷಯುಗಳಿಗಿಂತ ಮಿಗಿಲಾಗಿ, ನಿರಂತರವಾಗಿ ಹಾಗೂ ಅಗತ್ಯವೆನಿಸಿದಾಗ ಸಭೆ ಸೇರಲು ಇಂತಹದೊಂದು ಪ್ರಕ್ರಿಯೆಗೆ ಅವಕಾಶ ಕಲ್ಪಿಸಿರುವುದು ಬಹು ಪ್ರಮುಖದ್ದಾಗಿದೆ. ಇದು ಎಡಪಕ್ಷಗಳ ಬೆಂಬಲದ ಮೇಲೆ ಗಂಭೀರವಾಗಿ ಅವಲಂಬಿತವಾಗಿರುವ ಸರ್ಕಾರದ ಕಾರ್ಯವಿಧಾನವನ್ನು ಸರಳಗೊಳಿಸುವುದಷ್ಟೆ ಅಲ್ಲದೆ ಜನರ ಕಾಳಜಿಯ ಬಗ್ಗೆ ದನಿಯೇರಿಸಲು ವೇದಿಕೆಯೂ ಸಹ ಆಗಿದೆ. ಕೇಂದ್ರದಲ್ಲಿ ಸರ್ಕಾರದ ಕಾರ್ಯ ವಿಧಾನವು ಬಲಗೊಳ್ಳುವತ್ತ ಇದೊಂದು ಮುಂದಣ ಹೆಜ್ಜೆ.

2004ರ ಮಹಾಚುನಾವಣಾ ಸಮಯದಲ್ಲಿ ಕೇಂದ್ರದಲ್ಲಿ ಜಾತ್ಯತೀತ ಪರ್ಯಾಯ ಸರ್ಕಾರವನ್ನು ರಚಿಸಲು ಮುಕ್ತವಾಗಿ ಕೆಲಸ ಮಾಡಿದ್ದ ಎಡಪಕ್ಷಗಳು ಸಾಮಾನ್ಯ ಕನಿಷ್ಟ ಕಾರ್ಯಕ್ರಮ (ಸಿಎಂಸಿ)ದ ವಿಶಾಲ ದೃಢೀಕರಣದ ಭೂಮಿಕೆಯ ಮೇಲೆ ಈ ಸರ್ಕಾರಕ್ಕೆ ತಮ್ಮ ಬೆಂಬಲವನ್ನು ನೀಡಿವೆ. ಸಿಎಂಪಿಯ ಅನುಷ್ಠಾನದ ವಿಷಯಗಳನ್ನು ಹಾಗೂ ಸಿಎಂಪಿಯ ಉಲ್ಲಂಘನೆಯ ವಿಷಯಗಳ ಬಗ್ಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲು ಈ ಸಮನ್ವಯ ಸಮಿತಿಯು ಎಡಪಕ್ಷಗಳಿಗೆ ವೇದಿಕೆಯಾಗಿದೆ. ಆದ್ದರಿಂದ ಸಿಎಂಪಿಯಲ್ಲಿ ಮಾಡಿರುವ ವಚನಬದ್ಧತೆಯನ್ನು ಕಾರ್ಯರೂಪಕ್ಕೆ ತರುವಂಥಹ ಹಾದಿಯಲ್ಲಿ ಸರ್ಕಾರವನ್ನು ನಡೆಸಲು ಮತ್ತು ಅದರ ಯಾವುದೇ ಉಲ್ಲಂಘನೆಯನ್ನು ತಡೆಗಟ್ಟುವ ಉದ್ದೇಶವನ್ನು ಸಮನ್ವಯ ಸಮಿತಿ ಈಡೇರಿಸಬೇಕಿದೆ. ಆದ್ದರಿಂದ ಈ ಸಮನ್ವಯ ಸಮಿತಿಯ ಸುಸೂತ್ರವಾದ ಮತ್ತು ಅರ್ಥಪೂರ್ಣವಾದ ಕಾರ್ಯವಿಧಾನ ಮಾತ್ರವೇ ಕೇಂದ್ರ ಸರ್ಕಾರವನ್ನು ಬಲಗೊಳಿಸಲು ಸಾಧ್ಯ.

ಹೀಗೆ, ತನ್ನ ಮುಂದಿರುವ ಸವಾಲುಗಳನ್ನೆ ದುರಿಸಲು ಮತ್ತು ಜನರಿಗೆ ನೀಡಿರುವ ವಚನಬದ್ಧತೆಯನ್ನು ಈಡೇರಿಸಲು ಯುಪಿಎ ಸರ್ಕಾರ ತನ್ನ ಕಾರ್ಯವಿಧಾನವನ್ನು ಸರಿಪಡಿಸಿಕೊಳ್ಳುತ್ತಿರುವಾಗಲೇ, ನಿರೀಕ್ಷೆಯಂತೆ ಬಿಜೆಪಿ ನೇತೃತ್ವದ ಎನ್‌ಡಿಎ ಬಿಕ್ಕಟ್ಟಿನಲ್ಲಿದೆ. ಆರು ವರ್ಷಗಳ ಹಿಂದೆ ಎನ್‌ಡಿಎ ರಚನೆಯಾದಾಗ, ಸರ್ಕಾರದಲ್ಲಿದ್ದುಕೊಂಡು ಲೂಟಿ ಮಾಡಿದ್ದನ್ನು ಹಂಚಿಕೊಳ್ಳಲು ವಿವಿಧ ಪಕ್ಷಗಳ ಪರಸ್ಪರಾಸಕ್ತಿ ಮಾತ್ರವೇ ಆ ಮೈತ್ರಿಕೂಟದಲ್ಲಿರುವ ಅಂಟಿಕೊಂಡಿರುವ ಅಂಶವಾಗಿತ್ತು. ಇನ್ನಾವುದೇ ಇತರೆ ಹೊಂದಿಕೊಂಡಿರುವ ಸ್ವಭಾವ ಎನ್.ಡಿ.ಎ ನಲ್ಲಿರಲಿಲ್ಲ. ಆಗಾಗ್ಗೆ ಅದರ ಅಂಗಪಕ್ಷಗಳು ಸೈದ್ಧಾಂತಿಕವಾಗಿ ಧೃವಗಳ ನಡುವಿನಷ್ಟು ಅಂತರವಿದ್ದವು. ಆದಾಗ್ಯೂ ಅತ್ಯಂತ ಅವಕಾಶವಾದಿ ರೀತಿಯಲ್ಲಿ ಅವು ತಮ್ಮ ಕಾಲಾವಧಿಯಲ್ಲಿ ಜತೆಗೂಡಿದ್ದವು.

ಎನ್‌ಡಿಎ ಸಂಯೋಜನೆಯ ಗುಣಸ್ವಭಾವದಲ್ಲಿ ಆಂತರಿಕ ವೈರುಧ್ಯತೆಯಿತ್ತು. ಆರ್‌ಎಸ್‌ಎಸ್ ಕಾರ್ಯಸೂಚಿಯನ್ನು ಮುಂದುವರಿಸಲು ಕಟಿಬದ್ಧವಾದ ಮತ್ತು ದೊಡ್ಡ ಆಕಸ್ಮಿಕದಂತೆ ಕಂಡುಬಂದ ಬಿಜೆಪಿಯ ಜೊತೆ, ಬಿಜೆಪಿಯೇತರ ಅಂಗಪಕ್ಷಗಳು ತಂತಾವೇ ಒತ್ತಡಕ್ಕೊಳಗಾಗಿದ್ದವು. ಎನ್‌ಡಿಎ ಜೊತೆ ಈ ಪಕ್ಷಗಳು ಸಖ್ಯ ಉಳಿಸಿಕೊಂಡು ಮುಂದುವರೆಯುವುದರ ಅರ್ಥವೆಂದರೆ ತಮ್ಮ ಪ್ರಭಾವಕ್ಕೊಳಪಟ್ಟಿರುವ ನೆಲೆಗಳಲ್ಲಿನ ಜನಬೆಂಬಲವನ್ನು ಕಳೆದು ಕೊಳ್ಳುವುದಾಗಿತ್ತು. ತಾವು ನಾಶಗೊಳ್ಳುವಂತಿದ್ದರೂ ಸಹ ಬಹುತೇಕ ಬಿಜೆಪಿಯೇತರ ಅಂಗಪಕ್ಷಗಳು ಈ ವೈರುಧ್ಯತೆಯನ್ನು ಉದಾಸೀನ ಮಾಡಿದವು. ಚುನಾವಣಾ ಫಲಿತಾಂಶ ಹೊರಬಿದ್ದ ನಂತರವಷ್ಟೇ ಈ ಅಂಗಪಕ್ಷಗಳು ವಾಸ್ತವತೆಯನ್ನು ಅರಿತುಕೊಂಡವು. ವಸ್ತುಶಃ ಗೋಡೆಬರಹದಂತೆ ಸ್ಪಷ್ಟವಿದ್ದ ಈ ವಾಸ್ತವತೆಯನ್ನು ಉದ್ದೇಶ ಪೂರ್ವಕವಾಗಿ ನಿರ್ಲಕ್ಷಿಸಿದರು.

ಬರ್ಬರತೆಗೆ ಇನ್ನೊಂದು ಹೆಸರು – ಸಾಮಾಜಿಕ ಬಹಿಷ್ಕಾರ

58ನೇ ಸ್ವಾತಂತ್ರ್ಯ ದಿನವನ್ನು ಉತ್ಸಾಹದಿಂದ ಆಚರಿಸಿದೆವು. ಆದರೆ ಸಾಮಾಜಿಕ ಬಹಿಷ್ಕಾರವೆಂಬ ಪಿಡುಗು ಗ್ರಾಮೀಣ ಪ್ರದೇಶದಲ್ಲಿ ಇಂದಿಗೂ ಆಚರಣೆಯಲ್ಲಿರುವುದು ದೊಡ್ಡ ಕಳಂಕ. ಅದರಲ್ಲೂ ಬಿಜಾಪುರದಂತಹ ಜಿಲ್ಲಾ ಕೇಂದ್ರದಲ್ಲೇ ಇರುವ ವಡ್ಡರಗಲ್ಲಿಯಲ್ಲಿ ಇಂತಹ ಘಟನೆ ನಡೆದಾಗ ಪೊಲೀಸ್ ಅಧಿಕಾರಿಗಳು, ಜಿಲ್ಲಾ ಆಡಳಿತ ಗಮನ ಹರಿಸದೆ ತೆಪ್ಪಗಿರುವುದು ಖಂಡನಾತ್ಮಕ.

ಬಿಜಾಪುರದ ಇಂಡಿರಸ್ತೆಯಲ್ಲಿರುವ ಮಿನಿ ಮಾದರ ಓಣಿಯಲ್ಲಿ ವಡ್ಡ ಸಮಾಜದ 60 ಕುಟುಂಬಗಳು ನೆಲಸಿವೆ. ಇವರು ಪರಿಶಿಷ್ಟ ಜಾತಿಗೆ ಸೇರಿದವರಾಗಿದ್ದು ಹತ್ತಿರದ ಕಲ್ಲು (ಕ್ವಾರಿ) ಕೋಣೆಯಲ್ಲಿ ಕೆಲಸ ಮಾಡುತ್ತಾರೆ. ಈ ಸಮುದಾಯದಲ್ಲಿ ಬಲಾಡ್ಯರಾದ ಕೆಲವರು ಸ್ವಂತ ಖಣಿಯನ್ನು ಕೂಡಾ ನಡೆಸುತ್ತಾರೆ.

ಇಲ್ಲಿನ ಮಹಿಳೆಯರು ಪರಮ ಜ್ಯೋತಿ, ಸ್ತ್ರೀ ಶಕ್ತಿ ಗುಂಪು ಮತ್ತು ಭಾಗ್ಯಜ್ಯೋತಿ ಸ್ತ್ರೀಶಕ್ತಿ ಗುಂಪು ಎಂದು ಎರಡು ಸ್ವಸಹಾಯ ಗುಂಪುಗಳನ್ನು ನಡೆಸಿ, ಕಳೆದ ಕೆಲವು ತಿಂಗಳಿಂದ ಸಾಧಾರಣ 10,000 ರೂ. ವರೆಗೂ ಉಳಿತಾಯ ಮಾಡಿ ಬ್ಯಾಂಕಿನಲ್ಲಿ ಹಾಕಿರುತ್ತಾರೆ. ಆದ್ದರಿಂದ ಇಲ್ಲಿನ ಬಡ ಮಹಿಳೆಯರು ಸಣ್ಣ ಪುಟ್ಟ ಸಾಲಗಳಿಗೆ ಲೇವಾದೇವಿಗಾರರ ಕಛೇರಿಗೆ ಹೋಗುವುದಿಲ್ಲ.

ರಾಮು ಹುಲೆಪ್ಪ ಹೊಸಪೇಟೆ ಇಲ್ಲಿನ ಬಿಜೆಪಿ ಮುಖಂಡರು. ದುರ್ಗಪ್ಪ ಪಣಮಂಡ ಜಮಖಂಡಿ, ಬಸುಮಲೆಪ್ಪ ಹೊಸಪೇಟೆ, ಲಕ್ಷ್ಮಣ ತಿಮ್ಮಣ್ಣ ಹೊಸಪೇಟೆ ಮೊದಲಾದವರು ಇನ್ನಿತರೆ ಮುಖಂಡರು, ಕಾರ್ಯಕರ್ತರು. ಬಿಜೆಪಿಯ ಧೋರಣೆಯಂತೆ ಇವರಿಗೆ ಮಹಿಳೆಯರು ಸಂಘಜೀವಿಗಳಾಗಿ ಭಾಗವಹಿಸುವುದು ಇಷ್ಟವಿಲ್ಲ.

ಮಿನಿ ಮಾದರ ಜಾತಿಯ ಮಹಿಳೆಯರು ಜಾಗೃತರಾಗಿ ಸ್ವಸಹಾಯ ಗುಂಪುಗಳನ್ನು ರಚಿಸಿಕೊಂಡಾಗ ರಾಮು ಹುಲೆಪ್ಪ ಸೇರಿದಂತೆ ಇತರರು 'ಸ್ತ್ರೀಶಕ್ತಿ ಗುಂಪು ಮಾಡಬೇಡಿ, ಸಭೆಗಳಿಗೆ ಹೋಗಬೇಡಿ' ಎಂದು ತಾಕೀತು ಮಾಡಿದರು. ಅದಕ್ಕೆ ಬೆದರದೆ ಮಹಿಳೆಯರು ತಮ್ಮ ಚಟುವಟಿಕೆಗಳನ್ನು ಮುಂದುವರಿಸಿದರು. ಆಗ ಅವರಿಗೆ ಸಾಮಾಜಿಕ ಬಹಿಷ್ಕಾರ ಕಾದಿತ್ತು.



ನಿನ್ನೆವರೆಗೆ ಸ್ನೇಹಿತೆಯರಾಗಿದ್ದ ಆ ಜಾತಿಯ ಕೆಲವು ಮಹಿಳೆಯರು ಇವರೊಂದಿಗೆ ಮಾತನಾಡಲೊಲ್ಲರು. ಆ ಪ್ರದೇಶದ ಮಕ್ಕಳು ಒಂದೇ ಶಾಲೆಯಲ್ಲಿ ಓದುತ್ತಿದ್ದರೂ 'ಬಹಿಷ್ಕಾರ'ಕ್ಕೊಳಪಟ್ಟ ಮನೆಯ ಮಕ್ಕಳೊಂದಿಗೆ ಬೇರೆಯವರು ಮಾತನಾಡುವಂತಿಲ್ಲ.

ಒಂದು ವೇಳೆ ಅಪ್ಪಿತಪ್ಪಿ ಮಾತನಾಡಿದರೆ, ಅಥವಾ ಬೆಂಬಲ ನೀಡಿದರೆ, ಅವರು ವಿಪರೀತ ದಂಡ ತೆರಬೇಕಾಗುತ್ತದೆ.

ಸ್ತ್ರೀಶಕ್ತಿ ಗುಂಪಿನ ಸದಸ್ಯರಿಗೆ ಬೆಂಬಲ ನೀಡಿದ್ದರು ಎಂಬ ಕಾರಣಕ್ಕೆ ಅಶೋಕ ಚಲ್ವಾಣ ಎಂಬುವರು 25,000 ರೂ. ದಂಡ ತೆರಬೇಕಾಯಿತೆಂದು 21 ಜನ ಸಹಿಮಾಡಿದ ವಿವಿಧ ಕಛೇರಿಗಳಿಗೆ ಸಂಬಂಧಿಸಿದ ಅಧಿಕಾರಿಗಳಿಗೆ ಮನವಿಯಲ್ಲಿ ತಿಳಿಸಲಾಗಿದೆ. ಅಶೋಕ ಚಲ್ವಾಣ ಬಿಜಾಪುರ ಅಭಿವೃದ್ಧಿ ಪ್ರಾಧಿಕಾರದ ಸದಸ್ಯರು. ಆದರೂ ಕೂಡಾ ಅವರು ದಂಡ ತೆರಬೇಕಾಯಿತು! 25,000 ರೂ. ದಂಡ ತೆತ್ತ ಅಶೋಕ ಚಲ್ವಾಣ, ಮನೆ ಒತ್ತೆ ಇಟ್ಟು 7,000 ರೂ. ದಂಡ ತೆತ್ತ ಶಂಕರ ಹನುಮಂತ ಮತ್ನಾಳ, ಭೀಮ್‌ಜಿ ತೊನ್ನುಟ್‌ರಿ ಮೊದಲಾದವರು ಬಿಜೆಪಿ ಗುಂಪಿನ ಗೂಂಡಾ ಪಡೆಗೆ ಬೆದರಿ, ತಾವು ದಂಡ ಕೊಟ್ಟಿಲ್ಲ ಎಂದು ಪೊಲೀಸ್ ಸ್ಟೇಷನ್‌ನಲ್ಲಿ ಹೇಳಿಕೆ ನೀಡಿದ್ದಾರೆ.

'ಸಾಮಾಜಿಕ ಬಹಿಷ್ಕಾರ' ಕ್ಕೊಳಗಾದ ಕುಟುಂಬದವರಿಗೆ ಕಲ್ಲು ಕ್ವಾರಿಯಲ್ಲಿ ಕೆಲಸ ನಿರಾಕರಿಸಲಾಗಿದೆ. ಮಾತ್ರವಲ್ಲ, ಕಾರ್ಮಿಕ ವರ್ಗದ ಐಕ್ಯತೆಯನ್ನು ಸಾರಬೇಕಾದ ಕಾರ್ಮಿಕ ಸಂಘಟನೆಯ ಸದಸ್ಯತ್ವದಿಂದಲೂ ಕಿತ್ತು ಹಾಕಲಾಗಿದೆ! ಬಹಿಷ್ಕಾರಕ್ಕೊಳಗಾದ ಬಾಬು ಸುಟ್ಟರೊಟ್ಟಿ ಕೆಲಸಕಳೆದುಕೊಂಡು ತನ್ನ ಕುಟುಂಬದೊಂದಿಗೆ ಗುಳೆ ಹೋಗಿದ್ದಾರೆ.

ಆಗಸ್ಟ್ 8ರ ಹಿಂದೂ ಪತ್ರಿಕೆಯಲ್ಲಿ ಈ ಕುರಿತು ವಿವರವಾದ ವರದಿ ಪ್ರಕಟವಾಗಿದೆ. ಸ್ಥಳೀಯ ಪತ್ರಿಕೆ, ಟಿ.ವಿ. ಮಾಧ್ಯಮಗಳು ಈ ಬರ್ಬರ ಕೃತ್ಯವನ್ನು ಬಿಡಿ ಬಿಡಿಯಾಗಿ ಬಿಚ್ಚಿಟ್ಟರೂ ಆಡಳಿತ ತಲೆ ಎತ್ತಿಲ್ಲ. ಬಹುಶಃ ಬಿಜೆಪಿಯ ಸಂಸತ್ ಸದಸ್ಯ ಮಾಜಿ 'ರೈಲು' ಮಂತ್ರಿ ಬಸವರಾಜ ಪಾಟೀಲ್ ಯತ್ನಾಳ್ ಜಿಲ್ಲಾಡಳಿತದಲ್ಲಿ ತಲೆತೂರಿಸುತ್ತಿರಬೇಕು. ಇಲ್ಲವಾದರೆ ಇಂತಹ ಸಾಮಾಜಿಕ ಪಿಡುಗು ಮುಂದುವರೆಯುವುದಕ್ಕೆ ಇದನ್ನು ಹುಟ್ಟುಹಾಕಿದವರಿಗೆ ಶಿಕ್ಷೆ ಆಗದಿರುವುದಕ್ಕೆ ಬೇರೆ ಯಾವುದೇ ಕಾರಣಗಳಿಲ್ಲ.

ಬಿ. ಶೆಟ್ಟಿ

ಜನ ತಿರಸ್ಕರಿಸಿದ ಬಂದ್

ಪುಟ 3 ರಿಂದ

ತಿರಂಗ ಯಾತ್ರೆಯಲ್ಲಿ ಹುಬ್ಬಳ್ಳಿಯಿಂದ ಒಂದು, ಮತ್ತೊಂದು ಬೆಂಗಳೂರಿನಿಂದ ಹೊರಡಿಸಿರುವುದು ಬಾಬ್ರಿ ಮಸೀದಿ ಧ್ವಂಸದ ಕುಖ್ಯಾತ ಅಡ್ವಾನಿಯವರು, ನೀತಿನಿಯತ್ತುಗಳಿಲ್ಲದ ಸೌಜನ್ಯಹೀನ ಸುಶ್ಮಾಸ್ವರಾಜ್ ಉದ್ಘಾಟಿಸುತ್ತಿರುವುದು ಈ ಯಾತ್ರೆ ಭಾರತ ಭಾವುಟದ ಬಗ್ಗೆ ಗೌರವ ನೆಪವಾಗಿದ್ದು ಕೋಮುದ್ವೇಷದ ಹಿಂದುತ್ವದ ಅಜೆಂಡಾ ಚಾಲನೆಯಲ್ಲಿಡುವುದೇ ಮೂಲ ಉದ್ದೇಶವಾಗಿದೆ. ಜನಪ್ರಶ್ನೆಗಳಿಗಿಂತ ಇಂತಹ ಕೋಮುವಾದಿ ಅಜೆಂಡಾವನ್ನೇ ಎತ್ತಿಕೊಳ್ಳಲು ಪುನರ್ನಿರ್ಧಾರ ಮಾಡಿಯಾಗಿದೆ.

ವಾಸ್ತವದಲ್ಲಿ ಈ ಸಂಘಪರಿವಾರಕ್ಕೆ ಭಾರತದ ಸಂವಿಧಾನ, ಕಾನೂನು, ಬಹುಸಂಸ್ಕೃತಿಯ ಪರಂಪರೆ, ರಾಷ್ಟ್ರಧ್ವಜದ ಬಗ್ಗೆ ಕಿಂಚಿತ್ತಾದರೂ ಗೌರವ ಇದ್ದಿದ್ದಲ್ಲಿ ಇವರ 'ರಾಷ್ಟ್ರಗೌರವ'ದ ಬಗ್ಗೆ ಯೋಚಿಸಬಹುದಿತ್ತು. ಅವುಗಳನ್ನು ಬುಡಮೇಲುಗೊಳಿಸಿದ್ದೇ ಇವರ ಇತಿಹಾಸ. ಈಗಲೇ ಬಿಜೆಪಿಗೆ ರಾಷ್ಟ್ರಧ್ವಜವನ್ನು 'ಬಂದ್'ನಲ್ಲಿ ಪ್ರತಿಭಟನೆಯಲ್ಲಿ ಉಮಾಭಾರತಿ ಬಂಧನದಲ್ಲಿ ಎಗ್ಗಿಲ್ಲದೆ ಬಳಸಲಾಗಿದೆ. ಹೀಗೆ ರಾಜಕೀಯ ದುರುದ್ದೇಶಕ್ಕೆ ಕಾನೂನುಬಾಹಿರ ಕೃತ್ಯಗಳ ಸಮರ್ಥನೆಗೆ ಬಳಸಿರುವುದು ಅಪರಾಧ. ಈ ಧ್ವಜವನ್ನು ಹೀಗೆ ಮಾತ್ರ ಬಳಸಬೇಕು ಎಂದು 'ನೀತಿ ಸಂಹಿತೆ' ತಂದ ಇದೇ ಬಿಜೆಪಿಯುವರ (ಎನ್.ಡಿ.ಎ.ಸರ್ಕಾರ) ಮೇಲೆ ಕ್ರಮ ಜರುಗಿಸಬಾರದೇಕೆ?

ಬಿಜೆಪಿ ಬೆಳಕಿಗೆ ಬರಲು ಜನವಿಶ್ವಾಸಗಳಿಸಲು ಇಂತಹ ಹುಸಿ ಭಾವೋದ್ರೇಕದ ಕೃತ್ಯಕ್ಕೆ ಕೈಹಾಕಿಯೇ ವಿಭಜನೆಯ ರಾಜಕಾರಣದಿಂದಲೇ ಅಧಿಕಾರ ಹಿಡಿಯಬೇಕೆಂದು ನಿರ್ಧರಿಸಿದೆ. ಕಾರ್ಯಾಚರಣೆಗೂ ಇಳಿದಿದೆ. ದೇಶದ ಜನತೆ ಇಂತಹ ಆಟಾಟೋಪಗಳಿಗೆ ಇಂಬು ಕೊಡದೆ ಬಂದ್‌ನ್ನು ತಿರಸ್ಕರಿಸಿದಂತೆ ಯಾತ್ರೆ-ಕಲಹ ಯತ್ನಗಳನ್ನು ತಿರಸ್ಕರಿಸಬೇಕು.

ಸಿಇಟಿ ಬಿಕ್ಕಟ್ಟು ಪರಿಹಾರಕ್ಕೆ ಕೇಂದ್ರೀಯ ಶಾಸನ ರೂಪಿಸಲು ಒತ್ತಾಯಿಸಿ ಹಾಗೂ ಶಿಕ್ಷಣದ ಬಜೆಟ್ ಹೆಚ್ಚಳಕ್ಕೆ ಒತ್ತಾಯಿಸಿ

SFI ನೇತೃತ್ವದಲ್ಲಿ ಬೃಹತ್ ರಾಜ್‌ಭವನ ಚಲೋ

ಸಿಇಟಿ (ವೃತ್ತಿ ಶಿಕ್ಷಣ) ಬಿಕ್ಕಟ್ಟಿನ ಶಾಶ್ವತ ಪರಿಹಾರಕ್ಕೆ ಕೇಂದ್ರೀಯ ಶಾಸನ ರೂಪಿಸಲು ಒತ್ತಾಯಿಸಿ ಹಾಗೂ ಶಿಕ್ಷಣದ ಬಜೆಟ್ ಹೆಚ್ಚಳ ಆಗಬೇಕೆಂದು ಒತ್ತಾಯಿಸಿ ಭಾರತ ವಿದ್ಯಾರ್ಥಿ ಫೆಡರೇಷನ್ (SFI) ನೇತೃತ್ವದಲ್ಲಿಂದು ಬೃಹತ್ ರಾಜ್‌ಭವನ ಚಲೋ ಪ್ರತಿಭಟನಾ ಕಾರ್ಯಕ್ರಮ ನಡೆಯಿತು. ನಗರದ ಮಹಾರಾಣಿ ಕಲಾ, ವಿಜ್ಞಾನ, ಗೃಹ ವಿಜ್ಞಾನ ಕಾಲೇಜುಗಳು, ಮಹಿಳಾ ಪಾಲಿಟೆಕ್ನಿಕ್, ಎಸ್‌ಜೆಪಿ, ಎಪಿಎಸ್, ಎಸ್‌ಎಲ್‌ಎನ್, ಕೆ.ಆರ್.ಪುರಂ ಕಾಲೇಜು, ಹೊಸಕೋಟೆ, ಆನೇಕಲ್‌ನ ಸಾವಿರಾರು ವಿದ್ಯಾರ್ಥಿಗಳು ಎಸ್‌ಎಫ್‌ಐ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿದರು. ತಮ್ಮ ತಮ್ಮ ಕಾಲೇಜುಗಳಿಂದ ಮೆರವಣಿಗೆಯಲ್ಲಿ ಹೊರಟ ವಿದ್ಯಾರ್ಥಿಗಳು ರಾಜಭವನಕ್ಕೆ ತೆರಳುತ್ತಿದ್ದಾಗ ಬಸವೇಶ್ವರ ವೃತ್ತದಲ್ಲಿ ಪೊಲೀಸರು ತಡೆದರು. ಅಲ್ಲೇ ರಸ್ತೆಯಲ್ಲಿ ಕುಳಿತ ವಿದ್ಯಾರ್ಥಿಗಳು ಬೃಹತ್ ಪ್ರತಿಭಟನಾ ಸಭೆ ನಡೆಸಿದರು.

ಪ್ರತಿಭಟನಾಕಾರರನ್ನು ಉದ್ದೇಶಿಸಿ ಎಸ್‌ಎಫ್‌ಐ ನ ರಾಜ್ಯ ಕಾರ್ಯದರ್ಶಿ ಆರ್.ರಾಮಕೃಷ್ಣ ಮಾತನಾಡಿ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಶಿಕ್ಷಣಕ್ಕೆ ನಿರಂತರವಾಗಿ ಹಣಕಾಸು ಕಡಿತ ಮಾಡುತ್ತಿರುವುದರ ಪರಿಣಾಮವಾಗಿ ಶಿಕ್ಷಣದ ಎಲ್ಲಾ ರಂಗಗಳಲ್ಲಿ ಸಮಸ್ಯೆಗಳು ಸೃಷ್ಟಿಯಾಗುತ್ತಿವೆ. ಪದವಿ ಕಾಲೇಜುಗಳಲ್ಲಿ ಉಪನ್ಯಾಸಕರ ಕೊರತೆ, ಕಟ್ಟಡದ ಕೊರತೆ, ಮೂಲಭೂತ ಸೌಲಭ್ಯಗಳ ಕೊರತೆ ಉಂಟಾಗಿದೆ. ಈ ಸಮಸ್ಯೆಗೆ ಶಾಶ್ವತ ಪರಿಹಾರ ರೂಪಿಸಲು ರಾಜ್ಯ ಸರ್ಕಾರದ ಬಜೆಟ್‌ನ ಶೇ 10 ಮತ್ತು ಕೇಂದ್ರ ಬಜೆಟ್‌ನ ಶೇ 30 ರಷ್ಟು ಹಣವನ್ನು ಶಿಕ್ಷಣಕ್ಕೆ ಮೀಸಲಿಡಬೇಕೆಂದು ರಾಮಕೃಷ್ಣ ಒತ್ತಾಯಿಸಿದರು. ಸಿಇಟಿ ಸಮಸ್ಯೆಗೆ ಪರಿಹಾರವಾಗಿ ಕೇಂದ್ರೀಯ ಶಾಸನ ರಚಿಸಬೇಕೆಂದರು. ಈ ಸಂದರ್ಭದಲ್ಲಿ ಮಾತನಾಡಿದ ಎಸ್‌ಎಫ್‌ಐ ಅಧ್ಯಕ್ಷೆ ಕೆ.ಎಸ್. ಲಕ್ಷ್ಮೀ ಯವರು ಇಂದಿನ ವೃತ್ತಿ ಶಿಕ್ಷಣ ಬಿಕ್ಕಟ್ಟು ತೀವ್ರಗೊಳ್ಳಲು ವಿದ್ಯಾರ್ಥಿ-ವಿದ್ಯಾರ್ಥಿನಿಯರು ಸಾಲುಸಾಲಾಗಿ ಆತ್ಮಹತ್ಯೆಗೆ ಶರಣಾಗಲು ಕೇಂದ್ರ-ರಾಜ್ಯ ಸರ್ಕಾರಗಳ ಹೊಣಗೇಡಿತನವೇ ಕಾರಣ ಎಂದು ಖಂಡಿಸಿದರು. ಟಿ.ಎಂ.ಎ. ಪೈ ಪ್ರಕರಣದಲ್ಲಿ 2002 ರ



ಅಕ್ಟೋಬರ್‌ನಲ್ಲಿ ಸುಪ್ರೀಂಕೋರ್ಟ್‌ನ ಶಿಕ್ಷಣ ವಿರೋಧಿ ತೀರ್ಪು ಬಂದಾಗ ಅಧಿಕಾರದಲ್ಲಿದ್ದಾಗ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಕೇಂದ್ರೀಯ ಶಾಸನ ರಚಿಸಲಿಲ್ಲ. ಬದಲಿಗೆ ಈಗ ಕೇಂದ್ರೀಯಶಾಸನ ಜಾರಿಗೆ ಬರಬೇಕೆಂದು ಬಿಜೆಪಿ ಒತ್ತಾಯಿಸುತ್ತಿರುವುದು ಅವರ ಗೋಸುಂಬೆ ತನಕ್ಕೆ ಸಾಕ್ಷಿ ಎಂದು ಖಂಡಿಸಿದರು. ಇಂದಿನ ಯುಪಿಎ ಸರ್ಕಾರ ತುರ್ತಾಗಿ ಕೇಂದ್ರೀಯ ಶಾಸನ ಜಾರಿಗೆ ತರಬೇಕು ಇಲ್ಲವಾದಲ್ಲಿ ಎನ್‌ಡಿಎ ಸರ್ಕಾರಕ್ಕೆ ಬಂದ ಗತಿಯೇ ಕೇಂದ್ರದ ಯುಪಿಎ ಸರ್ಕಾರಕ್ಕೂ ಜನರ ಆಕ್ರೋಶ ಕಾದಿದೆ ಎಂದು ಅವರು ಎಚ್ಚರಿಸಿದರು.

ಪ್ರತಿಭಟನೆಯ ಸಭೆಯನ್ನು ಉದ್ದೇಶಿಸಿ ಬೆಂಗಳೂರು ಜಿಲ್ಲಾ ಅಧ್ಯಕ್ಷರಾದ ಬಿ.ರಾಜಶೇಖರ ಮೂರ್ತಿ ಮಾತನಾಡಿ ಸರ್ಕಾರಿ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಪ್ರವೇಶ ನೀಡದೆ ನಿರಾಕರಿಸಲಾಗಿದೆ. ಅರ್ದ ಶೈಕ್ಷಣಿಕ ವರ್ಷ ಕಳೆದರೂ ಪದವಿ ವಿದ್ಯಾರ್ಥಿಗಳ ಫಲಿತಾಂಶ ಬಂದಿಲ್ಲ, ಅಂಕಪಟ್ಟಿಗಳಲ್ಲಿ ಅಪಾರ ತಪ್ಪುಗಳಾಗಿವೆ. ಬೆಂಗಳೂರು ವಿ.ವಿ. ಸ್ನಾತಕೋತ್ತರ ಕೋರ್ಸುಗಳಿಗೆ ಸ್ವಯಂ ಹಣಕಾಸು (payment) ಸೀಟು ಹಂಚಿಕೆ ಹೆಚ್ಚಾಗುತ್ತಿದೆ. ಇದರಿಂದ ಬೇಸತ್ತ ಬಿ.ಬಿ.ಎಂ. ಕೋರ್ಸಿನ ಆಕಾಂಕ್ಷಿ ವಿದ್ಯಾರ್ಥಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಪದವಿ ಮತ್ತು ಸ್ನಾತಕೋತ್ತರ ಕೇಂದ್ರಗಳಲ್ಲಿ ಮೂಲಭೂತ ಸೌಕರ್ಯಗಳಿಲ್ಲದೆ ವಿದ್ಯಾರ್ಥಿಗಳು ವಂಚಿತರಾಗಿದ್ದಾರೆ. ಪ್ರಸಕ್ತ ವರ್ಷದಲ್ಲಿ ಹಾಸ್ಟೇಲ್‌ಗಳಿಗೆ ಪ್ರವೇಶ ನಿರಾಕರಿಸಿದ್ದರಿಂದ ವಿದ್ಯಾರ್ಥಿಗಳು ಪರದಾಡುವಂತಹ ಪರಿಸ್ಥಿತಿ ಉಂಟಾಗಿದೆ. ಈ ಬಗ್ಗೆ ಸರ್ಕಾರ ತಕ್ಷಣ ಗಮನ ಹರಿಸಬೇಕೆಂದು ಆಗ್ರಹಿಸಿದರು. ಸರ್ಕಾರ ಹೊಸದಾಗಿ ಸರ್ಕಾರಿ ವೈದ್ಯಕೀಯ ಕಾಲೇಜು, ಸರ್ಕಾರಿ ತಾಂತ್ರಿಕ ಕಾಲೇಜು, ಪದವಿ, ಪದವಿ ಪೂರ್ವ ಕಾಲೇಜುಗಳನ್ನು ಆರಂಭಿಸಬೇಕೆಂದು ಪ್ರತಿಭಟನಾಕಾರರು ಈ ಸಂದರ್ಭದಲ್ಲಿ ಒತ್ತಾಯಿಸಿದರು.

ಪ್ರತಿಭಟನೆಯ ಸ್ಥಳಕ್ಕೆ ರಾಜ್ಯದ ಉನ್ನತ ಶಿಕ್ಷಣ ಸಚಿವರಾದ ಡಿ.ಮಂಜುನಾಥ್‌ರವರು ಭೇಟಿ ನೀಡಿ ವಿದ್ಯಾರ್ಥಿಗಳ ಸಮಸ್ಯೆಗೆ ಸ್ಪಂದಿಸುವುದಾಗಿ ಭರವಸೆ ನೀಡಿದರು. ಶಿಕ್ಷಣದ ಬಜೆಟ್ ಹೆಚ್ಚಿಸಲು ಹಾಗೂ ಮುಂದಿನ ವರ್ಷ ಹೊಸ ಸರ್ಕಾರಿ ವೈದ್ಯಕೀಯ, ತಾಂತ್ರಿಕ ಕಾಲೇಜು ಆರಂಭಿಸುವುದಾಗಿ ಪ್ರಕಟಿಸಿದರು. ನಂತರ ಎಸ್‌ಎಫ್‌ಐ ರಾಜ್ಯ ಮುಖಂಡರು ಹಾಗೂ ವಿವಿಧ ಕಾಲೇಜುಗಳ ಮುಖಂಡರ ನಿಯೋಗ ರಾಜ್ಯಪಾಲರನ್ನು ಭೇಟಿ ಮಾಡಿ, ಕೇಂದ್ರೀಯ ಶಾಸನ ಜಾರಿಗೆ ತರಲು ಕೇಂದ್ರ ಸರ್ಕಾರವನ್ನು ಒತ್ತಾಯಿಸಿ ಮನವಿ ಪತ್ರ ಸಲ್ಲಿಸಿತು.

ಎಸ್‌ಎಫ್‌ಐ ರಾಜ್ಯ ಅಧ್ಯಕ್ಷೆ ಕೆ.ಎಸ್.ಲಕ್ಷ್ಮೀ, ಕಾರ್ಯದರ್ಶಿ ಆರ್.ರಾಮಕೃಷ್ಣ, ಬೆಂಗಳೂರು ಜಿಲ್ಲಾ ಅಧ್ಯಕ್ಷರು, ರಾಜ್ಯ ಉಪಾಧ್ಯಕ್ಷರಾದ ಬಿ.ರಾಜಶೇಖರಮೂರ್ತಿ, ಉಪಾಧ್ಯಕ್ಷರಾದ ಕೃಷ್ಣೇಗೌಡ, ಸಹ ಕಾರ್ಯದರ್ಶಿ ನವೀನ್ ಕುಮಾರ್, ಜಿಲ್ಲಾ ಸಹ ಕಾರ್ಯದರ್ಶಿ ನಾಗರಾಜ್, ಉಪಾಧ್ಯಕ್ಷರಾದ ಮಂಜುನಾಥ್, ಆನಂದ, ಮಹಾರಾಣಿ ಕಾಲೇಜು ವಿದ್ಯಾರ್ಥಿ ಸಂಘದ ಅಧ್ಯಕ್ಷರಾದ ಸವಿತಾ, ಮಹಾರಾಣಿ ವಿಜ್ಞಾನ ಕಾಲೇಜಿನ ವಿದ್ಯಾರ್ಥಿ ಸಂಘದ ಅಧ್ಯಕ್ಷೆ ಪವಿತ್ರ, ಗೃಹ ವಿಜ್ಞಾನ ಕಾಲೇಜು ವಿದ್ಯಾರ್ಥಿ ಸಂಘದ ಅಧ್ಯಕ್ಷೆ ದೀಪಾ, ಎಪಿಎಸ್ ಕಾಲೇಜು ವಿದ್ಯಾರ್ಥಿ ಸಂಘದ ಅಧ್ಯಕ್ಷೆ ಅನುರಾಧ, ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್‌ನ ವಿದ್ಯಾರ್ಥಿ ಸಂಘದ ಅಧ್ಯಕ್ಷೆ ಜ್ಯೋತ್ಸ್ನಾ ರೆಡ್ಡಿ ಹಾಗೂ ಸರ್ಕಾರಿ ಕಲಾಕಾಲೇಜಿನ ಎಸ್‌ಎಫ್‌ಐ ಘಟಕದ ಕಾರ್ಯದರ್ಶಿ ವರದರಾಜ್ ಮುಂತಾದವರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು. ಪ್ರತಿಭಟನೆಯಲ್ಲಿ ಸಾವಿರಾರು ವಿದ್ಯಾರ್ಥಿ-ವಿದ್ಯಾರ್ಥಿನಿಯರು ಭಾಗವಹಿಸಿದ್ದರು.

○

ಗ್ರಾಮ ಪಂಚಾಯತ್ ನೌಕರರರಿಂದ ಮುಖ್ಯಮಂತ್ರಿಯವರಿಗೆ ಮನವಿ ಸಲ್ಲಿಕೆ

ಆಗಸ್ಟ್ 13 ರಂದು ಕರ್ನಾಟಕ ರಾಜ್ಯ ಗ್ರಾಮ ಪಂಚಾಯತ್ ನೌಕರರ ಸಂಘ (ಸಿಐಟಿಯು)ದ ಕುಂದಾಪುರ ತಾಲ್ಲೂಕು ಸಮಿತಿಯ ನೇತೃತ್ವದಲ್ಲಿ ಪಂಚಾಯತ ನೌಕರರ ಮುಖ್ಯ ಬೇಡಿಕೆಗಳನ್ನು ಇತ್ಯರ್ಥಗೊಳಿಸಲು ಒತ್ತಾಯಿಸಿ ಮೆರವಣಿಗೆ ನಡೆದು ಬೆಳಿಗ್ಗೆ 10 ಘಂಟೆಗೆ ಕುಂದಾಪುರ ತಾಲ್ಲೂಕು ಪಂಚಾಯತ್ ಕಛೇರಿಯ ಎದುರು ಮತಪ್ರದರ್ಶನ ನಡೆಯಿತು. ಬೇಡಿಕೆಗಳ ಮನವಿಯನ್ನು ತಾಲ್ಲೂಕು ಪಂಚಾಯತ್ ಉಪಾಧ್ಯಕ್ಷರ ಮೂಲಕ ಮಾನ್ಯ ಮುಖ್ಯಮಂತ್ರಿಗೆ ಕಳುಹಿಸಲಾಯಿತು.

ಮತಪ್ರದರ್ಶನ ಮುಗಿದ ಬಳಿಕ ಪಂಚಾಯತ್ ನೌಕರರ ವಿಸ್ತೃತ ಸಭೆಯು ಪಾರಿಜಾತ ಹೋಟೇಲಿನ "ಸ್ನೇಹ ಸಭಾಂಗಣ"ದಲ್ಲಿ ಶ್ರೀ ಭಾಸ್ಕರ ಜಿ.ಬೈಂದೂರ್ ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀ ಭಾಸ್ಕರ ಶೆಟ್ಟಿಯವರು ಎಲ್ಲರನ್ನು ಸ್ವಾಗತಿಸಿದರು. ಸಿಐಟಿಯುವಿನ ಕರ್ನಾಟಕ ರಾಜ್ಯ ಸಮಿತಿಯ ಉಪಾಧ್ಯಕ್ಷರಾದ ಕೆ.ಶಂಕರ್‌ರವರು ಸಭೆಯನ್ನುದ್ದೇಶಿಸಿ, ಮಾತನಾಡಿ ಸಂಘಟನೆಯನ್ನು ಬಲಪಡಿಸುವದರೊಂದಿಗೆ ಮುಖ್ಯ ಬೇಡಿಕೆಗಳನ್ನು ಒತ್ತಾಯಿಸಿ, ಸೆಪ್ಟೆಂಬರ್ 2 ರಂದು ನಡೆಯುವ "ವಿಧಾನ ಸೌಧ ಚಲೋ" ಕಾರ್ಯಕ್ರಮದಲ್ಲಿ ಹೆಚ್ಚಿನವರು ಭಾಗವಹಿಸುವುದರೊಂದಿಗೆ ಬೃಹತ್ ರ‍್ಯಾಲಿಯನ್ನು ಯಶಸ್ವಿಗೊಳಿಸಬೇಕೆಂದರು.

ಪುರಸಭೆಯ ನೌಕರರಿಗೆ ಸಿಗುವ ಎಲ್ಲಾ ಸೌಲಭ್ಯಗಳು ಸಿಗುವಂತೆ, ಗ್ರಾಮ ಪಂಚಾಯತ್ ನೌಕರರನ್ನು ಖಾಯಂಗೊಳಿಸಿ, ಪೂರ್ಣ ಪ್ರಮಾಣದ ಸೇವಾ ನಿಯಮಾವಳಿ ರಚಿಸುವಂತಾಗಬೇಕಾದರೆ ಸಂಘಟನೆಯನ್ನು ವಿಸ್ತರಿಸಿ, ರಾಜ್ಯವ್ಯಾಪ್ತಿ ಸಂಘಟಿತ ಹೋರಾಟ ನಡೆಸುವ ಸಿದ್ಧತೆ ನಡೆಸಬೇಕೆಂದರು. ಸಂಘದ ಉಪಾಧ್ಯಕ್ಷರಾದ ರಾಜು ಪಡುಕೋಣೆಯವರು ಮಾತನಾಡಿ ಗ್ರಾಮ ಪಂಚಾಯತ್‌ಗಳ ಬಿಲ್ ಸಂಗ್ರಹಿಸುವ ಕಾರ್ಯವನ್ನು ಸ್ತ್ರೀಶಕ್ತಿ ಗುಂಪುಗಳಿಗೆ ಜವಾಬ್ದಾರಿ ನೀಡಲು ಸರಕಾರ ಸಿದ್ಧವಾಗಿದೆ. ಈಗಾಗಲೇ ಸುತ್ತೋಲೆಯನ್ನು ಹೊರಡಿಸಲಾಗಿದೆ. ಸರಕಾರದ ಈ ನಿರ್ಣಯವನ್ನು ಗ್ರಾಮ ಪಂಚಾಯತ್ ನೌಕರರು ತೀವ್ರವಾಗಿ ಪ್ರತಿಭಟಿಸುತ್ತೇವೆ ಎಂದು ವಿವರಿಸಿದರು.

ಅಧ್ಯಕ್ಷತೆ ವಹಿಸಿದ ಶ್ರೀ ಭಾಸ್ಕರ್ ಜಿ.ಬೈಂದೂರು ಇವರು ಮಾತನಾಡಿ, ಸಂಘಟನೆಯನ್ನು ಬಲಪಡಿಸಲು ಅನುಕೂಲವಾಗುವಂತೆ ಅಕ್ಟೋಬರ್ 9 ರಂದು ನಡೆಯುವ ತಾಲ್ಲೂಕು ಸಮ್ಮೇಳನವನ್ನು ಯಶಸ್ವಿಯಾಗಿ ನಡೆಸಬೇಕೆಂದರು.



ಪೆಟ್ರೋಲ್ ದರ ಏರಿಕೆ ವಿರುದ್ಧ ವಿಟ್ಲದಲ್ಲಿ ರಸ್ತೆ ತಡೆ

ಕಾಂಗ್ರೆಸ್ ನೇತೃತ್ವದ ಯು.ಪಿ.ಎ ಸರಕಾರ ಅಧಿಕಾರಕ್ಕೆ ಬಂದ 2 ತಿಂಗಳಲ್ಲಿ 2 ಬಾರಿ ಪೆಟ್ರೋಲ್, ಡಿಸೇಲ್ ದರ ಏರಿಸಿರುವುದನ್ನು ಪ್ರತಿಭಟಿಸಿ, ವಿಟ್ಲದಲ್ಲಿ ರಸ್ತೆ ತಡೆ ನಡೆಸಲಾಯ್ತು.

ಅಂತರ್‍ರಾಷ್ಟ್ರೀಯ ಮಾರುಕಟ್ಟೆಯಲ್ಲಿ ತೈಲಬೆಲೆ ಏರಿಕೆಯ ನೆಪ ಹೇಳಿ ಬೆಲೆ ಏರಿಸಿರುವ ಸರಕಾರ ಪೆಟ್ರೋಲ್, ಡೀಸೇಲ್ ಮೇಲೆ 1/3 ಭಾಗ ಕಸ್ಟಮ್ಸ್ ಮತ್ತು ಅಬಕಾರಿ ತೆರಿಗೆ ಹಾಕಿರುವುದನ್ನು ಸಾರ್ವಜನಿಕರಿಂದ ಮರೆಮಾಚಿದೆ. ತೆರಿಗೆ ದರ ಕಡಿಮೆ ಮಾಡಿ ಬೆಲೆ ಹೊಂದಾಣಿಕೆ ಮಾಡಬೇಕೆಂದು ಸಿಪಿಐ(ಎಂ) ನೀಡಿದ ಸೂಚನೆಯನ್ನು ಸರಕಾರ ತಿರಸ್ಕರಿಸಿದೆ ಎಂದು ದಕ್ಷಿಣ ಕನ್ನಡ ಜಿಲ್ಲೆ ಬೀಡಿ ಫೆಡರೇಶನ್ ಕಾರ್ಯದರ್ಶಿ ಸುಕುಮಾರ್ ಆರೋಪಿಸಿದರು.

ಹಿಂದಿನ ಎನ್.ಡಿ.ಎ ಸರಕಾರ ಇದೇ ರೀತಿ ಜನದ್ರೋಹಿ ತೀರ್ಮಾನಗಳನ್ನು ಮಾಡಿರುವುದರಿಂದಲೇ ಜನರಿಂದ ತಿರಸ್ಕರಿಸಲ್ಪಟ್ಟಿದೆ ಎಂದು ಕಾಂಗ್ರೆಸ್ ಪಕ್ಷ ನೆನಪಿನಲ್ಲಿಟ್ಟು ಆಡಳಿತ ನಡೆಸಬೇಕೆಂದು ಪಕ್ಷದ ಬಂಟ್ವಾಳ ತಾಲ್ಲೂಕು ಸಮಿತಿ ಸದಸ್ಯ ಎ.ರಾಮಣ್ಣ ಸರಕಾರವನ್ನು ಎಚ್ಚರಿಸಿದರು.

ಮೇಗಿನ ಪೇಟೆಯಿಂದ ಮೆರವಣಿಗೆ ತೆಗೆದು ವಿಟ್ಲ ಪೇಟೆಯ ಜಂಕ್ಷನ್‌ನಲ್ಲಿ ರಸ್ತೆ ತಡೆ ಮಾಡಲಾಯಿತು.

ಸಿಪಿಐ(ಎಂ) ಮುಂದಾಳುಗಳಾದ ವೈ.ಕೆ. ನಾರಾಯಣ, ಗೋಪಾಲ.ಎನ್, ಡಿವೈಎಫ್‌ಐನ ಹುಸೈನಾರ್, ಹನೀಫ್, ಎಸ್‌ಎಫ್‌ಐನ ರಾಜೇಶ್ ರಿಕ್ಷಾ ಚಾಲಕ ಸಂಘ (ಸಿಐಟಿಯು)ದ ಸಿ.ಹೆಚ್.ಅರೀಸ್ ಮತ್ತಿತರರು ಭಾಗವಹಿಸಿದರು.

ಐಎಲ್‌ಓ ಹೇಳುವ ಭಾರತದ ಕತೆ

ಅಂತರ್ರಾಷ್ಟ್ರೀಯ ಕಾರ್ಮಿಕ ಸಂಸ್ಥೆ ವಿಶ್ವ ಸಂಸ್ಥೆಯ ಒಂದು ಅಂಗ ಸಂಸ್ಥೆ. ಜಿನಿವಾದಲ್ಲಿ ಇದರ ಮುಖ್ಯ ಕಛೇರಿ ಇದೆ. ಈ ಸಂಸ್ಥೆ ಜಗತ್ತಿನಾದ್ಯಂತ ಕಾರ್ಮಿಕರ ಸ್ಥಿತಿಗತಿಗಳ ಅಧ್ಯಯನ ನಡೆಸಿ ಅವರ ಜೀವನ ಮಟ್ಟವನ್ನು ಸುಧಾರಿಸುವಂತೆ ಸರ್ಕಾರಗಳ ಮೇಲೆ ಪ್ರಭಾವ ಬೀರುವ ಸಂಸ್ಥೆ. ಈ ಸಂಸ್ಥೆ ಭಾರತದ ಕತೆಯನ್ನು ಹೀಗೆ ಹೇಳಿದೆ.

ಭಾರತ ಹೆಚ್ಚುತ್ತಿರುವ ನಿರುದ್ಯೋಗಿ ಯುವಜನತೆಯ ಸಮಸ್ಯೆಯನ್ನು ದೊಡ್ಡ ಪ್ರಮಾಣದಲ್ಲಿ ಎದುರಿಸುತ್ತಿದೆ. ಅದರಲ್ಲೂ ಸುಶಿಕ್ಷಿತ ನಿರುದ್ಯೋಗಿಗಳ ಸಂಖ್ಯೆಯೂ ಹೆಚ್ಚುತ್ತಿರುವುದು ಇನ್ನೂ ದೊಡ್ಡ ಸಮಸ್ಯೆ. ಸೂಕ್ತ ಆರ್ಥಿಕ ನೀತಿಗಳ ಮೂಲಕ ಈ ಸಮಸ್ಯೆಯನ್ನು ಪರಿಹರಿಸಿದರೆ ಅದು ಲಕ್ಷ ಲಕ್ಷ ಕೋಟಿ ಡಾಲರುಗಳ ಬೆಲೆಯ ಉತ್ಪಾದನೆ ಮಾಡಬಹುದು.

ಜಗತ್ತನಾದ್ಯಂತ ಕಳೆದ ಹತ್ತು ವರ್ಷಗಳಲ್ಲಿ 8.8 ಕೋಟಿ ಯುವಜನತೆ ನಿರುದ್ಯೋಗಿಗಳಾದರೆ ಇದರ ಬಹುತೇಕ ಪಾಲು ಭಾರತದ್ದು. ಅದರಲ್ಲೂ ಸುಶಿಕ್ಷಿತರ ಸಂಖ್ಯೆಯೇ ಹೆಚ್ಚು.

ಜಾಗತಿಕವಾಗಿ ಯುವಜನತೆಯಲ್ಲಿನ ನಿರುದ್ಯೋಗ ಇಂದು ಇರುವ ಪ್ರಮಾಣದಲ್ಲಿ ಹಿಂದೆಂದೂ ಇರಲಿಲ್ಲ ಎಂದೂ ಅದು ಹೇಳಿದೆ. ಈ ಸಮಸ್ಯೆ ದೊಡ್ಡ ಪ್ರಮಾಣದಲ್ಲಿ ದಕ್ಷಿಣ ಏಷ್ಯಾದಲ್ಲಿ ಅದರಲ್ಲೂ ಹೆಚ್ಚಾಗಿ ಭಾರತದಲ್ಲೇ ಇದೆ. ಇದಕ್ಕೆ ಪರಿಹಾರವೆಂದರೆ ಕಾರ್ಮಿಕ ಪರವಾದ ನೀತಿಗಳನ್ನು ಸರ್ಕಾರ ಅಳವಡಿಸಿಕೊಳ್ಳುವುದು.

ಕಾರ್ಮಿಕಪರ ನೀತಿಗಳೆಂದರೆ ಸರ್ಕಾರಗಳು ಹಣಕಾಸು ಖೋತಾ ಕಡಿತ ಮಾಡುವ, ವ್ಯಾಪಾರ ಮತ್ತು ಹಣಕಾಸು ವಲಯದ ಉದಾರೀಕರಣದ ನೀತಿಗಳನ್ನು ಬಿಡಬೇಕಾಗುತ್ತದೆ.

ಯುವಜನತೆ ದಿನದಲ್ಲಿ ಬಹಳ ಹೊತ್ತು ಕೆಲಸ ಮಾಡಬೇಕಾಗುತ್ತದೆ. ಆ ಕೆಲಸವೂ ಅಲ್ಪಕಾಲದ ಗುತ್ತಿಗೆಯಾಗಿರುತ್ತದೆ. ವೇತನ ಬಹಳ ಕಡಿಮೆ ಇರುತ್ತದೆ. ಅಲ್ಲದೆ ಯಾವುದೇ ಸಾಮಾಜಿಕ ಭದ್ರತೆಯೂ ಇರುವುದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಯುವಜನತೆ ಕಾನೂನುಬಾಹಿರ ಚಟುವಟಿಕೆಗಳಿಗೆ ಇಳಿಯುವ ಸಾಧ್ಯತೆ ಇರುತ್ತದೆ.

ನಿರುದ್ಯೋಗಿ ಯುವಜನತೆಯಲ್ಲೂ ಮಹಿಳೆಯರು ಅತ್ಯಂತ ಹೆಚ್ಚು ನೋವು ಅನುಭವಿಸುತ್ತಾರೆ. ಯಾಕೆಂದರೆ ಅವರನ್ನು ಪುರುಷರಿಗೆ ಸಮಾನಾಗಿ ನೋಡಲಾಗುತ್ತಿಲ್ಲ.

ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಯುವಜನತೆಯಲ್ಲಿನ ನಿರುದ್ಯೋಗ ಕಡಿಮೆಯಾಗುತ್ತಲೇ ಇದೆ. ಆದರೆ ದಕ್ಷಿಣ ಏಷ್ಯಾದ ದೇಶಗಳಲ್ಲಿ ಇದು ತೀವ್ರವಾಗಿ ಹೆಚ್ಚುತ್ತಿದೆ.

ಇದಕ್ಕೆ ಭಾಗಶಃ ಕಾರಣ ಶಿಕ್ಷಣ ಮತ್ತು ಉದ್ಯೋಗ ಅವಕಾಶಗಳ ನಡುವೆ ತಾಳ ಮೇಳವಿಲ್ಲದೇ ಇರುವುದು. ಜಗತ್ತಿನಾದ್ಯಂತ ... ಕೋಟಿ ದುಡಿಯುವ ಬಡಜನ ಇದ್ದರೆ ಅವರ... 13 ಕೋಟಿ ಯುವಜನತೆಯೇ ಇದೆ.

ಯುಪಿಎ ನೇತೃತ್ವ ವಹಿಸಿರುವ ಕಾಂಗ್ರೆಸ್ಸಿಗ... ಈ ಕತೆಗೆ ಮತ್ತೆ ಟಿಪ್ಪಣಿಗಳನ್ನು ಬರೆದುಕೊಡ... ಅವಶ್ಯಕತೆ ಇದೆಯೇ?



ಉಂಡ ಮನೆ ಗಳ ಎಣಿಸುವ ಕಾಂಗ್ರೆಸ್ಸಿಗರ ಬುದ್ಧಿ

ಜನಸಾಮಾನ್ಯರ ಬೆಂಬಲ ಪಡೆದು 2004 ರ ಸಾರ್ವತ್ರಿಕ ಚುನಾವಣೆಯಲ್ಲಿ ಎನ್‌ಡಿಎಯನ್ನು ಸೋಲಿಸಿ ಕಾಂಗ್ರೆಸ್ ತನ್ನ ನೇತೃತ್ವದಲ್ಲಿ ಸರ್ಕಾರ ರಚಿಸಲು ಸಾಧ್ಯವಾಯಿತು. ಮಾನವೀಯ ಮುಖದ ಉದಾರೀಕರಣ ಮಾತನ್ನು ತಮ್ಮ ಪ್ರಣಾಳಿಕೆಯಲ್ಲಿ ಉದ್ಧರಿಸಿ ಹೊಗಳಿಸಿಕೊಂಡಿದ್ದ ಕಾಂಗ್ರೆಸ್ಸಿಗರಿಗೆ ಅಧಿಕಾರ ತಲೆಗೇರತೊಡಗಿದಂತಿದೆ. ಇಲ್ಲದಿದ್ದರೆ ಇಷ್ಟು ಬೇಗ ಅವರು ಜನವಿರೋಧಿ ನೀತಿಗಳ ಅನುಷ್ಠಾನಕ್ಕೆ ಮುಂದಾಗುತ್ತಿರಲಿಲ್ಲ.

ಉದಾರೀಕರಣ ಮತ್ತು ಮಾನವೀಯ ಮುಖ ಒಟ್ಟಿಗೆ ಇರಲು ಸಾಧ್ಯವೇ ಇಲ್ಲ. ಉದಾರೀಕರಣವನ್ನು ಮಿಲಿಯಲ್ಲಿಟ್ಟು ಸರ್ಕಾರ ನಡೆಸಬಹುದಾಗಿತ್ತು. ಆಗ ಬಂಡವಾಳಿಗರನ್ನು ಹಿಡಿತದಲ್ಲಿಟ್ಟು ಜನಸಾಮಾನ್ಯರಿಗಾಗಿ ಕೆಲಸ ಮಾಡಿದಂತಾಗುತ್ತಿತ್ತು. ಕಾಂಗ್ರೆಸ್‌ಗೆ ಅದು ಬೇಕಾಗಿಲ್ಲ.

ಪೆಟ್ರೋಲ್ ಮತ್ತು ಡೀಸೆಲ್‌ಗಳ ಬೆಲೆ ಏರಿಸಲಾಗಿದೆ. ಎಡಪಕ್ಷಗಳ ವಿರೋಧವನ್ನು ಕಡೆಗಣಿಸಲಾಗಿದೆ. ಇದರ ಪರಿಣಾಮವಾಗಿ ಎಲ್ಲ ಬೆಲೆಗಳೂ ಏರತೊಡಗಿದ್ದು, ಹಣದುಬ್ಬರ ಹೆಚ್ಚಾಗಿದೆ. ಈ ಹಂತದಲ್ಲಿ ಬಡ್ಡಿ ದರಕ್ಕಿಂತ ಹೆಚ್ಚಿನ ದರದಲ್ಲಿ ಹಣದುಬ್ಬರ ಇರುವುದರಿಂದ ನೈಜ ಪ್ರತಿಫಲ ನಕಾರಾತ್ಮಕವಾಗಿ ಹೋಗಿದೆ. ಬೆಲೆಯೇರಿಕೆಗಳು ಬಡವರನ್ನು ಮತ್ತು ಜನಸಾಮಾನ್ಯರನ್ನು ಹೆಚ್ಚಾಗಿ ಬಹಿಂಡುತ್ತದೆ ಎಂಬುದು ಎಲ್ಲರಿಗೂ ಗೊತ್ತಿರುವ ವಿಷಯವಾಗಿರುವಾಗ ಅಂತಹ ಕ್ರಮದಲ್ಲಿ ಮಾನವೀಯತೆ ಇರಲು ಹೇಗೆ ಸಾಧ್ಯ?

ವಿಮೆ, ಟೆಲಿಕಮ್ಯುನಿಕೇಷನ್ ಇತ್ಯಾದಿಗಳಲ್ಲಿ ವಿದೇಶಿ ನೇರ ಹೂಡಿಕೆಗೆ ರತ್ನಗಂಬಳಿ ಸ್ವಾಗತ, ಕೃಷಿಗೆ ಬ್ಯಾಂಕುಗಳಿಂದ ಸಾಲ ಕೊಡಿಸುವ ಮಾ... ಇವೆಲ್ಲ ಕಾಂಗ್ರೆಸ್ಸಿಗರ ಧೋರಣೆಗೆ ಕನ್ನಡಿಗಳಂತಿ... ಕಾಂಗ್ರೆಸ್ ಮತ್ತು ಇತರೆ ಪಕ್ಷಗಳಿಗೆ ಮತ ನೀ... ಗೆಲ್ಲಿಸಿದ ಜನರನ್ನು ಕಾಂಗ್ರೆಸ್ಸಿಗ... ಮರೆತಿರುವಂತಿದೆ.

ಪ್ರಾವಿಡೆಂಟ್ ಫಂಡ್ ಮೇಲಿನ ಬಡ್ಡಿಯ... ಶೇ 9 ಕ್ಕೆ ಇಳಿಸಲಾಗಿತ್ತು. ಎಡಪಕ್ಷಗಳು ... ದರವನ್ನು ಶೇ 12 ಕ್ಕೇರಿಸಬೇಕು ಎಂದಿದ್ದವು. ಅ... ಬದಲಾಗಿ ಈಗ ಈ ದರವನ್ನು ಶೇ 8.5 ... ಇಳಿಸಿವೆ. ಟ್ರೇಡ್ ಯೂನಿಯನ್‌ಗಳು ಇ... ವಿರುದ್ಧ ಪ್ರತಿಭಟನೆ ಮಾಡುವ ವಿಚಾರದಲ್ಲಿ...

ಹೊಚ್ಚಹೊಸ ಸರ್ಕಾರ ಜನರ ಸಮಸ್ಯೆಗ... ಸ್ಪಂದಿಸುವ ಪರಿಪಾಠ ಇರಿಸಿಕೊಂಡಿರುವುದಿ...

ನಮ್ಮ ಆರೋಗ್ಯ ನಮ್ಮ ಕೈಯಲ್ಲಿ





ಆಸ್ಪತ್ರೆ ವಾತಾವರಣ ರೂಪಿಸಲು ನಾಗರೀಕ ಸನ್ನದು

ಪ್ರತಿನಿತ್ಯ ಒಂದಲ್ಲ ಒಂದು ಸ್ಥಳದಲ್ಲಿ ಆಸ್ಪತ್ರೆಗಳಲ್ಲಿಯ ಲೋಪದೋಶಗಳು ಹೊರ ಬರುತ್ತಲೇ ಇರುತ್ತವೆ. ಜನರು ಆಸ್ಪತ್ರೆಗಳ ಬಗ್ಗೆ ಯಾವಾಗಲೂ ಅಸಮಾಧಾನ ವ್ಯಕ್ತಪಡಿಸುತ್ತಲೇ ಇರುತ್ತಾರೆ. ಅದರಲ್ಲೂ ಸರ್ಕಾರಿ ಆಸ್ಪತ್ರೆಗಳ ಬಗ್ಗೆ? ಒಳ್ಳೇ ತರಬೇತಿ ಪಡೆದ ವೈದ್ಯರಿದ್ದರೂ, ಪ್ರಾಮಾಣಿಕ ವಾಗಿದ್ದರೂ ಇದು ಸಾಮಾನ್ಯ ವಾಗಿದೆ? ಎಂದು ಆಸ್ಪತ್ರೆ ಸೂಪರಿಂಟೆಂಡೆಂಟೇ ಹೇಳುತ್ತಾರೆ. ದಿನನಿತ್ಯದ ತೊಂದರೆಗಳನ್ನು ಸರಿಪಡಿಸಲು ನಾಗರೀಕ ಸನ್ನದು ಅಗತ್ಯ. ನಾಗರೀಕ ಸನ್ನದು ವೈದ್ಯರು ರೋಗಿಗಳೊಂದಿಗೆ ಹಾಗೂ ರೋಗಿಗಳು ವೈದ್ಯರೊಂದಿಗೆ ಸೌಹಾರ್ದ್ಯತೆಯಿಂದ ನಡೆದುಕೊಳ್ಳಲು ಸಹಾಯವಾಗುತ್ತದೆ.

ಆರೋಗ್ಯ ವ್ಯವಸ್ಥೆ ಸಂಕೀರ್ಣವಾಗಿದೆ. ಆದರೂ ಅದು ಜನರಿಗೆ ಪ್ರಯೋಜಕವಾಗುವಂತಿರಬೇಕು, ಜನರು ಯಾವ ತೊಂದರೆಯನ್ನೂ ಅನುಭವಿಸಬಾರದು ಎಂಬುದು ಮುಖ್ಯ ಉದ್ದೇಶ. ಈ ಉದ್ದೇಶಗಳನ್ನೊಳಗೊಂಡ ನಾಗರೀಕ ಸನ್ನದು ನಮ್ಮ ದೇಶದಲ್ಲಿ ರೂಪುಗೊಂಡಿದೆ ಹಾಗೂ ಭಾರತ ಸರ್ಕಾರ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಇಲಾಖೆ ಅದನ್ನು ಗೆಜೆಟ್‌ನಲ್ಲಿ (ಪತ್ರ ಸಂಖ್ಯೆ ಜೆಡ್ 2801/131-96, ದಿನಾಂಕ 13-12-1996) ನಮೂದಿಸಿದೆ.

ಏನಿದು ಈ ನಾಗರೀಕ ಸನ್ನದು ?

ಸರಕಾರಿ ಆಸ್ಪತ್ರೆಗಳು ಭಾರತದ ನಾಗರೀಕರಿಗೆ ತಮ್ಮಲ್ಲಿರುವ ಸಂಪನ್ಮೂಲ ಹಾಗೂ ಸೌಲಭ್ಯ ಉಪಯೋಗಿಸಿ ಆರೋಗ್ಯ ಪಾಲನೆ ಮಾಡಲು ಬದ್ಧರಾಗಿವೆ. ವ್ಯಕ್ತಿಯ ವಯಸ್ಸು, ಲಿಂಗ, ಧರ್ಮ, ಜಾತಿ, ರಾಜಕೀಯ ಒಲವು, ಆರ್ಥಿಕ ಸಾಮಾಜಿಕ ಸ್ಥಿತಿಗಳಿಂದ ಚಿಕಿತ್ಸೆ ಪ್ರಭಾವಿತವಾಗುವುದಿಲ್ಲ. ಜನರಿಗೆ ಯಾವ ಸೌಲಭ್ಯಗಳು ಲಭ್ಯವಿವೆ, ಚಿಕಿತ್ಸೆಯ ಗುಣ ಹಾಗೂ ಚಿಕಿತ್ಸೆಯನ್ನು ನಿರಾಕರಿಸಿದಲ್ಲಿ ಅಥವಾ ಚಿಕಿತ್ಸೆ ಕಡಿಮೆ ಮಟ್ಟದ್ದಾಗಿದ್ದಲ್ಲಿ ಯಾರಿಗೆ ದೂರು ಕೊಡಬೇಕು ಎಂಬುದನ್ನು ಈ ಸನ್ನದು ತಿಳಿಸುತ್ತದೆ.

ಉದ್ದೇಶಗಳು

ವೈದ್ಯಕೀಯ ಚಿಕಿತ್ಸೆ ಹಾಗೂ ಇತರೇ ಸೌಲಭ್ಯಗಳು ಜನರಿಗೆ ಆಸ್ಪತ್ರೆಯಲ್ಲಿ ದೊರಕುವಂತೆ ಮಾಡುವುದು.

ಸಲಹೆ, ಚಿಕಿತ್ಸೆ ಹಾಗೂ ಬೆಂಬಲವನ್ನು ಕೊಟ್ಟು ರೋಗವನ್ನು ವೈದ್ಯ ಸಾಧ್ಯವಾಗುವಷ್ಟು ಗುಣಪಡಿಸುವುದು.

ವೈದ್ಯನ ತೀರ್ಮಾನದ ಹಾಗೂ ರೋಗಿಯ ಒಪ್ಪಿಗೆಯ ನಂತರವೇ ಒಳ್ಳೆಯ ಹಾಗೂ ಸಮಗ್ರ ಚಿಕಿತ್ಸೆ ಸಾಧ್ಯ.

ಚಿಕಿತ್ಸೆ ಉಪಯೋಗಿಸುವವರಿಗೆ, ರೋಗದ ಬಗ್ಗೆ ಮಾಹಿತಿ, ಚಿಕಿತ್ಸೆಯ ಪ್ರಗತಿ, ಚಿಕಿತ್ಸೆಯ ಅವಧಿ ಹಾಗೂ ಆರೋಗ್ಯದ ಮೇಲೆ ಚಿಕಿತ್ಸೆ ಪರಿಣಾಮ ಮುಂತಾದವುಗಳನ್ನು ವಿವರಿಸಬೇಕಾಗುತ್ತದೆ.

ಚಿಕಿತ್ಸೆ ಬಗ್ಗೆ ಯಾವುದೇ ಅಸಮಾಧಾನವಿದ್ದಲ್ಲಿ, ಚಿಕಿತ್ಸೆಯನ್ನು ಸರಿಪಡಿಸಬೇಕಾಗುತ್ತದೆ.

ಆಸ್ಪತ್ರೆ ಸೇವೆಗಳ ಘಟಕಗಳು

ಆಸ್ಪತ್ರೆ ಹಾಗೂ ತಜ್ಞ ವೈದ್ಯರಿಂದ ವೈದ್ಯಕೀಯ ಚಿಕಿತ್ಸೆ ಎಲ್ಲರಿಗೂ ಲಭ್ಯವಾಗಬೇಕು.

ಮುಖ್ಯ ಚಿಕಿತ್ಸಾ ವೇಳೆಯ ನಂತರ ತುರ್ತು ಚಿಕಿತ್ಸೆ ದೊರಕುವ ಸೌಕರ್ಯ ಇರಬೇಕು.

ಚಿಕಿತ್ಸೆ ಉಪಯೋಗಿಸುವವರಿಗೆ ದೊರಕುವ ಸೌಲಭ್ಯಗಳು, ಚಿಕಿತ್ಸೆಗೆ ಖರ್ಚು, ಚಿಕಿತ್ಸೆಗೆ ರೋಗಿಯಿಂದ ಏನು ಅಪೇಕ್ಷಿಸಲಾಗುವುದು ಮುಂತಾದವುಗಳನ್ನು ರೋಗಿಗೆ ಸ್ಪಷ್ಟ ಹಾಗೂ ಸರಳವಾಗಿ ಹೇಳಬೇಕು. ಉಪಕರಣ ಕೆಲಸ ಮಾಡದೇ ಇದ್ದಲ್ಲಿ ಅದನ್ನು ರೋಗಿಗೆ ತಿಳಿಸಬೇಕು.

ಚಿಕಿತ್ಸೆ ಪಡೆಯುವವರು ಚಿಕಿತ್ಸೆ ಬಗ್ಗೆ ಸ್ಪಷ್ಟೀಕರಣ ಪಡೆಯಬಹುದು ಹಾಗೂ ಚಿಕಿತ್ಸೆ ಪಡೆಯುವವರು ಸಹಾಯ ಕೇಳಬಹುದು.

ಚಿಕಿತ್ಸೆಯಲ್ಲಿ ಲೋಪದೋಶಗಳಿದ್ದಲ್ಲಿ ಏನು ಮಾಡಬೇಕೆಂಬುದನ್ನು ತಿಳಿಸಬೇಕು.

ಸನ್ನದಿಗೆ ಪ್ರಾಮಾಣಿಕತೆ

ಬೇಧಭಾವವಿಲ್ಲದೇ ಸೌಲಭ್ಯಗಳನ್ನು ಎಲ್ಲರಿಗೂ ದೊರಕುವಂತೆ ಮಾಡುವುದು

ಆಸ್ಪತ್ರೆಗೆ ತಲುಪಿದ ಕೂಡಲೇ ಅಗತ್ಯವಿಲ್ಲದ್ದಲ್ಲಿ ತುರ್ತು ಚಿಕಿತ್ಸೆ ನೀಡುವುದು

ಅಗತ್ಯವಿದ್ದಷ್ಟು ಸೂಚನಾ ಫಲಕಗಳನ್ನು ಇರಿಸುವುದು ಹಾಗೂ ದೊರಕುವ ಸೌಲಭ್ಯಗಳನ್ನು ನಮೂದಿಸುವುದು

ರೋಗಿ ಹಾಗೂ ಚಿಕಿತ್ಸೆ ಬಗ್ಗೆ ಸರಿಯಾದ ಮಾಹಿತಿ ಕೊಡುತ್ತಾ, ಒಳರೋಗಿಯಾದಲ್ಲಿ ಪ್ರತಿ ದಿನಕ್ಕೆ ಎಷ್ಟು ಖರ್ಚಾಗುತ್ತದೆ ಎಂಬುದನ್ನು ತಿಳಿಸಬೇಕು.

ಆರೋಗ್ಯ ಸೇವೆಗಳಿಗೆ ಪಡೆದ ಹಣಕ್ಕೆ ರಸೀತಿ ಕೊಡಬೇಕು

ದೂರುಗಳನ್ನು ಸ್ವೀಕರಿಸಿ ತನಿಖೆ ಮಾಡಿ ಕಂಡ ಪರಿಹಾರವನ್ನು ಒಬ್ಬ ವೈದ್ಯಕೀಯ ಅಧಿಕಾರಿ ನಿಗದಿಪಡಿಸಿದ ಸಮಯಕ್ಕೆ ಉತ್ತರಿಸಬೇಕು (ಒಳರೋಗಿಗಳ ದೂರುಗಳಿಗೆ ಅದೇ ದಿವಸ, ಹೊರ ರೋಗಿಗಳ ದೂರುಗಳಿಗೆ ಮರು ದಿವಸ).

ಅಸಮಾಧಾನ ವಿಚಾರಣೆ

ವೈದ್ಯಕೀಯ ಸೇವೆಗಳ ಬಗ್ಗೆ ಜನರಿಗಿದ್ದ ಅಸಮಾಧಾನವನ್ನು ಗುರುತಿಸುವುದು

ಅಸಮಾಧಾನಕ್ಕೆ ತುರ್ತು ಪರಿಹಾರ ಅಗತ್ಯವಿದ್ದರೆ ವೈದ್ಯಕೀಯ ಅಧಿಕಾರಿಯೇ ಅದನ್ನು ಈಡೇರಿಸುವುದು

ರೋಗಿಗಳಿಗೆ ಅಸಮಾಧಾನವುಂಟಾದಲ್ಲಿ ಅವರ ದೂರುಗಳನ್ನು ಸ್ವೀಕರಿಸಬೇಕು ಹಾಗೂ ಅಗತ್ಯವಿದ್ದರೆ ಅದೇ ಆಸ್ಪತ್ರೆಯಲ್ಲಿ ಎರಡನೇ ಅಭಿಪ್ರಾಯ ದೊರಕಿಸಿಕೊಡಬೇಕು

ತನಿಖಾ ದೂರುಗಳ ಸಮಿತಿಯನ್ನು ರಚಿಸಿ ಆಸ್ಪತ್ರೆಯ ಒಳಗೆ ಪರಿಹರಿಸಲಾಗದ ತೊಂದರೆಯನ್ನು ಹೊರಗಡೆ ಪರಿಹರಿಸಲು ಪ್ರಯತ್ನಿಸಬೇಕು.

ಯಾವ ಹೆಜ್ಜೆಯನ್ನು ತೆಗೆದುಕೊಳ್ಳುವುದು

ಆಸ್ಪತ್ರೆ ಸಿಬ್ಬಂದಿ, ಆರೋಗ್ಯ ಇಲಾಖೆ ಹಾಗೂ ಜನರ ಪ್ರತಿನಿಧಿಗಳು ಈ ಸನ್ನದಿನ ಉಪಯುಕ್ತತೆ ಯನ್ನು ಚರ್ಚಿಸಿ ನಂತರ ಜಾರಿಗೆ ತರಬೇಕು

ಶಿಫಾರಸು ಮಾಡಿದ ಗುಣಮಟ್ಟವನ್ನು ತೀರ್ಮಾನಿಸುವಾಗ, ಒಂದು ಪ್ರತ್ಯೇಕ ಸಮಿತಿ ಜನರ ಪ್ರತಿಕ್ರಿಯೆಯನ್ನು ಗುರುತಿಸಿ ಚರ್ಚಿಸಬೇಕು

ಸನ್ನದು ದೊರಕುತ್ತಿದೆ ಎಂಬ ವಿಷಯವನ್ನು ಆಸ್ಪತ್ರೆಯ ಸೌಲಭ್ಯ ಉಪಯೋಗಿಸುವ ಎಲ್ಲರಿಗೂ ತಿಳಿಸಬೇಕು

ಸನ್ನದನ್ನು ಅಗತ್ಯತೆಗೆ ತಕ್ಕಂತೆ ತಯಾರಿಸಿ, ಜನರ ಗಮನಕ್ಕೆ ಬರುವಂತೆ ಪ್ರಕಟಿಸುತ್ತ ಮಾಡಬೇಕು

ಉಪಯೋಗಿಸುವವರ ಜವಾಬ್ದಾರಿಗಳು

ಸೆಪ್ಟೆಂಬರ್ 1: ಸಾಮ್ರಾಜ್ಯಶಾಹಿ - ವಿರೋಧಿ, ಯುದ್ಧವಿರೋಧಿ ದಿನಾಚರಣೆ

ಅಮೆರಿಕ ಇರಾಕಿನಿಂದ ತೊಲಗಬೇಕು!

ಸೆಪ್ಟೆಂಬರ್ 1 ಮಹತ್ವದ ದಿನ. ಇದು ಎರಡನೇ ಮಹಾಯುದ್ಧ ಮುಗಿದ ದಿನ. ಸಾಮ್ರಾಜ್ಯಶಾಹಿ-ವಿರೋಧಿ ಹೋರಾಟ ವಿಜಯಿಯಾದ ದಿನ. ಇನ್ನೆಂದೂ ಇಂತಹ ಮಹಾಯುದ್ಧ ಆಗಬಾರದು ಎಂದು ನೆನಪಿಸುವ ದಿನ. ಈ ವರ್ಷ ಈ ದಿನಕ್ಕೆ ಇನ್ನೂ ಹೆಚ್ಚಿನ ಮಹತ್ವವಿದೆ. 90 ರ ದಶಕದಲ್ಲಿ ಪುನಃ ಬಲಗೊಂಡ ಸಾಮ್ರಾಜ್ಯಶಾಹಿಯ ಆಟಾಟೋಪ ಈ ವರ್ಷ ತಾರಕಕ್ಕೇರಿತ್ತು - ಇರಾಕ ಅತಿಕ್ರಮಣದೊಂದಿಗೆ. ಸಾಮ್ರಾಜ್ಯಶಾಹಿ ಆಟಾಟೋಪದ ವಿರುದ್ಧ ಪ್ರತಿರೋಧವೂ ಈ ವರ್ಷ ತಾರಕಕ್ಕೇರಿದೆ. ವೆನೆಜುವೆಲಾದಲ್ಲಿ ಸಾಮ್ರಾಜ್ಯಶಾಹಿ ಆಟಾಟೋಪ ನಡೆಯುತ್ತಿಲ್ಲ. ಅಧ್ಯಕ್ಷ ಚವೇಝ್ ನಾಯಕತ್ವದ ಜನಪರ ಶಕ್ತಿಗಳು ಗೆದ್ದಿವೆ. ಈ ವರ್ಷದ ಸಾಮ್ರಾಜ್ಯಶಾಹಿ-ವಿರೋಧಿ, ಯುದ್ಧ ವಿರೋಧಿ ದಿನದ ಬೇಡಿಕೆಗಳು ಇಲ್ಲಿವೆ. ಇಲ್ಲಿನ ಬೇಡಿಕೆಗಳ ಬಗ್ಗೆ ಜನಾಭಿಪ್ರಾಯ ಮೂಡಿಸುವುದು, ಸಾಮ್ರಾಜ್ಯಶಾಹಿ ಮೇಲೆ ಒತ್ತಡ ಹೇರುವುದು ನಮ್ಮೆಲ್ಲರ ಕರ್ತವ್ಯ.

ಅಮೆರಿಕ ಇರಾಕಿನಿಂದ ತೊಲಗಲಿ!

ಅಮೆರಿಕದ ಸಾಮ್ರಾಜ್ಯಶಾಹಿ ಸೈನ್ಯದಿಂದ ಇರಾಕಿನ ಅತಿಕ್ರಮಣ ಇಂದು ಅತ್ಯಂತ ತುರ್ತಿನ ಸಮಸ್ಯೆ. ಅಮೆರಿಕ ಇರಾಕಿನಿಂದ ತೊಲಗಬೇಕು ಎಂದು ಒಕ್ಕೊರಲಿನಿಂದ ಒತ್ತಾಯಿಸುವುದು ಸೆಪ್ಟೆಂಬರ್ 1 ದಿನಾಚರಣೆಯ ಮೊದಲ ಅಂಶ. ಇರಾಕಿನ ಮೇಲೆ ಆಕ್ರಮಣ ಮಾಡಲು ಅಮೆರಿಕ ಒಡ್ಡಿದ್ದ ನೆಪಗಳೆಲ್ಲಾ ಹಸಿಸುಳ್ಳುಗಳು ಎಂದು ಪುರಾವೆ ದೊರಕಿದೆ. ಅಮೆರಿಕದ ಮೂರು ನೆಪಗಳು - ಇರಾಕಿ ಬಳಿ ಸಾಮೂಹಿಕ ವಿನಾಶದ ಶಸ್ತ್ರಾಸ್ತ್ರಗಳು ಇವೆ; ವಿಶ್ವ ವಾಣಿಜ್ಯ ಕೇಂದ್ರದ ಮೇಲೆ ಸೆಪ್ಟೆಂಬರ್ 11ರಂದು ನಡೆಸಿದ ಭಯೋತ್ಪಾದಕ ಧಾಳಿ ನಡೆಸಿದ ಅಲ್-ಖೈದಾಗೆ ಸದ್ದಾಂ ಹುಸೇನ್ ಪ್ರಮುಖ ಬೆಂಬಲವಿತ್ತು; ಸದ್ದಾಂ ಹುಸೇನರ ಸರ್ವಾಧಿಕಾರ ವಿನಾಶ ಮಾಡಿ ಪ್ರಜಾಪ್ರಭುತ್ವ ಸ್ಥಾಪಿಸಬೇಕು. ಮೊದಲ ಎರಡು ಹಸಿಸುಳ್ಳು ಎಂದು ಅಮೆರಿಕ ಮತ್ತು ಬ್ರಿಟಿಷ್ ಸರ್ಕಾರ ಸ್ಥಾಪಿಸಿದ ಹಲವು ತನಿಖಾ ಕಮಿಶನ್‌ಗಳೇ ಹೇಳಿವೆ. ಇರಾಕಿನ ಮೇಲೆ ಯುದ್ಧ ಹೇರಲು ಅದಕ್ಕೆ ಸಾರ್ವಜನಿಕ ಬೆಂಬಲ ಪಡೆಯಲು ಈ ಎರಡು ಕಾರಣಗಳನ್ನು ಕೃತಕವಾಗಿ ಈ ಎರಡು ಸರ್ಕಾರಗಳು ಈ ಸುಳ್ಳನ್ನು ಸೃಷ್ಟಿಸಿದವು ಎಂದು ಸಾಬೀತಾಗಿದೆ. ಇರಾಕಿನಲ್ಲಿ ಒಂದು ವರ್ಷಕ್ಕಿಂತಲೂ ಹೆಚ್ಚು ಕಾಲ ಇರುವುದು ಅಮೆರಿಕನ್ ಮಿಲಿಟರಿ ಸರ್ವಾಧಿಕಾರ, ಸ್ವತಂತ್ರ ಚುನಾವಣೆಯಾಗಲಿ, ಇರಾಕಿಗಳಿಗೆ ನಿಜವಾಗಿ ಅಧಿಕಾರ ಹಸ್ತಾಂತರ ಮಾಡುವುದಾಗಲೀ ಅಮೆರಿಕದ ಅಜೆಂಡಾದಲ್ಲಿ ಇಲ್ಲ ಎಂದು ಸ್ಪಷ್ಟವಾಗಿದೆ.

ಇರಾಕಿನಲ್ಲಿ ಅಮೆರಿಕದ ಅತಿಕ್ರಮಣ ವಿರುದ್ಧ ರಾಷ್ಟ್ರೀಯ ಪ್ರತಿರೋಧ ಬಲಗೊಂಡಿದೆ. ಇರಾಕನ್ನು ಅಮೆರಿಕ ಮತ್ತು ಅವರ ತೊತ್ತುಗಳು ಆಳದಂತೆ ಮಾಡಲು ಪಣತೊಟ್ಟಿವೆ. ಇರಾಕಿ ಜನತೆಯ ಪ್ರತಿರೋಧ ಸಶಸ್ತ್ರ ರಾಷ್ಟ್ರೀಯ ವಿಮೋಚನಾ ಹೋರಾಟ. ಸಾಮ್ರಾಜ್ಯಶಾಹಿ ಮಾಧ್ಯಮಗಳು ಹೇಳುವಂತೆ ಭಯೋತ್ಪಾದಕ ಕೃತ್ಯಗಳು ಅಲ್ಲ ಎಂಬುದು ಸ್ಪಷ್ಟ. ನಾವು ಈ ಇರಾಕಿ ಜನತೆಯ ಹೋರಾಟವನ್ನು ಬೆಂಬಲಿಸುತ್ತೇವೆ, ಸೌಹಾರ್ದ ವ್ಯಕ್ತಪಡಿಸುತ್ತೇವೆ.

ಅಮೆರಿಕ ಇರಾಕಿನ ಅತಿಕ್ರಮಣ ಮಾಡಿರುವುದು ಅಲ್ಲಿನ ತೈಲ ಸಂಪನ್ಮೂಲಗಳನ್ನು ದೋಚುವುದುಕ್ಕೆ ಮಾತ್ರವಲ್ಲ, ಇಡೀ ಪಶ್ಚಿಮ ಏಶ್ಯಾದ ತೈಲ ನಿಕ್ಷೇಪಗಳ ಮೇಲೆ ನೇರ ಹಿಡಿತ ಸಾಧಿಸುವುದಕ್ಕೆ - ಇರಾಕ್‌ನ ಜನತಾ ಪ್ರತಿರೋಧ, ಈ ಪ್ರದೇಶದಲ್ಲಿ ಅಧಿಪತ್ಯದ ಅಮೇರಿಕದ ವ್ಯಾಪಕ ಯೋಜನೆಗೆ ಕಡಿವಾಣ ಹಾಕಿದೆ. ಇಲ್ಲದಿದ್ದರೆ ನೆರೆಯ ಸಿರಿಯಾ, ಇರಾನ್‌ಗಳನ್ನು ಬೇರೆ ನೆಪಗಳಲ್ಲಿ ಆಕ್ರಮಣ ಮಾಡಲು ಅಮೆರಿಕ ಹುನ್ನಾರ ನಡೆಸಿತ್ತು. ಅಮೆರಿಕನ್ ಸಾಮ್ರಾಜ್ಯಶಾಹಿಯ ಈ ತೈಲದಾಹವನ್ನು ಬಯಲಿಗೆಳೆಯಬೇಕು.

ಆಕ್ರಮಿತ ಪ್ಯಾಲೆಸ್ತೀನ್ ಪ್ರದೇಶಗಳಿಂದ ಇಸ್ರೇಲ್ ತೊಲಗಬೇಕು

ಅಮೆರಿಕನ್ ಸಾಮ್ರಾಜ್ಯಶಾಹಿಯ ಕುಮ್ಮಕ್ಕಿನಿಂದ ಇಸ್ರೇಲ್ ಪ್ಯಾಲೆಸ್ತೀನ್ ಪಶ್ಚಿಮ ದಂಡೆ ಮತ್ತು ಗಾಜಾ ಪಟ್ಟಿಯ ಪ್ರದೇಶಗಳನ್ನು ಆಕ್ರಮಿಸಿಕೊಂಡಿದೆ. ಪ್ಯಾಲೆಸ್ತೀನ್ ಜನತೆಯ ಸ್ವಯಮಾಡಳಿತ, ಸ್ವ-ನಿರ್ಧಾರದ ಹಕ್ಕುಗಳನ್ನು ತುಳಿಯುತ್ತಿದೆ. ಈ ಬಗ್ಗೆ ಹತ್ತಾರು ವಿಶ್ವಸಂಸ್ಥೆ ನಿರ್ಣಯಗಳನ್ನು ತಿರಸ್ಕರಿಸಿದೆ, ಇವೆಲ್ಲದರಲ್ಲಿ ಇಸ್ರೇಲಿಗೆ ಅಮೆರಿಕದ ನೇರ ಬೆಂಬಲವಿದೆ. ಇತ್ತೀಚೆಗೆ ಆಕ್ರಮಿತ ಪಶ್ಚಿಮ ದಂಡೆಯಲ್ಲಿ ಇಸ್ರೇಲ್ 'ಭದ್ರತಾ ಗೋಡೆ' ಕಟ್ಟುತ್ತಿದೆ. 'ಭದ್ರತಾ ಗೋಡೆ' ಅಂತರ್ರಾಷ್ಟ್ರೀಯ ಕಾನೂನಿಗೆ ವಿರುದ್ಧ, ಅದನ್ನು ಕಿತ್ತು ಹಾಕಬೇಕು ಎಂದು ಅಂತರ್ರಾಷ್ಟ್ರೀಯ ನ್ಯಾಯದ ಕೋರ್ಟು ತೀರ್ಪಿತ್ತಿದೆ. ಇಸ್ರೇಲ್ ಅದನ್ನು ಧಿಕ್ಕರಿಸಿದೆ. 'ಭದ್ರತಾ ಗೋಡೆ' ಕಿತ್ತೊಗೆಯಲು ಪ್ರಬಲ ಅಂತರ್ರಾಷ್ಟ್ರೀಯ ಚಳುವಳಿಯ ಅಗತ್ಯವಿದೆ.

ಪ್ಯಾಲೆಸ್ತೀನ್ ಸಮಸ್ಯೆಯ ಶಾಶ್ವತ ಶಾಂತಿಯುತ ನ್ಯಾಯಯುತ ಪರಿಹಾರಕ್ಕೂ ನಾವು ಒತ್ತಾಯ ತರಬೇಕಾಗಿದೆ. 1967 ಯುದ್ಧದ ಮೊದಲಿನ ಗಡಿಯಂತೆ ಸ್ವತಂತ್ರ ಪ್ಯಾಲೆಸ್ತೀನ್ ಪ್ರಭುತ್ವ ಮತ್ತು ಇಸ್ರೇಲ್ ರಚಿತವಾಗುವುದು ಒಂದೇ ಪರಿಹಾರ. ಈ ಪರಿಹಾರಕ್ಕೆ ಅಂತರ್ರಾಷ್ಟ್ರೀಯ ಒತ್ತಡ ತರಬೇಕಾಗಿದೆ.

ವೆನೆಜುವೆಲಾದಂತಹ ವಿಜಯಗಳು ಹೆಚ್ಚಲಿ!


ವೆನೆಜುವೆಲಾದ ಚುನಾಯಿತ ಜನಪರ ಅಧ್ಯಕ್ಷ ಹ್ಯುಗೋ ಚವೇಝರನ್ನು ಕಾನೂನು-ಬಾಹಿರ ಕ್ರಮಗಳಿಂದ ಪದಚ್ಯುತ ಗೊಳಿಸುವ ಅಮೆರಿಕನ್ ಸಾಮ್ರಾಜ್ಯಶಾಹಿಯ ಕಳೆದ ಕೆಲವು ವರ್ಷಗಳ ವಿಫಲ ಯತ್ನ ಮತ್ತೊಮ್ಮೆ ಮಣ್ಣುಮುಕ್ಕಿದೆ. ವೆನೆಜುವೆಲಾದ ಸಂವಿಧಾನದಲ್ಲಿರುವ ಅಧ್ಯಕ್ಷರನ್ನು ಹಿಂದಕ್ಕೆ ಕರೆಸುವ ಬಗ್ಗೆ ಜನಾಭಿಪ್ರಾಯ ಸಂಗ್ರಹ ನಡೆದು, ಅಧ್ಯಕ್ಷ ಚವೇಝ್ ಪ್ರಚಂಡ ಜಯಗಳಿಸಿದರು. 1973 ರಲ್ಲಿ ಚಿಲಿಯಲ್ಲಿ ಅಧ್ಯಕ್ಷ ಅಲೆಂದೆಯವರನ್ನು ಪದಚ್ಯುತಗೊಳಿಸಿದ ಫ್ಯಾಸಿಸ್ಟ್ ಕ್ಷಿಪ್ರಕ್ರಾಂತಿ ಮಾದರಿಯನ್ನು ಪುನರಾವರ್ತಿಸಲು ನಡೆಸಿದ ಪ್ರಯತ್ನಕ್ಕೆ ಸೋಲಾಗಿದೆ. ವೆನೆಜುವೆಲಾದಲ್ಲಿ ಜನಪರ ಶಕ್ತಿಗಳ ವಿಜಯ ಭಾರತದ ಮತ್ತು ಇಡೀ ಜಗತ್ತಿನ ಸಾಮ್ರಾಜ್ಯಶಾಹಿ-ವಿರೋಧಿ ಶಕ್ತಿಗಳ ಮನೋಬಲ ಹೆಚ್ಚಿಸಿದೆ. ಈ ವಿಜಯದ ಮಹತ್ವದ ಬಗ್ಗೆ ಪ್ರಚಾರ-ಪ್ರಕ್ಷೋಭೆ ಅಗತ್ಯ. ಪ್ರಬಲ ಸಾಮ್ರಾಜ್ಯಶಾಹಿ ಹುನ್ನಾರಗಳ ವಿರುದ್ಧ ಗೆಲ್ಲುವುದು ಕಷ್ಟ ಎನ್ನುವ ಹತಾಶೆ ನಿರ್ನಾಮ ಮಾಡಲು ಇದು ಆಯುಧವಾಗಬೇಕು. ಇಂತಹ ವಿಜಯಗಳು ಹೆಚ್ಚುವಂತೆ ಜನಪರ ಚಳುವಳಿಗಳನ್ನು ಬೆಳೆಸಬೇಕಾಗಿದೆ. ವೆನೆಜುವೆಲಾದ ಪಟ್ಟಭದ್ರ ಶಕ್ತಿಗಳು ಮತ್ತು ಅವರ ಸಾಮ್ರಾಜ್ಯಶಾಹಿ ಬೆಂಬಲಿಗರು ಇನ್ನೂ ಸೋಲನ್ನು ಒಪ್ಪಿಕೊಳ್ಳಲು ತಯಾರಿಲ್ಲ. ಅವರ ಹುನ್ನಾರಗಳು ಮುಂದುವರೆದಿವೆ. ಇದನ್ನು ಖಂಡಿಸಬೇಕಾಗಿದೆ.

ಇಸ್ರೇಲಿ ಜತೆ ಮಿಲಿಟರಿ ಸಹಕಾರ ನಿಲ್ಲಬೇಕು!

ಇಸ್ರೇಲ್ ಜತೆ ಎಲ್ಲಾ ರೀತಿಯ ಮಿಲಿಟರಿ ಮತ್ತು ರಕ್ಷಣಾ ಸಹಕಾರ ನಿಲ್ಲಬೇಕು. ಪ್ಯಾಲೆಸ್ತೀನ್ ಮೇಲೆ ಇಸ್ರೇಲಿ ಆಕ್ರಾಮಕ ಕ್ರಮಗಳನ್ನು ಖಂಡಿಸಬೇಕು. ಪ್ಯಾಲೆಸ್ತೀನ್ ಜನತೆಯ ಹೋರಾಟಕ್ಕೆ ಬೆಂಬಲ ಕೊಡುವ ನೀತಿಯನ್ನು ಯುಪಿಎ ಸರ್ಕಾರ ಪಾಲಿಸಬೇಕು. ಇದು ಭಾರತದ ದಶಕಗಳ ಕಾಲದ ನೀತಿ ಇದನ್ನು ಪುನರುಚ್ಚರಿಸುವ ಅಗತ್ಯವಿದೆ.

ಪಾಕಿಸ್ತಾನದ ಜತೆ ಶಾಂತಿ

ಪಾಕಿಸ್ತಾನದ ಜತೆ ಬಾಂಧವ್ಯ ಉತ್ತಮಪಡಿಸಲು, ಬಿಗುವಿನ ವಾತಾವರಣ ತಿಳಿಗೊಳಿಸಲು ಎಲ್ಲಾ ಕ್ರಮ ಕೈಗೊಳ್ಳಬೇಕು. ಎರಡು ದೇಶಗಳ ಜನಗಳ ನಡುವೆ ಸಾಮಾನ್ಯ ಸಂಪರ್ಕ-ಸಂಬಂಧ ಮತ್ತು ಆರ್ಥಿಕ ಸಂಬಂಧ ಏರ್ಪಡುವಂತೆ ಕ್ರಮವಹಿಸಬೇಕು. ಗಡಿಯಾಚೆಯಿಂದ ಭಯೋತ್ಪಾದಕ ಶಕ್ತಿಗಳು ನುಗ್ಗದಂತೆ ಎಚ್ಚರವಹಿಸಬೇಕು. ಇದಕ್ಕಾಗಿ ಯುಪಿಎ ಸರ್ಕಾರದ ಮೇಲೆ ಒತ್ತಡ ಹೇರಬೇಕು.



ಸ್ವತಂತ್ರ ವಿದೇಶಾಂಗ ನೀತಿ

90 ರ ದಶಕದಲ್ಲಿ ಆರಂಭವಾಗಿ ಎನ್‌ಡಿಎ ಸರ್ಕಾರದ ಅವಧಿಯಲ್ಲಿ ಅಮೆರಿಕದ ಜೂನಿಯರ್ ಪಾರ್ಟನರ್ ಆಗುವ ಅಮೆರಿಕ-ಪರ ವಿದೇಶಾಂಗ ನೀತಿ ಬದಲಾಗಬೇಕು. ಇದು ದೇಶದ ಹಿತಾಸಕ್ತಿಗೂ, ಯುಪಿಎ ಸರ್ಕಾರದ ಅಂಗೀಕೃತ ಕನಿಷ್ಠ ಸಮಾನ ಕಾರ್ಯಕ್ರಮಕ್ಕೆ ಅನುಗುಣವಾಗಿಯೂ ಇಲ್ಲ. ಸ್ವತಂತ್ರ ವಿದೇಶಾಂಗ ನೀತಿ ರೂಪಿಸಲು ಜನಾಭಿಪ್ರಾಯದ ಒತ್ತಡ ಹೇರಬೇಕಾಗಿದೆ. ಅಮೆರಿಕದ 'ಕ್ಷಿಪಣಿ ರಕ್ಷಣಾ ಕಾರ್ಯಕ್ರಮ'ದಲ್ಲಿ ಭಾಗವಹಿಸಲು ಮಾತುಕತೆಗಳನ್ನು ತತ್‌ಕ್ಷಣ ನಿಲ್ಲಿಸಬೇಕು. ಅಮೆರಿಕನ್ನರಿಗೆ ನಮ್ಮ ಸೈನ್ಯದ ಸಿಬ್ಬಂದಿ, ಅಧಿಕಾರಿಗಳ ಜತೆ ಮಿಲಿಟರಿ ಸಹಕಾರ ಕಾರ್ಯಕ್ರಮಗಳನ್ನು ನಿಲ್ಲಿಸಬೇಕು.


ಇರಾಕಿ ಅತಿಕ್ರಮಣ ಮುಂದುವರೆಸುವ ಅಮೆರಿಕದ ಪ್ರಯತ್ನದಲ್ಲಿ ಯಾವುದೇ ರೀತಿಯಲ್ಲಿ ಭಾರತೀಯರು ಭಾಗವಹಿಸದಂತೆ ಯುಪಿಎ ಸರ್ಕಾರ ಕ್ರಮ ಕೈಗೊಳ್ಳಬೇಕು. ಅಮೆರಿಕದ ಕೈಗೊಂಬೆ ಇರಾಕ್ ಸರ್ಕಾರ, ಅಥವಾ ಇತರ ಖಾಸಗಿ ಕಂಪನಿಗಳಲ್ಲಿ ಭಾರತೀಯರು ಕೆಲಸ ಮಾಡುವುದನ್ನು ಸಾಧ್ಯವಾಗದಂತೆ ಕ್ರಮ ಕೈಗೊಳ್ಳಬೇಕಾಗಿದೆ.

ಕ್ಯೂಬಾ, ಉತ್ತರ ಕೊರಿಯಾದಲ್ಲಿ ಹಸ್ತಕ್ಷೇಪ ಬೇಡ!

ಕ್ಯೂಬಾ, ಉತ್ತರ ಕೊರಿಯಾಗಳ ಮೇಲೂ, ಅಮೆರಿಕನ್ ಸಾಮ್ರಾಜ್ಯಶಾಹಿ ಕೆಂಗಣ್ಣು ಕಾರುತ್ತಿದೆ. ಕಿಡಿಗೇಡಿ ಪ್ರಭುತ್ವಗಳ ಪಟ್ಟಿಯಲ್ಲಿ ಇವೆರಡನ್ನೂ ಅಮೆರಿಕದ ಸರ್ಕಾರ ಸೇರಿಸಿದೆ. ಕ್ಯೂಬಾದ ಮೇಲೆ ಆರ್ಥಿಕ ದಿಗ್ಬಂಧನ ಬಿಗಿಗೊಳಿಸುವುದರಲ್ಲಿ ತೊಡಗಿದೆ. ಈ ಆರ್ಥಿಕ ದಿಗ್ಬಂಧನ ನ್ಯಾಯಸಮ್ಮತವಲ್ಲ. ಅದನ್ನು ತೆಗೆಯಬೇಕು - ಎಂಬ ಬಗ್ಗೆಯೂ ವಿಶ್ವಸಂಸ್ಥೆ ನಿರ್ಣಯಿಸಿದೆ. ಅದನ್ನು ಪಾಲಿಸುವ ಬದಲು ಅಮೆರಿಕದ ದಿಗ್ಬಂಧನ ಉತ್ತರ ಕೆನಡಾ, ಯುರೋಪಿಯನ್ ದೇಶಗಳ ಮೇಲೆ ತನ್ನ ಕುಕೃತ್ಯದಲ್ಲಿ ಭಾಗವಹಿಸುವಂತೆ ಒತ್ತಡ ಹೇರುತ್ತಿದೆ. ಅಮೆರಿಕನ್ ಕಾನೂನನ್ನು ಈ ದೇಶದ ಕಂಪನಿಗಳ ಮೇಲೆ ಹೇರುವ ಪ್ರಯತ್ನ ನಡೆಸಿದೆ. ಕ್ಯೂಬಾದ ಮೇಲೆ ಪ್ರಜಾಪ್ರಭುತ್ವ, ಮಾನವ ಹಕ್ಕುಗಳ 'ಉಲ್ಲಂಘನೆ' ಹಸಿಸುಳ್ಳು ಆರೋಪಗಳನ್ನು ಹಾಕುತ್ತಿದೆ. ಕ್ಯೂಬಾದಲ್ಲಿ ಮಿಲಿಟರಿ ಹಸ್ತಕ್ಷೇಪ ಮಾಡುವ ಬಗ್ಗೆ ತೀವ್ರ ತಯಾರಿ ನಡೆದಿದೆ ಎನ್ನಲಾಗಿದೆ. ಉತ್ತರ ಕೊರಿಯಾದ ಮೇಲೆ ಅಣ್ವಸ್ತ್ರಕ್ಕೆ ಬೇಕಾದ ವಸ್ತುಗಳ ಪರೀಕ್ಷಣೆ ವಿಚಾರದಲ್ಲಿ ಅನಗತ್ಯ ವಿವಾದ ಸೃಷ್ಟಿಸಿ ಬೆದರಿಸುತ್ತದೆ. ಇಲ್ಲೂ ಉತ್ತರ ಕೊರಿಯಾ ಅಣ್ವಸ್ತ್ರಗಳ ಉತ್ಪಾದನೆಗೆ ಹೊರಟಿದೆ ಎಂದು ಆಪಾದಿಸಿ, ಆರ್ಥಿಕ - ದಿಗ್ಬಂದನ - ಮಿಲಿಟರಿ ಮಧ್ಯಪ್ರವೇಶಕ್ಕೆ ನೆಪಗಳಿಗೆ ಹುಡುಕುತ್ತಿದೆ. ಕ್ಯೂಬಾ ಹಾಗೂ ಉತ್ತರ ಕೊರಿಯಾದಲ್ಲಿ ಹಸ್ತಕ್ಷೇಪ ನಿಲ್ಲಬೇಕು ಎಂದು ಅಂತರ್ರಾಷ್ಟ್ರೀಯ ಒತ್ತಡ ರೂಪಿಸಬೇಕಾಗಿದೆ.



ಕ್ಯಾಸ್ಟ್ರೋ ಮತ್ತು ಚವೇಝ್



ಕನ್ನಡ ಚಿತ್ರೋದ್ಯಮ :

ಹೀನಾಯ ಸ್ಥಿತಿಗೆ ಯಾರು ಹೊಣೆ ?

ಕಳೆದ ವಾರದಲ್ಲಿ ಕನ್ನಡ ಚಿತ್ರೋದ್ಯಮ ಒಂದು ಬೃಹತ್ ರ‍್ಯಾಲಿ ಸಂಘಟಿಸಿತ್ತು. ಕಾರಣ ಕರ್ನಾಟಕದಲ್ಲಿ ಕನ್ನಡ ಚಿತ್ರಗಳಿಗೆ ನೆಲೆ ಕಾಣಿಸಬೇಕೆಂಬುದು. ಅವರ ಮುಖ್ಯಬೇಡಿಕೆ ಪರಭಾಷಾ ಚಿತ್ರಗಳ ಹಾವಳಿಯಿಂದ ಕನ್ನಡ ಚಿತ್ರಗಳನ್ನು ರಕ್ಷಿಸಬೇಕು. ಆ ಚಿತ್ರಗಳು ಅಲ್ಲಿ ಬಿಡುಗಡೆಯಾದ ಏಳು ವಾರಗಳ ನಂತರ ಇಲ್ಲಿ ತೆರೆಕಾಣಬೇಕೆಂಬುದು ಅವರ ಒತ್ತಾಯ.

ಈ ಬೃಹತ್ ರ‍್ಯಾಲಿಯಲ್ಲಿ ಕನ್ನಡ ಚಿತ್ರರಂಗದ ದಿಗ್ಗಜ ಡಾ. ರಾಜ್ ಮತ್ತವರ ಕುಟುಂಬ ಹಾಗೂ ಇತರ ಪ್ರಮುಖರು ಭಾಗವಹಿಸಿದ್ದರೂ ಉದ್ಯಮದಲ್ಲಿನ ಒಡಕು ಬೀದಿಗೆ ಬಂತು. ಕನ್ನಡ ಚಿತ್ರರಂಗದಲ್ಲಿ ಸಾಕಷ್ಟು ಹಿಡಿತ, ಪ್ರಭಾವ ಹೊಂದಿರುವ ಅಂಬರೀಷ್, ವಿಷ್ಣುವರ್ಧನ್ ಮತ್ತು ಉಪೇಂದ್ರರಂತಹ ಪ್ರಮುಖರು ಇದರಿಂದ ದೂರ ಉಳಿದರು. ಉದ್ಯಮದಲ್ಲಿದ್ದು ರಾಜಕೀಯವಾಗಿಯೂ ಪ್ರಬಲರಾಗಿರುವ ಕುಮಾರಸ್ವಾಮಿ ಯವರೂ ಭಾಗವಹಿಸಲಿಲ್ಲ. ಸಂಸದರಾಗಿರುವ ಅಂಬರೀಷ್ ಅವರು 'ಸರ್ಕಾರದೊಂದಿಗೆ ಮಾತನಾಡಿ ಆನಂತರ ಪ್ರತಿಭಟನೆಯ ಬಗ್ಗೆ ಯೋಚಿಸೋಣ' ಎಂಬ ಸಲಹೆಯನ್ನು ಲೆಕ್ಕಿಸದೆ, ಏಕಪಕ್ಷೀಯವಾಗಿ ರ‍್ಯಾಲಿಯನ್ನು ಸಂಘಟಿಸಿದ್ದು, ಅದಕ್ಕೆ ಬೇರೆಯೇ ಕಾರಣವಿದೆ ಎಂಬ ದೂರಿದೆ.


ವಿಷ್ಣುವರ್ಧನ್

ಡಾ. ರಾಜ್ ಅವರ ಪ್ರಾಬಲ್ಯ ಮತ್ತು ಪ್ರತಿಷ್ಠೆ ಹಾಗೂ ಚಿತ್ರರಂಗದಲ್ಲಿ ಅವರ ಕುಟುಂಬದ ಹಿಡಿತ ಸಡಿಲವಾಗುತ್ತಿರುವ ಹಿನ್ನೆಲೆಯಲ್ಲಿ ಮತ್ತೆ ಅದನ್ನು ಮರಳಿ ಪಡೆಯಲೋಸುಗ, ಅವರ ಶಕ್ತಿ ಪ್ರದರ್ಶನಕ್ಕಾಗಿ ಈ ರ‍್ಯಾಲಿಯನ್ನು ಆಯೋಜಿಸಲಾಗಿತ್ತು ಎಂಬ ಗುಸುಗುಸು ಇದೆ. ಅದಕ್ಕನುಗುಣವಾಗಿ ನಿರ್ಮಾಪಕರ ಸಂಘಧ ಅಧ್ಯಕ್ಷ ಬಸಂತಕುಮಾರ್ ಪಾಟೀಲ್ ಮತ್ತಿತರ ಪ್ರಮುಖರು "ಈ ರ‍್ಯಾಲಿಯಲ್ಲಿ ಭಾಗವಹಿಸದವರು ಕನ್ನಡ ದ್ರೋಹಿಗಳು' ಎಂದು ಚೀರಾಡಿ ಕೊನೆಗೆ ಅವರನ್ನು ಎದುರು ಹಾಕಿಕೊಳ್ಳಲು ಹೆದರಿ, ತಪ್ಪೊಪ್ಪಿಗೆ ಪತ್ರ ಬರೆದುಕೊಟ್ಟ ಪ್ರಹಸನವೂ ನಡೆಯಿತು.

ಇಷ್ಟೆಲ್ಲಾ ಆದ ಮೇಲೆ ಮಾನ್ಯ ಮುಖ್ಯಮಂತ್ರಿ ಧರಂಸಿಂಗ್ ಅವರು ರಾಜ್ ಅವರ ಮನೆಯ ಬಾಗಿಲಿಗೇ ಹೋಗಿ, ಬೇಡಿಕೆಗಳನ್ನು ಪರಿಶೀಲಿಸುವುದಾಗಿ ಭರವಸೆ ನೀಡಿದ್ದೇ ಅಲ್ಲದೇ, ಈಗ ಪರಭಾಷಾ ಚಿತ್ರಗಳು ಇಲ್ಲಿ ಏಳುವಾರಗಳ ನಂತರ ತೆರೆಕಾಣಬೇಕೆಂಬ ಬೇಡಿಕೆಗೆ ಒಪ್ಪಿಗೆ ಸೂಚಿಸಿದ್ದಾರೆ.

ಇನ್ನು ಕನ್ನಡ ಚಿತ್ರಗಳು ಹಣ ಗಳಿಕೆಯಲ್ಲಿ ವಿಫಲವಾಗಲು ಕಾರಣಗಳೇ ಇಲ್ಲ. ಏಕೆಂದರೆ ವಿಫಲತೆ ಕಾರಣವಾದ ಪರಭಾಷಾ ಚಿತ್ರಗಳ ಹಾವಳಿಯನ್ನು ಅವರ ಬೇಡಿಕೆಯಂತೆ ಈಡೇರಿಸಲಾಗಿದೆ. ಆದರೆ ಯಶಸ್ಸು ಕಾಣುತ್ತವೆಯೇ ಎಂಬುದು ಪ್ರಶ್ನೆ. ದುಡ್ಡು ಕೊಟ್ಟು ನೋಡುವ ಪ್ರೇಕ್ಷಕ ತನಗೆ ಒಪ್ಪಿಗೆಯಾಗುವ ಚಿತ್ರವನ್ನು ಮಾತ್ರ ನೋಡುತ್ತಾನೆಯೇ ಹೊರತು ಇವರ ಹೊಲಸು ಚಿತ್ರಗಳನ್ನೆಲ್ಲಾ ನೋಡಬೇಕೆಂದೇನಿಲ್ಲ. ಕನ್ನಡ ಚಿತ್ರಗಳನ್ನೆಲ್ಲಾ ಪ್ರೇಕ್ಷಕ ಯಶಸ್ವಿ ಮಾಡುತ್ತಾನೆಂಬ ನಂಬಿಕೆಯೇನಾದರೂ ಇದ್ದಲ್ಲಿ ಅದು ಉದ್ಯಮದವರ ಭ್ರಮೆ ಅಷ್ಟೇ. ಉತ್ತಮ ಚಿತ್ರಗಳನ್ನು ನೀಡುವ ಮೂಲಕ ಪೈಪೋಟಿ ನೀಡಬೇಕೇ ಹೊರತು, ಬಲವಂತವಾಗಿ ತಮ್ಮ ಚಿತ್ರಗಳನ್ನೇ ನೋಡುವಂತೆ ಪ್ರೇಕ್ಷಕನ ಮೇಲೆ ಹೇರುವುದಲ್ಲ. ಅದು ಸರಿಯಾದದ್ದು ಅಲ್ಲ.


ಅಂಬರೀಷ್

ಉತ್ತಮ ಕನ್ನಡ ಚಿತ್ರಗಳು ಯಶಸ್ವಿಯಾದ ಉದಾಹರಣೆಗಳು ನಮ್ಮ ಮುಂದೆ ಸಾಕಷ್ಟಿವೆ. ಹಾಗೆಯೇ ಕೆಟ್ಟ ಪರಭಾಷಾ ಚಿತ್ರಗಳು, ಅದು ತಮಿಳು, ತೆಲುಗು ಅಥವಾ ಹಿಂದಿಯದ್ದಾಗಿರಲೀ ಅವು ಇಲ್ಲಿ ನೆಲಕಚ್ಚಿವೆ. ಇದನ್ನು ಕನ್ನಡ ನಿರ್ಮಾಪಕರು ಅರ್ಥ ಮಾಡಿಕೊಳ್ಳಬೇಕು. ಹಣ ಮಾಡುವ ಒಂದೇ ಉದ್ದೇಶದಿಂದ ಅತ್ಯಂತ ಕೀಳಭಿರುಚಿಯ, ಹೊಲಸು ಚಿತ್ರಗಳನ್ನು ತೆಗೆದು ಅದನ್ನು ಪ್ರೇಕ್ಷಕರು ಯಶಸ್ಸು ಮಾಡಲೇಬೇಕೆಂದು ಬಯಸುವುದು ಎಷ್ಟು ಸರಿ? ಅಷ್ಟಕ್ಕೂ ಏಳು ವಾರಗಳ ನಂತರ ಬಿಡುಗಡೆಯಾಗುವ ಪರಭಾಷಾ ಚಿತ್ರಗಳು ಕನ್ನಡ ಚಿತ್ರಗಳಿಗೆ ಪೈಪೋಟಿ ನೀಡುವುದಿಲ್ಲವೇ? ಆಗ ಏನು ಮಾಡುತ್ತಾರೆ ಇವರು? ಅದಕ್ಕೆ ಒಂದೇ ಪರಿಹಾರ ಉತ್ತಮ ಚಿತ್ರಗಳ ನಿರ್ಮಾಣದತ್ತ ಗಮನ ಹರಿಸುವುದು. ಎಲ್ಲಾ ಪೈಪೋಟಿಗಳನ್ನು ಮೀರಿ ನಿಲ್ಲುವಂತ ಚಿತ್ರಗಳನ್ನು ನಿರ್ಮಿಸುವ ಕ್ರಿಯಾಶೀಲತೆಯನ್ನು ಮೈಗೂಡಿಸಿಕೊಳ್ಳುವುದನ್ನು ಕಲಿಯಬೇಕು.

ರಿಮೇಕ್ ಚಿತ್ರಗಳ ಬಗ್ಗೆಯೂ ಉದ್ಯಮದಲ್ಲಿ ಸಾಕಷ್ಟು ಗೊಂದಲಗಳಿವೆ. ಕೆಲವರು ಬೇಕೆಂದು, ಮತ್ತೆ ಕೆಲವರು ಬೇಡವೆಂದು ವಾದಿಸುವವರು ಇದ್ದಾರೆ. ರಿಮೇಕ್ ಚಿತ್ರಗಳಿಗೂ ತೆರಿಗೆ ವಿನಾಯಿತಿ ಮತ್ತು ಪ್ರಶಸ್ತಿಗೆ ಆಯ್ಕೆ ಮಾಡುವ ಸಂದರ್ಭದಲ್ಲಿ ಈ ಚಿತ್ರಗಳನ್ನು ಪರಿಗಣಿಸಬೇಕೆಂಬ ವಾದವಿದೆ. ಇದು ಒಪ್ಪುವಂತಹದ್ದಲ್ಲ. ಸ್ವಮೇಕ ಚಿತ್ರಗಳ ನಿರ್ಮಾಣದಲ್ಲಿ ಆಸಕ್ತಿಯಿರುವ ನಾಗತಿಹಳ್ಳಿ ಚಂದ್ರಶೇಖರ್, ಬರಗೂರು ರಾಮಚಂದ್ರಪ್ಪನಂತಹವರ ಬಗ್ಗೆ ರಿಮೇಕ್ ಪರರು ಹೀನಾಯವಾಗಿ ಮಾತನಾಡಿದ್ದೂ ಆಗಿದೆ. ಯಶಸ್ಸು ಕಾಣದಿದ್ದರೂ ಸದಭಿರುಚಿಯ ಸ್ವಂತ ಚಿತ್ರಗಳ ಬಗ್ಗೆ ಕಾಳಜಿಯಿರುವಂತಹ ಇಂತಹವರ ಮೇಲೆ ಧಾಳಿ ಸಲ್ಲದು.

ಸರ್ಕಾರ ಈಗಾಗಲೇ ಕನ್ನಡ ಚಿತ್ರೋದ್ಯಮಕ್ಕೆ ಸಾಕಷ್ಟು ಅನುಕೂಲಗಳನ್ನು ಮಾಡಿಕೊಟ್ಟಿದೆ. ಯಾವಗಲೂ ಭಿಕ್ಷಾ ಪಾತ್ರೆಯನ್ನೊಡ್ಡುವುದು ಸರಿಯಲ್ಲ. ಮಲೆಯಾಳಿ ನಿರ್ದೇಶಕರು ಹೇಳುವಂತೆ 'ಮಲೆಯಾಳಂನಲ್ಲಿ ರಿಮೇಕ್ ಚಿತ್ರ ಮಾಡುವುದಿಲ್ಲವಂತೆ. ಏಕೆಂದರೆ ಹೊಸದೇನಾದರೂ ಇದ್ದಲ್ಲಿ ಅದನ್ನು ತಾವೇ ಮಾಡಬೇಕೆಂಬ ಅಹಂಕಾರವಂತೆ'. ಇಂತಹ ಅಹಂಕಾರ ಕನ್ನಡ ಚಿತ್ರ ನಿರ್ಮಾಪಕರರಿಗೂ ತೀರಾ ಅವಶ್ಯಕ. ನಾಲ್ಕಾರು ಚಿತ್ರಗ್ಳನ್ನು ನೋಡಿ, ಅವೆಲ್ಲವನ್ನೂ ಸೇರಿಸಿ ಒಂದು ಚಿತ್ರಮಾಡುವುದು, ಇನ್ನೊಂದು ಚಿತ್ರವನ್ನು ಯಥಾರೀತಿ ಭಟ್ಟಿ ಇಳಿಸುವುದು.... ಇಂತಹ ರಿಮೇಕ್ ಚಿತ್ರಗಳನ್ನು ಪ್ರಶಸ್ತಿಗೂ ಪರಿಗಣಿಸಬೇಕೆಂಬ ಬೇಡಿಕೆಯೂ ಇದೆ. ಎಲ್ಲವೂ ಇದೇ ಆದರೆ ಕ್ರಿಯಾಶೀಲತೆ, ಸೃಜನಶೀಲತೆಗಳೆಂಬ ಪದಗಳಿಗೆ ಅರ್ಥವೇನು?

■ ನಕುಲ

ಕನಕ ಗೋಪುರ ವಿವಾದ........

ಪುಟ 2 ರಿಂದ

ಶೈಲಿಯಲ್ಲಿಯೇ ನಿರ್ಮಿಸಿದರು. ಹೀಗಾಗಿ ಬಹಳ ಹಿಂದಿನಿಂದಲೂ ಮಠದ ಪರಿಸರದ ಮತ್ತು ಆಸುಪಾಸಿನ ಜನ ಗೋಪುರದ ವಿಚಾರ ವಾಗಿ ಒಂದು ರೀತಿಯ ಭಾವನಾತ್ಮಕ ಸೆಳೆತಕ್ಕೆ ಒಳಗಾಗಿದ್ದರು. ಗೋಪುರವನ್ನು ಕೆಡವಿದ್ದು ಅಂತಹ ಜನರ ಭಾವನೆಗಳಿಗೆ ಪೆಟ್ಟು ಕೊಟ್ಟಂತಾಗಿದೆ. ಇಡೀ ಪ್ರಕರಣದಲ್ಲಿ ಅತ್ಯಂತ ವಿಷಾದಕರವಾಗಿ ಕಾಣಿಸುವುದು ಈ ಒಂದು ಅಂಶ ಮಾತ್ರ. ಇದನ್ನು ಹೊರತಾಗಿ ಗೋಪುರ ಕೆಡವಿದ್ದು ಕುರುಬ ಜನಾಂಗಕ್ಕೆ ಮಾಡಿದ ಅನ್ಯಾಯ ಎಂಬುದರಲ್ಲಿ ಹುರುಳಿಲ್ಲ. ನಿಜವಾಗಿ ಕನಕದಾಸರು ಇಲ್ಲಿನ ಯಾವುದೇ ಒಂದು ನಿರ್ದಿಷ್ಟ ಜನಾಂಗದ ಅಥವಾ ಕೃಷ್ಣ ಮಠದ ಸ್ವತ್ತಲ್ಲ ಎಂಬುದನ್ನು ಮೊದಲು ಎಲ್ಲರೂ ಮನಗಾಣಬೇಕಾಗಿದೆ. ಕನಕದಾಸರ ಬಗೆಗಿನ ಪೇಜಾವರರ ಮಾತು, ಮಠದ ಉಲ್ಲೇಖ, ಏನೇ ಹೇಳಿದರೂ ವಾಸ್ತವವಾಗಿ ಕನಕ ಮಾನವ ಸಮೂಹದ ಪರ ಅತೀವ ಕಾಳಜಿಯುಳ್ಳ ವ್ಯಕ್ತಿಯಾಗಿದ್ದ. 'ಕುಲ-ಕುಲ- ಕುಲವೆಂದು ಹೊಡೆದಾಡದಿರಿ, ನಿಮ್ಮ ಕುಲದ ನೆಲೆಯನೇನಾದರೂ ಬಲ್ಲೀರಾ?' ಎಂದು ಕೇಳುವ ಕನಕ, ಹಿಂದೂ ಸಮಾಜೋತ್ಸವದ ವೇದಿಕೆಯಲ್ಲಿ ಸೊಂಟದ ಮೇಲೆ ಕೈಯಿಟ್ಟು ಕುಳಿತು, ಒಂದು ಕುಲದ ವಿರುದ್ಧವಾಗಿ ಕೆಂಡ ಕಾರುವ ಪೇಜಾವರರರಂತವರಿಗೆ ನುಂಗಲಾರದ ತುತ್ತೇ ಆಗಿದ್ದರೂ, ಕನಕನನ್ನು ಬಿಟ್ಟರೆ ಅಷ್ಟಮಠಗಳ ಅರ್ಥಜಿಜ್ಞಾಸೆಗೆ ಬಲವಾದ ಹೊಡೆತ ಬೀಳುವುದರಿಂದ ಕನಕನ ಮೇಲೆ ಆಷಾಢಭೂತಿ ತನದ ಭಕ್ತಿ ತೋರಿಸಲಾಗುತ್ತಿದೆ. ಬ್ರಾಹ್ಮಣ ಪಾರುಪತ್ಯಗಾರರ ಪಾಲಿಗೆ ಕುರುಬನಾದ ಕನಕನ ಇತಿಹಾಸ ಹೊಂದಿರುವ ಶ್ರೀಕೃಷ್ಣ ಮಠವೆಂಬುದು ಕಲ್ಲೂ ಇರುವ ಮೊಸರು. ಸವಿದೇಬಿಡುತ್ತೇವೆ ಎಂದು ಖಡಾ-ಖಂಡಿತ ಧೈರ್ಯ ತೋರಿಸುವ ಹಾಗಿಲ್ಲ. ಕುರುಬರನ್ನೂ ಒಳಗೊಂಡು ಎಲ್ಲಾ ದಲಿತರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳದೇ ವಿಧಿಯಿಲ್ಲ. ಅದಕ್ಕಾಗಿಯೇ ಹಿಂದೊಮ್ಮೆ ಪೇಜಾವರ ವಿಶ್ವೇಶತೀರ್ಥರು ಹರಿಜನರ ಕೇರಿಗೆ ಹೋಗಿದ್ದು ಮತ್ತು ಅದನ್ನೊಂದು ದೊಡ್ಡ ಸುದ್ದಿಯಾಗಿಸಿದ್ದು.

ಸಂತ ಕನಕ:

ಕನಕ ಗೋಪುರ ವಿವಾದದ ಸುತ್ತ ಎಷ್ಟೇ ಗಿರಕಿ ಕೃಷ್ಣನ ಅಥವಾ ಕನಕನ ಬಗೆಗಿನ ಭಕ್ತಿಯೊಂದನ್ನು ಹೊರತುಪಡಿಸಿ ಎಲ್ಲವೂ ಕಾಣಿಸುತ್ತದೆ. ಎಲ್ಲಕ್ಕೂ ಕಾರಣವಾಗಿ ಮಠಗಳ ಧನದಾಹ ನಿಚ್ಚಳವಾಗಿ ವ್ಯಕ್ತವಾಗುತ್ತದೆ. ಘಟನೆಯ ನಂತರ ನಡೆದ ಶಿಲಾನ್ಯಾಸ ಕಾರ್ಯಕ್ರಮದಲ್ಲಿಯೇ ಹಣದ ಹೊಳೆ ಹರಿದಿದೆ. ಕೇಂದ್ರ ಸಚಿವ ಕೆ.ಎಚ್.ಮುನಿಯಪ್ಪ, ಶಾಸಕರಾದ ಡಾ.ವಿ.ಎಸ್.ಆಚಾರ್ಯ, ಕೆ.ರಘುಪತಿ ಭಟ್ ಇವರೆಲ್ಲ ತಮ್ಮ ಒಂದು ತಿಂಗಳ ಗೌರವ ಸಂಭಾವನೆಯನ್ನೇ ನೀಡುವ ಘೋಷಣೆ ಮಾಡಿದ್ದಾರೆ. ಅವಶ್ಯಕ ಸಿಮೆಂಟು ಕಬ್ಬಿಣಗಳ ಉಚಿತ ವ್ಯವಸ್ಥೆಯೂ ಆಗಿ ಹೋಗಿದೆ. ಒಟ್ಟು 50 ಲಕ್ಷ ವೆಚ್ಚವಾಗುವ ಅಂದಾಜನ್ನು ಮಠಾಧಿಪತಿಗಳು ನೀಡುತ್ತಿದ್ದಾರೆ. ಒಟ್ಟಾರೆ ಕನಕ ಈ ಬಾರಿ ಕೋಟಿಗಳಿಗೆ ಬಿಕರಿಯಾಗಬಹುದು. ಅದೇನೇ ಇದ್ದರೂ ಎಲ್ಲರೂ ಅರಿತುಕೊಳ್ಳಬೇಕಾದ ಸಂಗತಿಯೆಂದರೆ ಕನಕನ ಬಗೆಗಿನ ಗೌರವವನ್ನು ಯಾರೂ ಗೋಪುರದ ಮೇಲೆ, ಕಿಂಡಿಯ ಮೇಲೆ ತೋರಿಸಬೇಕಾಗಿಲ್ಲ. ಕನಕ ಕಾಲಜ್ಞಾನಿ, ಮಹಾನ್ ವ್ಯಕ್ತಿ, ಆತನ ಸಾಹಿತ್ಯದಲ್ಲಿ ಸದ್ವಿಚಾರವಿದೆ. ದಾಸ ಸಾಹಿತ್ಯ ಪರಂಪರೆಯಲ್ಲಿಯೇ ಕನಕದಾಸನ ಕೊಡುಗೆ ಅಪಾರ ನಳ ಚರಿತ್ರೆ, ಮೋಹನ ತರಂಗಿಣಿ, ರಾಮಧಾನ್ಯ ಚರಿತ್ರೆ, ಹರಿಭಕ್ತಿಸಾರ, ನೃಸಿಂಗಸ್ತವ ಎಂಬ ಕೃತಿಗಳನ್ನು ರಚಿಸಿದ ಕನಕ ತನ್ನ ಆಧ್ಯಾತ್ಮಿಕ, ಸಾಮಾಜಿಕ, ವೈಚಾರಿಕ ಪ್ರಜ್ಞೆಗಳಿಂದ- ಮಾನವೀಯ ಮಿಡಿತಗಳಿಂದ ಇಂದಿಗೂ ಪ್ರಸ್ತುತವಾಗಿದ್ದಾನೆ ಉತ್ತಮ ತಾತ್ಪರ್ಯಗಳ ವಿಫುಲ ಸಾಹಿತ್ಯ ಕನಕನದು. ಅವನ್ನೆಲ್ಲಾ ಅರ್ಥೈಸಿಕೊಂಡು ನಡೆಯುವುದು ಕನಕನಿಗೆ ಸಲ್ಲಿಸುವ ಗೌರವವಾಗುತ್ತದೆ. ಅಷ್ಟಮಠಗಳ ಯತಿವರೇಣ್ಯರು ಇದನ್ನೆಷ್ಟು ಅರ್ಥೈಸಿಕೊಂಡಿದ್ದಾರೆ. ಬಾಬರಿ ಮಸೀದಿ ಧ್ವಂಸ ಸಂದರ್ಭ ಖುದ್ದು ಹಾಜರಿದ್ದ ವಿಬುದೇಶ ರಂತವರಿಗೆ (ಆಧಾರ: ಅಯೋಧ್ಯಾ ಕಾರ್ಯಾಚರಣೆ, ಪ್ರಕಟಣೆ: ಜ್ಞಾನಭಾರತಿ ಪ್ರಕಾಶನ) ಕುಲ-ಕುಲ-ಕುಲವೆಂದು ಹೊಡೆದಾಡದಿರಿ ಎಂಬ ಕನಕ ವಾಕ್ಯ ಅರ್ಥವಾದರೂ ರುಚಿಸಲು ಸಾಧ್ಯವೇ? ಕನಕ ಯಾವ ಸಮೂಹದ ಜನರಿಗೂ ನೋವಾಗ ದಂತಹ ಸಾಹಿತ್ಯ ರಚಿಸಿದ್ದಾನೆ. ಒಂದಷ್ಟು ಜನರೊಡನೆ ಭಾವನಾತ್ಮಕ ಸಂಬಂಧ ಹೊಂದಿರುವ ಕನಕ ಗೋಪುರವನ್ನು ಧ್ವಂಸಗೈಯುವುದರ ಮೂಲಕ ಅವರೆಲ್ಲರ ಭಾವನೆಗಳಿಗೆ ಪೆಟ್ಟುಕೊಟ್ಟ ವಿಶ್ವಪ್ರಿಯ ತೀರ್ಥರು ಕನಕನನ್ನು ವ್ಯಾಪಾರೀ ದೃಷ್ಟಿಯಿಂದಲ್ಲದೇ ಅನ್ಯತಾ ಭಾವಿಸಲು, ಗೌರವಿಸಲು ಸಾಧ್ಯವೇ?

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462.
ಮುದ್ರಣ: ಹಸಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor : S.Y.GURUSHANTH